ಫೆಬ್ರವರಿ 16, 2025

40ನೇ ವರ್ಷದಲ್ಲಿ

www.facebook.com/firstcrimenewspaper/

ಸ್ಥಾಪಕ ಸಂಪಾದಕ : ದಿ||ಎಂ. ಮಲ್ಲಿಕಾರ್ಜುನಯ್ಯ

# ಪೊಲೀಸ್ ನ್ಯೂಸ್

1972

ಪರಿಶೋಧನೆ, ಪತ್ತೇದಾರಿಕೆ ಮತ್ತು ರೋಚಕ ಸುದ್ದಿಗಳ ಸಚಿತ್ರ ಕನ್ನಡ ವಾರಪತ್ರಿಕೆ

ಬೆಲೆ : ₹20/-

## ಭೀಮಾತೀರದಲ್ಲಿ ಮತ್ತೆ ರಕ್ತದೋಕುಳಿ....

# ಬಾಗಪ್ಪ ಹರಿಜನ ಬರ್ಬರ ಹತ್ಯೆ!





## ಕೊಲೆ ಹಿಂದೆ ಪಿಂಟ್ಯಾ ಗ್ಯಾಂಗ್!?

## ಹೆಂಡತಿಯನ್ನು ಬಡಿದು ನೀರಿನ ಸಂಪಿಗೆ ಹಾಕಿದ!





## ಕಾಲೇಜಿನ ಆಡಳಿತ ಮಂಡಳಿ ಕಿರುಕುಳಕ್ಕೆ ವಿದ್ಯಾರ್ಥಿನಿ ಬಲಿ!



## ಪತ್ನಿಯ ಮೇಲೆ ಕಣ್ಣಾಕಿದ ಸಹೋದ್ಯೋಗಿಯ ಹತ್ಯೆ!



## ಪ್ರೇಮಿಯ ಜೊತೆ ಹಾಸಿಗೆಯಲ್ಲಿ ಉರುಳಾಡಿ ಯೂಟರ್ನ್!


**ರಾಜಕೀಯವಾಗಿ ಸೋಲನ್ನೇ ಕಾಣದ ಅರವಿಂದ್ ಕೇಜ್ರಿವಾಲ್ ಚುನಾವಣೆಯಲ್ಲಿ ತಾವು ಸೋಲುವುದರೊಂದಿಗೆ ಪಕ್ಷವನ್ನು ಗೆಲ್ಲಿಸಲಾಗದೆ ದೈನೇಶಿ ಸ್ಥಿತಿಗೆ ಬಂದಿದ್ದಾರೆ. ದೆಹಲಿ ಚುನಾವಣೆ ಫಲಿತಾಂಶದ ಬಳಿಕ ರಾಷ್ಟ್ರ ರಾಜಕಾರಣದಲ್ಲಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ದಂಡಯಾತ್ರೆ ಸುಗಮವಾಗಿ ಸಾಗುತ್ತಿರುವ ಲಕ್ಷಣ ಕಾಣಿಸುತ್ತಿದ್ದರೆ, ರಾಷ್ಟ್ರೀಯ ಪಕ್ಷಗಳಿಗೆ ಟಕ್ಕರ್ ಕೊಡಲು ಹೊರಟ ಅರವಿಂದ್ ಕೇಜ್ರಿವಾಲ್ ನೇತೃತ್ವದ ಎಎಪಿ ಮುಗ್ಗರಿಸಿರುವುದು ಗೋಚರಿಸಿದೆ. ಮುಂದೆ ಮತ್ತೆ ಎದ್ದು ನಿಲ್ಲುತ್ತಾರಾ ಕೇಜ್ರಿವಾಲ್? ಹೀಗೊಂದು ಪ್ರಶ್ನೆ ರಾಜಕೀಯ ಪಡಸಾಲೆಯಲ್ಲಿ ಗಿರಕಿ ಹೊಡೆಯುತ್ತಿದೆ.**



# ದೆಹಲಿಯಲ್ಲಿ ಕೇಜ್ರಿವಾಲ್ ಗರ್ವಭಂಗ!

✍ ಬಿ.ಎಂ. ಲವಕುಮಾರ್

ದೆಹಲಿ ವಿಧಾನಸಭಾ ಚುನಾವಣೆಯನ್ನು ಗಮನಿಸಿದರೆ ಕಾಂಗ್ರೆಸ್‌ಗೆ ಏನೇ ತಂತ್ರ ಮಾಡಿದರೂ ಅದು ಫಲಕೊಡುವಂತೆ ಕಾಣಿಸುತ್ತಿಲ್ಲ, ಇದೆಲ್ಲದರ ನಡುವೆ ಗೆದ್ದೇ ಗೆಲ್ಲುತ್ತೇವೆ ಎನ್ನುವ ಬಿಜೆಪಿಯ ಹಠ ಗೆದ್ದಿದೆ, ನಮ್ಮನ್ನು



ಯಾರಿಗೂ ಸೋಲಿಸಲು ಸಾಧ್ಯವಿಲ್ಲ ಎನ್ನುವ ಎಎಪಿಯ ಅಹಂ ಸೋತಿದೆ. ಸಂತೆ ವೇಳೆಗೆ ಮೂರು ಮೊಳ ನೇಯುವ ಕಾಂಗ್ರೆಸ್‌ನ ತಂತ್ರ ವಿಫಲವಾಗಿದೆ. ರಾಜಕೀಯ ನಾಯಕರು ಹೇಳಿದ್ದಕ್ಕೆಲ್ಲ ಶಿಳ್ಳೆ, ಚಪ್ಪಾಳೆ ಹೊಡೆದ ತಕ್ಷಣಕ್ಕೆ ಅದುವೇ ಮತವಾಗಿ ಪರಿವರ್ತನೆಯಾಗಲ್ಲ. ಜತೆಗೆ ಅದನ್ನೇ ಸತ್ಯವೆಂದು ಜನ ನಂಬುತ್ತಾರೆ ಎನ್ನುವುದು ಕೂಡ ಸುಳ್ಳೇ.

ಇವತ್ತಿನ ಮತದಾರರು ವಿದ್ಯಾವಂತರಾಗಿದ್ದಾರೆ, ಬುದ್ದಿವಂತರಾಗಿದ್ದಾರೆ. ಹೀಗಾಗಿ ರಾಜಕಾರಣಿಗಳು ಏನೇ ಮಾಡಿದರೂ ಅದೆಲ್ಲವನ್ನು ಒಪ್ಪಿಕೊಂಡು ಮತ ಹಾಕುವುದಿಲ್ಲ, ಜತೆಗೆ ಅದನ್ನು ವಿಮರ್ಶಿಸಿ ಯಾವುದು ತಪ್ಪು? ಯಾವುದು ಸರಿ? ಎಂಬುದನ್ನು ಅರಿತು ತಮಗೆ ಯಾವುದು ಸರಿ ಅನಿಸುತ್ತದೆಯೋ ಅದನ್ನೇ ಮಾಡುತ್ತಾರೆ ಎಂಬುದು ಈ ಬಾರಿಯ ದೆಹಲಿ ಚುನಾವಣೆ ಮೂಲಕ ಜನ ತೋರಿಸಿಕೊಟ್ಟಿದ್ದಾರೆ. ತಾವು ಏನೇ ಮಾಡಿದರೂ ಮತದಾರರು ನಮ್ಮನ್ನು ಕೈ ಹಿಡಿಯುತ್ತಾರೆ ಎಂಬ ಎಎಪಿ ನಾಯಕರಲ್ಲಿದ್ದ ತಪ್ಪು ಕಲ್ಪನೆಗೆ ಉತ್ತರ ಸಿಕ್ಕಂತಾಗಿದೆ.

ಭ್ರಷ್ಟಾಚಾರವನ್ನು ಜನ ಯಾವತ್ತಿಗೂ ಸಹಿಸಲ್ಲ ಎಂಬುದನ್ನು ಎಎಪಿ ಸಂಸ್ಥಾಪಕ ಅರವಿಂದ್ ಕೇಜ್ರಿವಾಲ್ ಅವರಿಗೆ ಸೋಲುಣಿಸುವ ಮೂಲಕ ತೋರಿಸಿಕೊಟ್ಟಿದ್ದಾರೆ. ಇಲ್ಲಿ ಬಿಜೆಪಿ ಗೆಲುವಿಗೆ ಏನೆಲ್ಲ ಬೇಕೋ ಅದೆಲ್ಲವನ್ನು ಮಾಡಿದೆ. 27 ವರ್ಷಗಳ ಕಾಲ ತಳಮಟ್ಟದಿಂದಲೇ ಪಕ್ಷವನ್ನು ಬಲಪಡಿಸುತ್ತಾ ಬಂದಿದ್ದಾರೆ. ಪ್ರತಿ ಚುನಾವಣೆಯ ಸೋಲನ್ನು ಸವಾಲ್ ಆಗಿ ತೆಗೆದುಕೊಂಡೇ ಪಕ್ಷಸಂಘಟನೆ ಮಾಡಿದ್ದು ಇವತ್ತು ಗೆಲುವಿಗೆ ಕಾರಣವಾಗಿದೆ. ಇಲ್ಲಿ ಜನ ಪ್ರಧಾನಿ ನರೇಂದ್ರ ಮೋದಿಯನ್ನು ಬೆಂಬಲಿಸುತ್ತಲೇ ಬಂದಿದ್ದಾರೆ ಎನ್ನುವುದಕ್ಕೆ ಲೋಕಸಭೆಯಲ್ಲಿ ಎಲ್ಲ ಏಳು ಸ್ಥಾನಗಳನ್ನು ಗೆದ್ದಿರುವುದೇ ಸಾಕ್ಷಿಯಾಗಿದೆ. ಜತೆಗೆ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿಯೂ ಪ್ರಾಬಲ್ಯ ಸಾಧಿಸುತ್ತಿತ್ತು. ಆದರೆ ವಿಧಾನಸಭಾ ಚುನಾವಣೆಯಲ್ಲಿ ಮಾತ್ರ ಗೆಲುವು ಸಾಧಿಸಲು ಸಾಧ್ಯವಾಗಿರಲಿಲ್ಲ, ಇದಕ್ಕೆ ಅರವಿಂದ್ ಕೇಜ್ರಿವಾಲ್ ಮೇಲೆ ಜನರು ಇಟ್ಟಿದ್ದ ಭರವಸೆಯೇ ಕಾರಣವಾಗಿತ್ತು. ಆದರೆ ಕೇಜ್ರಿವಾಲ್ ಮತ್ತು ಅವರ ಸಂಪುಟದ ಸದಸ್ಯರ ನಡೆ ಜನರಲ್ಲಿ ಭ್ರಮನಿರಸನ ಮೂಡಿಸಿತ್ತು. ಅದರ ಪರಿಣಾಮಗಳು ಸೋಲನ್ನು ಎಳೆದು ತರುವಂತಾಯಿತು.

ಭ್ರಷ್ಟಾಚಾರದ ವಿರುದ್ಧ ಜನಸಾಮಾನ್ಯರ ನಡುವೆ ನಿಂತು ಹೋರಾಟ ಮಾಡಿ, ಎಎಪಿ ಪಕ್ಷ ಕಟ್ಟಿ ಬೆಳೆಸಿದ್ದ ಕೇಜ್ರಿವಾಲ್ ಅಧಿಕಾರಕ್ಕೆ ಬಂದ ನಂತರ ಹೋರಾಟವನ್ನು ಮರೆತು ಬಿಟ್ಟರು. ಕೇವಲ ಆರೋಪ ಮಾಡುವುದರಲ್ಲಿಯೇ ಸಮಯ ಕಳೆದು ಬಿಟ್ಟರು. ಉಚಿತ ಯೋಜನೆಗಳನ್ನು ಜಾರಿಗೆ ತಂದರಾದರೂ ಅದರಿಂದ ಯಶಸ್ಸು ಕಾಣಲು ಸಾಧ್ಯವಾಗಲೇ ಇಲ್ಲ. ಜತೆಗೆ ದೆಹಲಿ ಮಟ್ಟದಲ್ಲಿದ್ದ ಎಎಪಿಯನ್ನು ದೆಹಲಿ ಆಚೆಗೂ ಬೆಳೆಸಲು ಮುಂದಾದರು. ಆ ಮೂಲಕ ಪ್ರಧಾನಿ ಹುದ್ದೆಯ ಕನಸು ಕಾಣಲು ಆರಂಭಿಸಿದರು. ಒಬ್ಬ ಹೋರಾಟಗಾರನಾಗಿರಬೇಕು, ಭ್ರಷ್ಟಾಚಾರದ ವಿರುದ್ಧ ಹೋರಾಟ ಮಾಡುತ್ತಿರಬೇಕು, ಅದರಿಂದ ಜನಸಾಮಾನ್ಯರಿಗೆ ಒಳಿತಾಗಬೇಕೆಂದು ಜನ ಬಯಸಿದ್ದರು. ಕಳೆದ ಹತ್ತು ವರ್ಷಗಳಲ್ಲಿ ಕೇಜ್ರಿವಾಲ್ ಸೇರಿದಂತೆ ಎಎಪಿ



ನಾಯಕರು ತಮ್ಮ ಉದ್ದೇಶವನ್ನು ಮರೆತು ಬಿಟ್ಟರು. ಪಕ್ಷವನ್ನು ರಾಷ್ಟ್ರಮಟ್ಟದಲ್ಲಿ ಬೆಳೆಸುವ ಸಲುವಾಗಿ ಸಂಪನ್ಮೂಲ ಕ್ರೋಢೀಕರಿಸಲು ಮುಂದಾದರು. ಅದಕ್ಕಾಗಿ ಮೈಮೇಲೆ ಭ್ರಷ್ಟಾಚಾರದ ಆರೋಪಗಳನ್ನು ಎಳೆದುಕೊಂಡರು. ಜನಸಾಮಾನ್ಯರ ನಡುವೆ ಬರಲೇ ಇಲ್ಲ. ಸರಳತೆ ಗೋಲಿ ಹೊಡೆದು ಐಷಾರಾಮಿ ಬದುಕಿಗೆ ಹೊರಳಿದರು. ಇದರ ನಡುವೆ ಭ್ರಷ್ಟಾಚಾರದ ಆರೋಪ ಹೊತ್ತು ಜೈಲ್ ಸೇರಿದ್ದಲ್ಲದೆ, ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುವ ಮಟ್ಟಕ್ಕೆ ಹೋದರು. ಆರಂಭದಿಂದ ಅವರನ್ನು ಮೆಚ್ಚಿ ಅವರಿಗೆ ಜೈ ಎಂದವರಿಗೆ ಇದು ಆಘಾತ ನೀಡಿತ್ತು.

ಕೇಜ್ರಿವಾಲ್ ಕಳೆದ ಹತ್ತು ವರ್ಷಗಳ ಅವಧಿಯಲ್ಲಿ ಬೇರೆ ಬೇರೆ ರಾಜ್ಯಗಳಿಗೆ ಪಕ್ಷವನ್ನು ವಿಸ್ತರಣೆ ಮಾಡಿದ್ದು, ಪಂಜಾಬ್‌ನಲ್ಲಿ ಕಾಂಗ್ರೆಸ್‌ನ್ನು ಧೂಳಿಪಟ ಮಾಡಿ ಅಧಿಕಾರ ಹಿಡಿಯುವ ಮಟ್ಟಕ್ಕೆ ಹೋಗಿದ್ದು ನಿಜಕ್ಕೂ ಸಾಧನೆಯೇ ಸರಿ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೇನು ಎಂದರೆ ಎಎಪಿ ವಿಸ್ತರಿಸುತ್ತಾ ಹೋದಂತೆಲ್ಲ ಕಾಂಗ್ರೆಸ್ ಅಧಿಕಾರ ಕಳೆದುಕೊಳ್ಳುತ್ತಲೇ ಹೋಯಿತು ಎನ್ನುವುದನ್ನು ಒಪ್ಪಿಕೊಳ್ಳಲೇ ಬೇಕಾಗುತ್ತದೆ. ದೆಹಲಿ ಮತ್ತು ಪಂಜಾಬ್ ಎರಡು ರಾಜ್ಯದಲ್ಲೂ ಎಎಪಿ ಪಕ್ಷ ಕಾಂಗ್ರೆಸ್‌ನಿಂದಲೇ ಅಧಿಕಾರವನ್ನು ಕಿತ್ತುಕೊಂಡಿದ್ದು ಎನ್ನುವುದು ನಮ್ಮ ಮುಂದಿರುವ ಸತ್ಯ.

ಇವತ್ತು ದೆಹಲಿಯಲ್ಲಿ ಬಿಜೆಪಿ 48 ಸ್ಥಾನಗಳನ್ನು ಪಡೆದುಕೊಂಡಿದ್ದರೆ ಅದಕ್ಕೆ ಕಾರಣ ಕಾಂಗ್ರೆಸ್ ಆಗಿದೆ. ಬಹುತೇಕ ಕಡೆಗಳಲ್ಲಿ ಕಾಂಗ್ರೆಸ್ ಎಎಪಿ ಅಭ್ಯರ್ಥಿಯ ಮತವನ್ನು ಕಿತ್ತು ಹಾಕಿದೆ. ಹೀಗಾಗಿ ಬಿಜೆಪಿಗೆ ಸುಲಭ ಜಯವಾಗಿದೆ. ಈ ಚುನಾವಣೆಯ ಬಳಿಕ ಕಾಂಗ್ರೆಸ್ ಮತ್ತು ಎಎಪಿ ಒಂದಾಗಿ ಇಂಡಿ ಕೂಟದಲ್ಲಿ ಮುನ್ನಡೆಯುವುದು ಕಷ್ಟಸಾಧ್ಯವಾಗಿದೆ. ಕಾಂಗ್ರೆಸ್ ಮತ್ತು ಬಿಜೆಪಿ ನೇರವಾಗಿ ಕೇಜ್ರಿವಾಲ್ ಅವರನ್ನೇ ಟಾರ್ಗೆಟ್ ಮಾಡಿದ ಕಾರಣದಿಂದಾಗಿ ಸೋಲು ಕಾಣುವಂತಾಗಿದೆ. ಹೋರಾಟದ ಮೂಲಕ ಮುನ್ನಲೆಗೆ ಬಂದು ಪಕ್ಷ ಕಟ್ಟಿ ಸೋಲಿಲ್ಲದ ಸರದಾರನಂತೆ ವಿಜೃಂಭಿಸಿದ ನಾಯಕ ಇಂತಹ ಸೋಲನ್ನು ಅರಗಿಸಿಕೊಳ್ಳುವುದು ಸುಲಭವೇನಲ್ಲ.

ರಾಜಕೀಯದಲ್ಲಿ ಪ್ರಾದೇಶಿಕ ಪಕ್ಷಗಳು ಒಮ್ಮೆ ಮುಗ್ಗರಿಸಿದರೆ ಮತ್ತೆ ತಲೆ ಎತ್ತುವುದು ಅಷ್ಟೊಂದು ಸುಲಭವಲ್ಲ, ಇದೀಗ ಕೇಜ್ರಿವಾಲ್‌ಗೆ ಅಗ್ನಿಪರೀಕ್ಷೆ ಶುರುವಾಗಿದೆ. ಅದನ್ನು ನಿಭಾಯಿಸಿಕೊಂಡು ಮತ್ತೆ ಹೇಗೆ ಮೇಲೆದ್ದು ನಿಲ್ಲುತ್ತಾರೆ ಎಂಬುದೇ ಮುಖ್ಯವಾಗಿದೆ. ಅಧಿಕಾರ ಕಳೆದುಕೊಂಡ ಮೇಲೆ ಪಕ್ಷವನ್ನು ಕಟ್ಟಿ ಬೆಳೆಸುವುದು ಸುಲಭವಲ್ಲ, ಜನ ಕೂಡ ಅಷ್ಟು ಸುಲಭವಾಗಿ ಮತ್ತೆ ಒಪ್ಪಿಕೊಳ್ಳಲಾರರು. ಆದ್ದರಿಂದ ಮುಂದೆ ಎಎಪಿಯ ಕಥೆ ಏನು? ಎಂಬುದನ್ನು ಕಾದು ನೋಡಬೇಕಾಗಿದೆ. ಹೋರಾಟದ ಮೂಲಕ ಪಕ್ಷ ಕಟ್ಟಿ ಸಿಎಂ ಆಗಿ ಅಧಿಕಾರ ನಡೆಸುವುದು ಸುಲಭವೇನಲ್ಲ ಅದೆಲ್ಲವನ್ನು ಮಾಡುವಲ್ಲಿ ಕೇಜ್ರಿವಾಲ್ ಯಶಸ್ವಿಯಾಗಿದ್ದರು.



ಅವರ ರಾಜಕೀಯ ಇತಿಹಾಸ ಮೆಲುಕು ಹಾಕಿದ್ದೇ ಆದರೆ ಅವರ ಸಾಧನೆ ಅರಿವಾಗುತ್ತದೆ. ಒಂದು ವೇಳೆ ತಮ್ಮ ವ್ಯಕ್ತಿತ್ವ, ಸರಳತೆ, ಹೋರಾಟದ ಮನೋಭಾವ ಉಳಿಸಿಕೊಂಡು ಹೋಗಿದ್ದರೆ ಅವರನ್ನು ಸೋಲಿಸುವುದು ಸುಲಭವಾಗಿ ಉಳಿಯುತ್ತಿರಲಿಲ್ಲ. ಅವರ ಬದುಕಿನ ಬಗ್ಗೆ ಹೇಳುವುದಾದರೆ, ಹರ್ಯಾಣದ ಹಿಸ್ಸಾರ್‌ನಲ್ಲಿ ಎಲೆಕ್ಟ್ರಿಕ್ ಇಂಜಿನಿಯರರಾಗಿದ್ದ ಗೋಬಿಂದ್ ರಣ್ ಕೇಜ್ರಿವಾಲ್ ಹಾಗೂ ಗೀತಾದೇವಿಯವರ ಪುತ್ರ. ಹುಟ್ಟಿದ್ದು ಜೂನ್ 16, 1968. ಅಲ್ಲಿಯೇ ಇದ್ದ ಕ್ಯಾಂಪಸ್ ಶಾಲೆಯಲ್ಲಿ ತಮ್ಮ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣವನ್ನು ಮುಗಿಸಿ ಖರಗ್‌ಪುರದ ಪ್ರತಿಷ್ಠಿತ ಐಐಟಿಯಲ್ಲಿ 1989ರಲ್ಲಿ ಮೆಕ್ಯಾನಿಕಲ್ ಇಂಜಿನಿಯರಿಂಗ್‌ನಲ್ಲಿ ಪದವಿ ಪೂರೈಸಿದರು. ಆ ವರ್ಷವೇ ಟಾಟಾ ಸ್ಟೀಲ್‌ನಲ್ಲಿ ವಾರ್ಷಿಕ 5-8 ಲಕ್ಷ ವರಮಾನದ ನೌಕರಿ ಗಿಟ್ಟಿಸಿದರಾದರೂ 1992ರಲ್ಲಿ ಆ ಕೆಲಸಕ್ಕೆ ವಿದಾಯ ಹೇಳಿ ನಾಗರೀಕ ಸೇವಾ ಪರೀಕ್ಷೆಯಲ್ಲಿ



ಅರ್ಹತೆ ಪಡೆದು 1995ರಲ್ಲಿ ಕಂದಾಯ ಇಲಾಖೆಯ ಕೆಲಸಕ್ಕೆ ಸೇರಿದರು.

ಈ ನಡುವೆ ಕಲ್ಕತ್ತಾದ ಮದರ್ ತೆರೆಸಾರ ಮಿಷನರೀಸ್ ಆಫ್ ಚಾರಿಟಿ, ರಾಮಕೃಷ್ಣ ಮಿಷನ್, ನೆಹರೂ ಯುವ ಕೇಂದ್ರ, ಮತ್ತಿತರ ಸಮಾಜ ಸೇವಾ ಸಂಸ್ಥೆಗಳ ಚಟುವಟಿಕೆಗಳಲ್ಲಿಯೂ ತಮ್ಮನ್ನು ತೊಡಗಿಸಿಕೊಂಡಿದ್ದರು. ಸಮಾಜ ಸೇವೆಯಲ್ಲಿ ತೀವ್ರತರವಾದ ಆಸಕ್ತಿ ಹೊಂದಿದ್ದ ಇವರಿಗೆ ಸರ್ಕಾರಿ ಕಛೇರಿಗಳಲ್ಲಿ ವ್ಯವಹಾರಗಳು ಹಾಗೂ ರಾಜಕಾರಿಣಿಗಳ ಭ್ರಷ್ಟಾಚಾರ ಮಿತಿಮೀರಿದ ಮಟ್ಟದಲ್ಲಿರುವುದನ್ನು ಕಂಡು ಬಂತು. ಇವುಗಳ ವಿರುದ್ಧ ಜನರಲ್ಲಿ ಅರಿವನ್ನು ಮೂಡಿಸುವ ಸಲುವಾಗಿಯೇ 2006ರಲ್ಲಿ ತಾವು ಹೊಂದಿದ್ದ ಆದಾಯ ತೆರಿಗೆ ಇಲಾಖೆಯ ಜಂಟಿ ಆಯುಕ್ತ ಹುದ್ದೆಗೆ ರಾಜೀನಾಮೆ ಸಲ್ಲಿಸಿದರು. ಭ್ರಷ್ಟಾಚಾರದ ವಿರುದ್ಧ ಹೋರಾಡಲೆಂದೇ ದೆಹಲಿ ಮೂಲದ ನಾಗರೀಕರನ್ನೊಳಗೊಂಡ ಪರಿವರ್ತನ ಎಂಬ ಸಂಘವನ್ನು ಹುಟ್ಟು ಹಾಕಿದರು. ಪಾರದರ್ಶಕ ಹಾಗೂ ನ್ಯಾಯಸಮ್ಮತವಾಗಿ ಆಡಳಿತ ನೀಡುವಂತೆ ಸರ್ಕಾರವನ್ನು ಒತ್ತಾಯಿಸುವುದು ಈ ಸಂಘದ ಉದ್ದೇಶವಾಗಿತ್ತು.

2006 ಡಿಸೆಂಬರ್‌ನಲ್ಲಿ ಮನೀಷ್ ಸಿಸೋಡಿಯಾ ಹಾಗೂ ಅಭಿನಂದನ್ ಸೇಖರಿ ಎಂಬುವವರ ಜೊತೆಗೂಡಿ ಪಬ್ಲಿಕ್ ಕಾಸ್ ಫರ್ ರೀಸರ್ಚ್ ಫೌಂಡೇಷನ್ ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ಇಂತಹ ಹಲವು ಹೋರಾಟಗಾರರ ಹೋರಾಟಕ್ಕೆ ಮಣಿದ ಸರ್ಕಾರ 2006ರಲ್ಲಿ ಮಾಹಿತಿ ಹಕ್ಕು ಕಾಯ್ದೆಯನ್ನು ಜಾರಿಗೆ ತಂದಿತು.

ಇದನ್ನು ಸಾಮಾನ್ಯ ಜನರೂ ಸಹ ಪರಿಣಾಮಕಾರಿಯಾಗಿ ಬಳಸಬಹುದೆಂದು ಅರಿತಿದ್ದ ಕೇಜ್ರಿವಾಲ್ ತಂಡ ಭಾರತದಾದ್ಯಂತ ಸಂಚರಿಸಿ ಆರ್‌ಟಿಐನ ಮಹತ್ವವನ್ನು ಜನರಿಗೆ

☞ 12



# ಭೀಮಾತೀರದಲ್ಲಿ ಮತ್ತೆ ರಕ್ತದೋಕುಳಿ ಬಾಗಪ್ಪ ಹರಿಜನ ಬರ್ಬರ ಹತ್ಯೆ!

**ಶಾಂತವಾಗಿದ್ದ ಭೀಮಾತೀರದಲ್ಲಿ ಮತ್ತೆ ರಕ್ತದೋಕುಳಿಯಾಗಿದೆ. ವಿಜಯಪುರದ ಮದೀನಾ ನಗರದಲ್ಲಿ ಭೀಮಾತೀರದ ಹಂತಕ ಬಾಗಪ್ಪ ಹರಿಜನ ಬರ್ಬರ ಹತ್ಯೆಯಾಗಿದೆ. ಮಾರಕಾಸ್ತ್ರಗಳಿಂದ ಬಾಗಪ್ಪನ ತಲೆ, ಕೈಗೆ ಹಲ್ಲೆಗೈದು, ಎಡಗೈ ಮತ್ತು ಮುಂಗೈ ಕತ್ತರಿಸಿ ಸಂಬಂಧಿಕರ ಎದುರೇ ದುಷ್ಕರ್ಮಿಗಳು ಬರ್ಬರವಾಗಿ ಹತ್ಯೆಗೈದಿದ್ದಾರೆ. ಈ ಘಟನೆಯಿಂದ ವಿಜಯಪುರವನ್ನೇ ಬೆಚ್ಚಿಬೀಳಿಸಿದೆ. ಇನ್ನು ಈ ಕೊಲೆಗೆ ಕಾರಣವೇನು?**

**ವಿಜಯಪುರ**
ರಾಜೀವ್ ಭೈರಿ

ಭೀಮಾ ತೀರದ ಕುಖ್ಯಾತ ಹಂತಕ ಚಂದಪ್ಪ ಹರಿಜನ ಸಹಚರ ಹಾಗೂ ಸಹೋದರ ಸಂಬಂಧಿ ಬಾಗಪ್ಪ ಹರಿಜನ್ ಹತ್ಯೆ ಮಾಡಲಾಗಿದೆ. ಮಂಗಳವಾರ ರಾತ್ರಿ 8.50ರ ಸುಮಾರಿಗೆ ವಿಜಯಪುರದ ಮದಿನಾ ನಗರದಲ್ಲಿ ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಲಾಗಿದೆ.

ಈ ಹಿಂದ ಎ2023ರಲ್ಲಿ ವಿಜಯಪುರ ಕೋರ್ಟ್ ಆವರಣದಲ್ಲಿಯೇ ಬಾಗಪ್ಪ ಹರಿಜನ್ ಮೇಲೆ ಗುಂಡಿನ ದಾಳಿಯಾಗಿತ್ತು. ಆದರೆ ಆಗ ಸ್ವಲ್ಪದರಲ್ಲೇ ಬಾಗಪ್ಪ ಬಚಾವ್ ಆಗಿದ್ದ. ಆದರೆ ಈ ಬಾರಿ ಹಂತಕರು ಯೋಜಿತ ರೀತಿಯಲ್ಲಿ ದಾಳಿ ನಡೆಸಿ ಬಾಗಪ್ಪನನ್ನು ಕೊಂದು ಹಾಕಿದ್ದಾರೆ. ವಿಜಯಪುರದ ಮದಿನಾ ನಗರದಲ್ಲಿ ಬಾಡಿಗೆ ಮನಯೆಲ್ಲಿ ವಾಸ ಮಾಡುತ್ತಿದ್ದ ಬಾಗಪ್ಪ ರಾತ್ರಿ 8.50ರ ಸುಮಾರಿಗೆ ಮನೆಯಿಂದ ಹೊರ ಬರುತ್ತಿದ್ದಂತೆ ದುಷ್ಕರ್ಮಿಗಳು ಮಚ್ಚಿನಿಂದ ದಾಳಿ ನಡೆಸಿದ್ದು ಬಳಿಕ



ಸ್ಥಳದಿಂದ ಪರಾರಿಯಾಗಿದ್ದಾರೆ.

ಘಟನಾ ಸ್ಥಳಕ್ಕೆ ಎಸ್ಪಿ ಲಕ್ಷ್ಮಣ ನಿಂಬರಗಿ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಹಂತಕರ ಪತ್ತೆಗಾಗಿ ಎಎಸ್ಪಿ ರಾಮನಗೌಡ ನೇತೃತ್ವದಲ್ಲಿ ವಿಶೇಷ ತಂಡ ರಚನೆ ಮಾಡಲಾಗಿದೆ. ಈ ಹಿಂದೆ ವ್ಯಕ್ತಿಯೊಬ್ಬ ಏಕಾಏಕಿ ಐದು ಸುತ್ತು ಗುಂಡು ಹಾರಿಸಿದ್ದರಿಂದ ಬಾಗಪ್ಪ ಹರಿಜನ ಎದೆಯ ಭಾಗಕ್ಕೆ ಹೊಕ್ಕಿತ್ತು. ಕೂಡಲೇ ಆತನನ್ನು ಬಿಎಲ್‌ಡಿಇ ಆಸ್ಪತ್ರೆಗೆ ದಾಖಲು ಮಾಡಿದ್ದರಿಂದ ಬದುಕುಳಿದಿದ್ದ. ಆದರೆ, ಈಗ ಸುಮಾರು 20 ಜನರಿದ್ದ ತಂಡ ಯೋಜಿತ ರೀತಿಯಲ್ಲಿ ದಾಳಿ ನಡೆಸಿದ್ದು, ಬಾಗಪ್ಪ ಹರಿಜನ್ ಹತ್ಯೆ ಮಾಡುವಲ್ಲಿ ಯಶಸ್ವಿಯಾಗಿದೆ.



ಬಾಗಪ್ಪ ಹರಿಜನ್ ಹತ್ಯೆ ಕುರಿತು ಎಸ್ಪಿ ಲಕ್ಷ್ಮಣ ನಿಂಬರಗಿ ಮಾತನಾಡಿದ್ದು, ಬಾಗಪ್ಪ ಮದೀನಾ ನಗರದ ಬಾಡಿಗೆ ಮನೆಯಲ್ಲಿದ್ದ. ಇದೇ ಜಾಗದಲ್ಲಿ ನಾಲ್ಕೈದು ಜನರಿಂದ ಹತ್ಯೆ ಮಾಡಲಾಗಿದೆ. ಆಟೋದಲ್ಲಿ ಬಂದ ನಾಲ್ಕೈದು ಜನರು ಕೊಡಲಿ ಸೇರಿ ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಿದ್ದಾರೆ. ಊಟ ಮಾಡಿಕೊಂಡು ಮನೆ ಎದುರು ಅಡ್ಡಾಡುತ್ತಿದ್ದ ವೇಳೆ ಕೃತ್ಯ ಎಸಗಲಾಗಿದೆ. ಮಾರಕಾಸ್ತ್ರಗಳಿಂದ ದಾಳಿ ಮಾಡಿದ್ದಲ್ಲದೆ ಬಂದೂಕಿನಿಂದ ಗುಂಡು ಹಾರಿಸಿ ಹತ್ಯೆ ಮಾಡಿದ್ದಾರೆ ಎಂದು ತಿಳಿಸಿದರು.



ಎಸ್ಪಿ ಲಕ್ಷ್ಮಣ ನಿಂಬರಗಿ

**ಕರೆಂಟ್ ಕಟ್ ಮಾಡಿ ಹತ್ಯೆ ?**

ಬಾಗಪ್ಪ ಹತ್ಯೆಗೆ ಎಷ್ಟು ಜನರು ಬಂದಿದ್ದರು ಎಂದು ನಿಖರ ಮಾಹಿತಿ ಇಲ್ಲ ಎಂದು ಎಸ್ಪಿ ತಿಳಿಸಿದ್ದಾರೆ. ಮನೆಯವರು ಕರೆಂಟ್ ಕಟ್ ಮಾಡಿ ಹತ್ಯೆ ಮಾಡಿದ್ದಾಗೇ ಹೇಳುತ್ತಿದ್ದಾರೆ. ಆದರೆ ಈ ಬಗ್ಗೆ ಮಾಹಿತಿ ಇಲ್ಲ ಎಂದು ಎಸ್ಪಿ ತಿಳಿಸಿದ್ದಾರೆ.

ಬಾಗಪ್ಪ ಮೇಲೆ 10 ಕೇಸ್‌ಗಳಿವೆ, ಈ ಪೈಕಿ 6 ಮರ್ಡರ್ ಕೇಸ್ ಇವೆ. 1993ರಿಂದಲೇ ಚಂದಪ್ಪ ಹರಿಜನ್ ಜೊತೆಗಿದ್ದಾಗಲೇ ಬಾಗಪ್ಪನ ಕ್ರಿಮಿನಲ್ ಹಿಸ್ಟರಿ ಶುರುವಾಗಿತ್ತು. 2016-17ರಲ್ಲಿ ಬಾಗಪ್ಪನ ಮಲೆ ಸೆಕ್ಯೂರಿಟಿ ಕೇಸ್ ಹಾಕಲಾಗಿತ್ತು. ಎಲ್ಲ ಆಯಾಮಗಳಲ್ಲಿ ಕಾರ್ಯಾಚರಣೆ ನಡೆಯುತ್ತಿದೆ ಎಂದು ಎಸ್ಪಿ ಮಾಹಿತಿ ನೀಡಿದರು.

**ಯಾರು ಈ ಬಾಗಪ್ಪ ಹರಿಜನ್?**

ಬಾಗಪ್ಪ ಹರಿಜನ್ ಭೀಮಾ ತೀರದ ಕುಖ್ಯಾತ ಹಂತಕ ಚಂದಪ್ಪ ಹರಿಜನ್‌ನ ಶಿಷ್ಯನಾಗಿದ್ದ. ಜೊತೆಗೆ ಆತನ ಸಂಬಂಧಿಕನೂ ಆಗಿದ್ದ. ಭೀಮಾತೀರದ ಹಂತಕರ ಪೈಕಿ ಅತ್ಯಂತ ಶಾರ್ಪ್ ಶೂಟರ್ ಕೂಡ ಆಗಿದ್ದ. 2000 ವರ್ಷದ ಮೇ ತಿಂಗಳಲ್ಲಿ ಚಂದಪ್ಪ ಹರಿಜನ್ ಹತ್ಯೆ ನಂತರ ಭೀಮಾತೀರದಲ್ಲಿ ಬಾಗಪ್ಪ ಹರಿಜನ್ ತನ್ನದೇ ಆದ ಹವಾ ಕ್ರಿಯೇಟ್ ಮಾಡಿದ್ದ.

**ಆಸ್ತಿ ವಿಚಾರಕ್ಕೆ ಸಂಬಂಧಿಸಿದಂತೆ ಗಲಾಟೆ**

ಚಂದಪ್ಪ ಹರಿಜನ್‌ಗೆ ಸೇರಿದ ಆಸ್ತಿ ವಿಚಾರಕ್ಕೆ ಸಂಬಂಧಿಸಿ ಚಂದಪ್ಪನ ಕುಟುಂಬಕ್ಕೂ ಬಾಗಪ್ಪನಿಗೂ ದ್ವೇಷವಿತ್ತು ಎನ್ನಲಾಗಿದೆ. ಅಲ್ಲದೇ ಚಂದಪ್ಪ ಹರಿಜನನ ಸಂಬಂಧಿ ಬಸವರಾಜ್ ಹರಿಜನನ ಹತ್ಯೆ ಪ್ರಕರಣದಲ್ಲೂ ಬಾಗಪ್ಪನ ಹೆಸರು ಕೇಳಿಬಂದಿತ್ತು. ಚಂದಪ್ಪನಿಗೆ ಸೇರಿದ ಒಂದಷ್ಟು ಆಸ್ತಿ ಬಾಗಪ್ಪನ ಕೈಲಿದ್ದುದರಿಂದ ಆತನ ಕುಟುಂಬಕ್ಕೂ ತಕರಾರು ಇತ್ತು. ಹೀಗಾಗಿ ಊರು ಬಿಟ್ಟಿದ್ದ ಚಂದಪ್ಪ ಪುಣೆ, ಮುಂಬೈ ಅಂತ ತಿರುಗಾಡಿಕೊಂಡಿದ್ದ. ಕಲಬುರಗಿ, ಪುಣೆ, ವಿಜಯಪುರ ಸೇರಿ ಹಲವು ಕಡೆಗಳಲ್ಲಿ ಕೇಸು ಎದುರಿಸುತ್ತಿದ್ದ. 1998ರಲ್ಲಿ ಸಿಂದಗಿಯಲ್ಲಿ ಸ್ಟನ್ ಗನ್ ಬಳಸಿ ಗುಂಡು ಹಾರಿಸಿದ್ದ ಪ್ರಕರಣ ಸೇರಿದಂತೆ ಹಲವು ಕೇಸ್‌ಗಳಲ್ಲಿ ಈತನ ಹೆಸರಿದೆ. ಕಳೆದ 2018 ಆಗಸ್ಟ್ 8ರಲ್ಲಿ ಇದೇ ಬಾಗಪ್ಪ ಹರಿಜನ್ ಮೇಲೆ ಫೈರಿಂಗ್ ನಡೆದಿತ್ತು. ಪೀರಪ್ಪ ಹಡಪದ್ ಗುಂಡಿನ ದಾಳಿ ಮಾಡಿದ್ದ. ಈ ಪ್ರಕರಣದಲ್ಲಿ ಮತ್ತೆ ವಿಚಾರಣೆಗೆ ಬಂದಿದ್ದಾಗ ವಿಜಯಪುರದ ಕೋರ್ಟ್ ಆವರಣದಲ್ಲಿ ಗುಂಡಿನ ದಾಳಿ ನಡೆದಿತ್ತು.

**ಶತ್ರು ನಾಶಕ್ಕಾಗಿ ದೇವರ ಪೂಜೆ**

ಬಾಗಪ್ಪ ಹರಜನ್ ಆಲಮೇಲ ಸಮೀಪದ ಬ್ಯಾಡಗಿಹಾಳ ಗ್ರಾಮದವನು. ಇತ್ತೀಚೆಗೆ ಬ್ಯಾಡಗಿಹಾಳದಲ್ಲಿ ಲಕ್ಷ್ಮಿದೇವಿಯ ಗುಡಿ ಕಟ್ಟಿಸಲು 3 ಎಕರೆ ಭೂಮಿ ನೀಡಿದ್ದ. ದೇವರ ಪೂಜೆ, ದೈವಿಕ ಕಾರ್ಯಗಳಲ್ಲಿ ಹೆಚ್ಚು ಮಗ್ನನಾಗಿದ್ದ ಬಾಗಪ್ಪ ಕಳೆದ 6-7 ವರ್ಷಗಳಿಂದ ಕಂಡ ಕಂಡ ದೇವರಿಗೆ ಕೈ ಮುಗಿದು ಪೂಜಿಸುತ್ತಿದ್ದ. ಕೋರ್ಟ್ ಆವರಣದಲ್ಲಿ ಗುಂಡಿನ ದಾಳಿ ನಂತರ ಬಾಗಪ್ಪನಿಗೆ ಭಯ ಹೆಚ್ಚಾಗಿತ್ತು. ಹಲವಾರು ಮಂದಿಯ ಶತ್ರುತ್ವ ಕಟ್ಟಿಕೊಂಡಿದ್ದ ಕಾರಣಕ್ಕೆ ಸಾವಿನ ಭಯ ಕಾಡ್ತಿತ್ತು. ಹೀಗಾಗಿ ಸಾವಿನ ಭಯ ದೂರಾಗಿಸಲು, ಮನಸ್ಸಿನ ಶಾಂತಿಗಾಗಿ ಪೂಜೆ ಮಾಡಿಸುತ್ತಿದ್ದ. ಶತ್ರು ನಾಶಕ್ಕಾಗಿ ಪೂಜೆ ಮಾಡಿದ್ದ ಬಾಗಪ್ಪನೇ ಈಗ ಹತ್ಯೆಯಾಗಿದ್ದಾನೆ. ☯

## ಬಾಗಪ್ಪ ಹರಿಜನನ ಕೊಲೆ ಹಿಂದೆ ಪಿಂಟ್ಯಾ ಅಂಡ್ ಗ್ಯಾಂಗ್!?

ಭೀಮಾತೀರದಲ್ಲಿ ರಕ್ತದೋಕುಳಿ ಹರಿದಿದ್ದು ಸೇಡಿಗೆ ಪ್ರತಿ ಸೇಡಿನಂತೆ ಮದೀನಾ ನಗರದಲ್ಲಿ ಭೀಮಾತೀರದ ಹಂತಕ ಬಾಗಪ್ಪ ಹರಿಜನನನ್ನು ಪ್ರಕಾಶ್ ಅಲಿಯಾಸವ ಪಿಂಟ್ಯಾ ಗ್ಯಾಂಗ್ ಭೀಕರವಾಗಿ ಹತ್ಯೆ ಮಾಡಿದೆ ಎನ್ನಲಾಗಿದೆ.

ಆಟೋದಲ್ಲಿ ಬಂದಿದ್ದ ನಾಲ್ಕೈದು



ದಾಳಿಕೋರರು, ಬಾಗಪ್ಪನ ತಲೆ, ಕೈಗೆ ಹಲ್ಲೆಗೈದು, ಎಡಗೈ ಮತ್ತು ಮುಂಗೈ ಕತ್ತರಿಸಿ ಸಂಬಂಧಿಕರ ಎದುರೇ ದುಷ್ಕರ್ಮಿಗಳು ಬರ್ಬರವಾಗಿ ಹತ್ಯೆಗೈದಿದ್ದಾರೆ. ಊಟ ಮಾಡಿ ವಾಕ್ ಮಾಡುತ್ತಿದ್ದಾಗಲೇ ಬಾಗಪ್ಪನನ್ನು ಕೊಲೆಗೈದು ಪರಾರಿಯಾಗಿರೋ ಹಂತಕರ ಪತ್ತೆಗೆ ಪೊಲೀಸರು ವಿಶೇಷ ತಂಡಗಳನ್ನು ರಚಿಸಿದ್ದಾರೆ.

**ಸೇಡಿಗೆ ಪ್ರತಿ ಸೇಡಾ?**

ವಕೀಲ ರವಿ ಅಗರಖೇಡ್ ಹತ್ಯೆಗೆ ಬಾಗಪ್ಪ ಕೊಲೆ ಮೂಲಕ ಪ್ರತಿಕಾರ ತೀರಿಸಿಕೊಳ್ಳಲಾಗಿದೆ ಎಂಬ ಅನುಮಾನ ಪೊಲೀಸರಲ್ಲಿ ಸುಳಿದಾಡುತ್ತಿದ್ದು, ಆ ದೃಷ್ಟಿಕೋನದಿಂದಲೂ ತನಿಖೆ ನಡೆಸುತ್ತಿದ್ದಾರೆ. ವಕೀಲ ರವಿ ಸಹೋದರ ಪ್ರಕಾಶ್ ಅಲಿಯಾಸ್ ಪಿಂಟ್ಯಾ ಮತ್ತು ಸಹಚರರಿಂದ ಕೃತ್ಯ ನಡೆದಿದೆ ಎಂದು ಬಾಗಪ್ಪ ಪುತ್ರಿ ಗಂಗೂಬಾಯಿ ಗಾಂಧಿಚೌಕ ಠಾಣೆಗೆ ದೂರು ನೀಡಿದ್ದು, ಸದ್ಯ ಪಿಂಟ್ಯಾ ಬಂಧನಕ್ಕೆ ಪೊಲೀಸರು ಬಲೆ ಬೀಸಿದ್ದಾರೆ. ಅಷ್ಟಕ್ಕೂ ಪಿಂಟ್ಯಾ ಹೆಸರು ಇದೇ ಮೊದಲ ಬಾರಿಗೆ ಕೇಳಿಬರುತ್ತಿದ್ದು, ಆತನ ಕ್ರೈಂ ಹಿಸ್ಟರಿ ಬಗ್ಗೆಯೂ ಪೊಲೀಸರು ಕೆದಕಲು ಶುರು ಮಾಡಿದ್ದಾರೆ. ☯



# ಪತ್ನಿಯನ್ನು ಲೈಂಗಿಕ ಕ್ರಿಯೆಗೆ ಪುಸಲಾಯಿಸುತ್ತಿದ್ದ ಸಹೋದ್ಯೋಗಿಯ ಹತ್ಯೆ ಮಾಡಿದ ಗಂಡ ಹಿಟ್ ಅಂಡ್ ರನ್ ಅಪಘಾತದ ನಾಟಕವಾಡಿ ತಗಲಾಕಿಕೊಂಡ ನಾಲ್ವರ ಸೆರೆ!


ಆರೋಪಿ ಶಿವಾನಿ

**ಜಲ್ಲಿಕ್ರಷರ್‌ವೊಂದರಲ್ಲಿ ಕೂಲಿ ಕೆಲಸ ಮಾಡಿಕೊಂಡು ಶೆಡ್‌ಗಳಲ್ಲಿ ವಾಸವಿರುವ ಸಹೋದ್ಯೋಗಿಗಳಲ್ಲಿ ಒಬ್ಬ ತನ್ನ ಊರಿನಲ್ಲಿದ್ದ ಪತ್ನಿಯನ್ನು ಕರೆದುಕೊಂಡು ಬಂದು ವಾಸವಾಗಿದ್ದನು. ಇವರ ಪಕ್ಕದ ಶೆಡ್‌ನಲ್ಲಿ ವಾಸವಿದ್ದ ಪರಿಚಯಸ್ಥನೊಬ್ಬ ಗಂಡ ಕೆಲಸಕ್ಕೆ ಹೋಗಿದ್ದಾಗ ಶೆಡ್‌ಗೆ ಬಂದು, ಆಕೆಯನ್ನು ಲೈಂಗಿಕ ಕ್ರಿಯೆಗೆ ಪುಸಲಾಯಿಸುತ್ತಾ, ದೈಹಿಕವಾಗಿ ಹಿಂಸೆ ನೀಡುತ್ತಿದ್ದ. ಪತ್ನಿಯಿಂದ ವಿಷಯ ಗೊತ್ತಾಗಿ ಕೋಪಗೊಂಡ ಗಂಡ ತನ್ನ ಪತ್ನಿ ಮತ್ತು ಇನ್ನಿಬ್ಬರು ಸಹೋದ್ಯೋಗಿಗಳನ್ನು ಜೊತೆಗೆ ಸೇರಿಸಿಕೊಂಡು, ಕಾಮುಕ ಸಹೋದ್ಯೋಗಿಯನ್ನು ಹತ್ಯೆ ಮಾಡಿ ಮುಳಬಾಗಿಲು ಪೊಲೀಸರ ಕೈಗೆ ತಗಲಾಕೊಂಡು ಜೈಲು ಸೇರಿರುವ ಘಟನೆ ತಾಲ್ಲೂಕಿನ ಮಲ್ಲಸಂದ್ರ ಗ್ರಾಮದ ಬಳಿ ನಡೆದಿದೆ.**


ಪ್ರಮುಖ ಆರೋಪಿ ಕೌಲಾಸ್‌ಪಾಲ್

**ಕೋಲಾರ**

✍ ಕೋಲಾರ ಮಂಜು


**ಕೋ**ಲಾರ ಜಿಲ್ಲೆ ಮುಳಬಾಗಿಲು ತಾಲ್ಲೂಕಿನ ಮಲ್ಲಸಂದ್ರ ಗ್ರಾಮದ ವಾಸಿ ಜೆಡಿಎಸ್ ಮುಖಂಡ ಹಾಗೂ ರಾಜ್ಯ ಹೆದ್ದಾರಿ ಡಂಬರೀಕರಣದ ಗುತ್ತಿಗೆದಾರರಾದ ವೆಂಕಟರಾಮೇಗೌಡರವರು ಗ್ರಾಮದ ಸಮೀಪ ಮುಳಬಾಗಿಲು-ಶ್ರೀನಿವಾಪುರ ಮುಖ್ಯರಸ್ತೆ ಪಕ್ಕದಲ್ಲಿ ಬಿಎಂಸಿ ಗೌಡ ಕನ್‌ಸ್ಟ್ರಕ್ಷನ್ಸ್ ಹೆಸರಿನಲ್ಲಿ ಜಲ್ಲಿಕ್ರಷರ್, ಕಾಂಕ್ರೀಟ್ ಮಿಕ್ಸಿಂಗ್ ಯೂನಿಟನ್ನು ನಡೆಸುತ್ತಿದ್ದಾರೆ. ಜಲ್ಲಿ ಕ್ರಷರ್‌ನ ಆವರಣದಲ್ಲಿಯೇ ನಿರ್ಮಿಸಿರುವ ಶೆಡ್‌ಗಳಲ್ಲಿ ಇವರೆಲ್ಲರು ವಾಸವಿರುತ್ತಾರೆ. ಇಲ್ಲಿ ಸುಮಾರು ವರ್ಷಗಳಿಂದ ಕೆಲಸ ಮಾಡಿಕೊಂಡಿರುವವರಲ್ಲಿ ಉತ್ತರ ಭಾರತದ ಓರಿಸ್ಸಾ, ಬಿಹಾರ್, ಮಧ್ಯಪ್ರದೇಶ, ರಾಜಸ್ಥಾನ್‌ದವರಾಗಿರುತ್ತಾರೆ. ಇವರ ಜೊತೆಗೆ ಸ್ಥಳೀಯರು ಬೆಳಗ್ಗಿನಿಂದ ಸಂಜೆವರೆಗೂ ಕೆಲಸ ಮಾಡಿ ಮನೆಗಳಿಗೆ ಹೊರಟು ಬಿಡುತ್ತಾರೆ. ಶೆಡವಗಳಲ್ಲಿ ವಾಸವಾಗಿರುವವರಲ್ಲಿ ಹೆಂಡತಿ, ಮಕ್ಕಳೊಂದಿಗೆ ಕೆಲವು ಕುಟುಂಬಗಳು ಇದ್ದಾರೆ. ಇನ್ನು ಊರಿನಲ್ಲಿಯೇ ತಮ್ಮ ಸಂಸಾರವನ್ನು ಬಿಟ್ಟು ಬಂದಿರುವವರು ಒಂದು ಶೆಡ್‌ನಲ್ಲಿ 4-5 ಜನ ವಾಸವಾಗಿರುತ್ತಾರೆ. ಇಂಥವರಲ್ಲಿ ಉಮೇಶ್‌ಕುಮಾರ್ ಸಿಂಗ್, ಮುಖೇಶ್‌ಕುಮಾರ್ ಯಾದವ್, ಬಿಕ್ರಮ್‌ಕುಮಾರ್ ಸಿಂಗ್, ಕೈಲಾಸ್‌ಪಾಲ್ ಸೇರಿದಂತೆ ಈ ನಾಲ್ಕು ಜನರು ಒಂದೇ ಶೆಡ್‌ನಲ್ಲಿ ಒಟ್ಟಾಗಿ ಅಡಿಗೆ, ಊಟ ಮಾಡಿಕೊಂಡು ವಾಸವಿರುತ್ತಾರೆ. ಇವರು ವಾಸವಿರುವ ಬಲಬದಿಯ ಶೆಡ್‌ನಲ್ಲಿ ಸುರೇಶ್ ಕುಮಾರ್, ರಮೇಶ್, ಸೋಮಶೇಖರ್ ಮುಂತಾದವರು ವಾಸವಿರುತ್ತಾರೆ. ಕಳೆದ ಆರು ತಿಂಗಳ ಹಿಂದೆ ಉಮೇಶ್ ಕುಮಾರ್ ಸಿಂಗ್‌ರವರ ಪರಿಚಯದ ಮೇಲೆ ಬಿಹಾರದಲ್ಲಿರುವ ಚಿಕ್ಕಪ್ಪ ಗೋಪಾಲ್ ಸಿಂಗ್‌ರವರ ಮಗ ನಿತೀಶ್ ಸಿಂಗ್‌ನನ್ನು ಬಿಎಂಸಿ ಗೌಡ ಜಲ್ಲಿ ಕ್ರಷರ್‌ನಲ್ಲಿ ಹೆಲ್ಪರ್ ಕೆಲಸಕ್ಕೆ ಸೇರಿಕೊಂಡು ಅಣ್ಣ ಉಮೇಶ್‌ಕಮಾರ್ ಶೆಡ್‌ನಲ್ಲಿಯೇ ಇರುತ್ತಾನೆ.



ಕೊಲೆಯಾದ ಉಮೇಶ್‌ಕುಮಾರ್ ಸಿಂಗ್


**ರಸ್ತೆಯಲ್ಲಿ ಉಮೇಶ್ ಸಿಂಗ್‌ನ ಶವ**


ಬಿಹಾರ್ ರಾಜ್ಯದ ಬಾಕ ಜಿಲ್ಲೆಯ ಹಸನ ಗ್ರಾಮದ ವಾಸಿ ಗೋಪಾಲ್‌ಸಿಂಗವರವರ ಮಗ ನಿತೀಶ್ ಸಿಂಗ್ (19)ರವರು 2025 ಜನವರಿ 25ರಂದು ಶನಿವಾರ ರಾತ್ರಿ 1 ಗಂಟೆ ಸಮಯದಲ್ಲಿ ಮುಳಬಾಗಿಲು ಗ್ರಾಮಾಂತರ ಪೊಲೀಸ್ ಠಾಣೆಗೆ ಹಾಜರಾಗಿ ಬಿಎಂಸಿ ಗೌಡ ಜಲ್ಲಿ ಕ್ರಷರ್‌ನಲ್ಲಿ ಕೆಲಸ ಮಾಡುವ ನಾವೆಲ್ಲರೂ ಒಂದೇ ಕುಟುಂಬದವರಂತೆ ಕೆಲಸ ಮಾಡುತ್ತಾ ಶೆಡ್‌ಗಳಲ್ಲಿ ವಾಸವಿದ್ದೆವು. ಬಿಹಾರ ರಾಜ್ಯದ ಬಾಕ ಜಿಲ್ಲೆಯ ಬಂದ್ವಾಕುರವ ಠಾಣೆಗೆ ಸೇರಿರುವ ಮಣಿಯಾರ್ಪುರ್ ಅಂಚೆ, ಹಸನ ಗ್ರಾಮದ ವಾಸಿ ಲೇಟ್ ಚುಂಚುಸಿಂಗ್‌ರವರ ಮಗ ಉಮೇಶ್‌ಕುಮಾರ್ ಸಿಂಗ್ (38) ನಮ್ಮ ದೊಡ್ಡಪ್ಪನ ಮಗನಿಗೆ ಪರಿಚಯಸ್ಥರಾದ ಓರಿಸ್ಸಾ ರಾಜ್ಯದ ಮಯಾರ್ಬಾನ್ಸ್ ಜಿಲ್ಲೆಯ ಪೂವ ಪೋಕಾ ಗ್ರಾಮದ ವಾಸಿ ಹೇಮಚಂದ್‌ಪಾಲ್‌ರವರ ಮಗ ಕೌಲಾಸ್‌ಪಾಲ್ ಅಲಿಯಾಸ್ ಕೈಲಾಸ್ ಪಾಲ್ (35)ರವರು ಜನವರಿ 14ರಂದು ತಮ್ಮ ಪತ್ನಿ ಶಿವಾನಿ ಅಲಿಯಾಸ್ ಮಿನಿಪಾಲ್ (22)ರವರನ್ನು ಊರಿನಿಂದ ಕರೆದುಕೊಂಡು ಬಂದು ನಮ್ಮ ಶೆಡ್‌ನ ಎಡಭಾಗದ ಶೆಡ್‌ನಲ್ಲಿ ವಾಸವಾಗಿದ್ದರು. ಉಮೇಶ್‌ಕುಮಾರ್ ಸಿಂಗ್‌ರವರಿಗೆ ಕೌಲಾಸ್‌ಪಾಲ್‌ರವರು ಪರಿಚಯ ಇದ್ದಿದ್ದರಿಂದ ಅವರ ಮನೆಗೆ ಹೋಗಿ ಬರುತ್ತಿದ್ದರು. ಆಗ ಕೌಲಾಸ್‌ಪಾಲ್‌ರವರ ಪತ್ನಿ ಶಿವಾನಿಯನ್ನು ಪರಿಚಯ ಮಾಡಿಕೊಂಡು ಆಗಾಗ ಅವರ ಮನೆಗೆ ಹೋಗಿ ಅಡಿಗೆಗೆ ಬೇಕಾದ ಬೇಳೆ, ತರಕಾರಿಯ ಹೆಸರು ಹೇಳಿಕೊಂಡು ಹೋಗಿ ಬರುವಾಗ ಅವರ ಜೊತೆ ಸಲಿಗೆ ಬೆಳೆಸಿಕೊಂಡ ಉಮೇಶ್‌ಕುಮಾರ್ ಸಿಂಗ್, ಶಿವಾನಿಯ ಗಂಡ ಕೌಲಾಸ್‌ಪಾಲ್ ಮನೆಯಿಂದ ಕೆಲಸಕ್ಕೆ ಅಥವಾ ಮುಳಬಾಗಿಲು ಕಡೆಗೆ ಹೋಗುವುದನ್ನು ಕಾಯುತ್ತಿದ್ದವನು ಶಿವಾನಿಯ ಮನೆ ಸೇರಿಕೊಳ್ಳುತ್ತಿದ್ದನು. ಒಂಟಿಯಾಗಿರುತ್ತಿದ್ದ ಶಿವಾನಿಯ ಬಳಿ ಪ್ರೀತಿಯ ಮಾತುಗಳನ್ನಾಡುತ್ತಾ ಲೈಂಗಿಕ ಕ್ರಿಯೆಗೆ ಪುಸಲಾಯಿಸುತ್ತಿದ್ದನು. ಈ ವಿಚಾರವನ್ನು ಗಂಡನಿಗೆ ಹೇಳಿ ಕಣ್ಣೀರಿಟ್ಟಳು. ಆಗ ಕೌಲಾಸ್‌ಪಾಲ್, ಉಮೇಶ್ ಕುಮಾರ್ ಸಿಂಗ್ ಬಳಿ ನನ್ನ ಹೆಂಡತಿಯೊಂದಿಗೆ ಅನೈತಿಕ ಸಂಬಂಧವನ್ನು ಇಟ್ಟುಕೊಂಡಿದ್ದೀಯಾ ಎಂದು ಹೇಳಿ ಆತನ ಮೇಲೆ ಜಗಳ ತೆಗೆದು ಹಲ್ಲೆ ಮಾಡಲು ಮುಂದಾದನು. ಆಗ ಅಕ್ಕಪಕ್ಕದ ಶೆಡ್‌ನಲ್ಲಿರುವ ನಾವುಗಳೆಲ್ಲ ಸೇರಿಕೊಂಡು ಜಗಳ ಬಿಡಿಸಿ ಇಬ್ಬರಿಗೂ ಸಮಾಧಾನ ಮಾಡಿದ್ದೆವು. ಜನವರಿ 23ರಂದು ರಾತ್ರಿ 8 ಗಂಟೆ ಸಮಯದಲ್ಲಿ ಉಮೇಶ್‌ಕುಮಾರ್ ಸಿಂಗ್ ಮತ್ತು ಕೌಲಾಸ್‌ಪಾಲ್ ಇಬ್ಬರು ಇದೇ ವಿಚಾರದಲ್ಲಿ ಜಗಳ ಮಾಡಿಕೊಂಡಿದ್ದರು. ನಾವೆಲ್ಲ ಸೇರಿಕೊಂಡು ಮತ್ತೆ ಮತ್ತೆ ಯಾಕೆ ಜಗಳ ಮಾಡಿಕೊಳ್ಳುತ್ತೀರೆಂದು ಇಬ್ಬರಿಗೂ ಬುದ್ಧಿ ಹೇಳಿದ್ದೆವು. ಈ ವಿಚಾರ ಜಲ್ಲಿ ಕ್ರಷರ್‌ನಲ್ಲಿ ಕೆಲಸಗಾರರಿಗೆ ಮತ್ತು ಮಾಲೀಕರಿಗೆ ಸಹ ತಿಳಿದಿರುತ್ತದೆ. ನಂತರ ಜನವರಿ 24ರಂದು ರಾತ್ರಿ ಸುಮಾರು 7 ಗಂಟೆ ಸಮಯದಲ್ಲಿ ನಾನು ಮುಖೇಶ್‌ಕುಮಾರ್ ಯಾದವ್ ಶೆಡ್‌ನಲ್ಲಿ ಊಟ ಮಾಡುತ್ತಾ ಕುಳಿತಿದ್ದೆವು. ಅಲ್ಲಿಯೇ ಮುಂದೆ ಇದ್ದ ಲಾರಿಯಲ್ಲಿ ಉಮೇಶ್‌ಕುಮಾರ್ ಸಿಂಗ್ ಮತ್ತು ಬಿಕ್ರಮ್ ಸಿಂಗ್ ಊಟ ಮಾಡಲು ಕುಳಿತಿದ್ದರು. ಆಗ ಕೌಲಾಸ್‌ಪಾಲ್‌ರವರು ಉಮೇಶ್‌ಕುಮಾರ್ ಸಿಂಗ್‌ರವರಿಗೆ 3-4 ಬಾರಿ ಫೋನ್ ಮಾಡಿದ್ದು ಆದರೆ ಉಮೇಶ್‌ಕುಮಾರ್ ಸಿಂಗ್ ಫೋನ್ ತೆಗೆಯದೆ ಊಟ ಮಾಡುತ್ತಿದ್ದರು. ಸ್ವಲ್ಪ ಸಮಯದ ನಂತರ ಕೌಲಾಸ್‌ಪಾಲ್‌ರವರ ಹೆಂಡತಿ ಶಿವಾನಿರವರು ಲಾರಿ ಬಳಿಗೆ ಬಂದು ನಿಂತುಕೊಂಡಳು. ಆಗ ಉಮೇಶ್‌ಕುಮಾರ್‌ಸಿಂಗ್, ಬಿಕ್ರಮ್ ಸಿಂಗ್‌ಗೆ ತನ್ನನ್ನು ಕರೆದುಕೊಂಡು ಹೋಗಲು ಬಂದಿದ್ದಾಳೆಂದು ಹೇಳಿದರು. ಆಗ ಬಿಕ್ರಮ್‌ಕುಮಾರ್ ಸಿಂಗ್ ಊಟ ತಿಂದು ಹೋಗು ಎಂದರು. ಅದಕ್ಕೆ ಉಮೇಶ್‌ಕುಮಾರ್ ಸಿಂಗ್ ಎರಡು ನಿಮಿಷದಲ್ಲಿ ಕೆಲಸ ಮುಗಿಸಿಕೊಂಡು ಬರುವುದಾಗಿ ಹೇಳಿ ಶಿವಾನಿ ಜೊತೆ ಅವರ ಶೆಡ್ ಕಡೆ ಹೋದರು. ಸ್ವಲ್ಪ ಸಮಯದ ನಂತರ ಪಕ್ಕದ ಶೆಡ್‌ನಲ್ಲಿದ್ದ ಸತ್ಯಂ ಮತ್ತು ಸುರೇಶ್‌ಕುಮಾರ್‌ರವರು ಬಂದು ನಮಗೆ ತಿಳಿಸಿದ್ದೇನೆಂದರೆ ಕೌಲಾಸ್‌ಪಾಲ್‌ರವರ ಮನೆಯಿಂದ ಉಮೇಶ್‌ಕುಮಾರ್ ಸಿಂಗ್‌ರವರ ಕಿರುಚಾಟದ ಶಬ್ದ ಕೇಳಿ ಬರುತ್ತಿತ್ತೆಂದು ತಿಳಿಸಿದರು. ನಂತರ ನಾವೆಲ್ಲರು ಕೌಲಾಸ್‌ಪಾಲ್‌ರವರ ಶೆಡ್ ಬಳಿಗೆ ಹೋಗಿ ನೋಡಲಾಗಿ ಉಮೇಶ್‌ಕುಮಾರ್ ಸಿಂಗ್ ಅಲ್ಲಿ ಇರಲಿಲ್ಲ. ಹೊರಗಡೆ ಎಲ್ಲಿಗೋ ಹೋಗಿರುತ್ತಾನೆಂದು ವಾಪಸ್ಸು ಬಂದು ರೂಮಿನಲ್ಲಿದ್ದೆವು. ರಾತ್ರಿ ಸುಮಾರು 9 ಗಂಟೆ ಸಮಯದಲ್ಲಿ

☞ 5


ಎಸ್ಪಿ ಬಿ. ನಿಖಿಲ್


ಡಿವೈಎಸ್ಪಿ ನಂದಕುಮಾರ್


ಸಿಪಿಐ ಎನ್. ರಾಜಣ್ಣ


ಶವದ ಮಹಜರ್ ನಡೆಸುತ್ತಿರುವ ಪೊಲೀಸರು

4 ☜

ಶಂಕರ್ ಮಂಡಲ್‌ರವರ ಮಗ ಸುರೇಶ್‌ಕುಮಾರ್ ರವರು ನಮ್ಮ ಶೆಡ್ ಬಳಿಗೆ ಬಂದು ಮಾಲೀಕರ ತಮ್ಮನಾದ ನಾರಾಯಣಗೌಡರ ಮೊಬೈಲ್‌ನಿಂದ ತನ್ನ ಮೊಬೈಲ್‌ಗೆ ಫೋನ್ ಮಾಡಿ ಜಲ್ಲಿ ಕ್ರಷರ್ ಮುಂದಿರುವ ಎನ್‌ಹೆಚ್ 234 ರಸ್ತೆ ಪಕ್ಕದಲ್ಲಿ ಉಮೇಶ್‌ಕುಮಾರ್ ಸಿಂಗ್ ಸತ್ತು ಬಿದ್ದಿರುವುದಾಗಿ ತಿಳಿಸಿದರು. ಕೂಡಲೇ ನಾವೆಲ್ಲರು ಸದರಿ ಸ್ಥಳಕ್ಕೆ ಹೋಗಿ ನೋಡಲಾಗಿ ಉಮೇಶ್‌ಕುಮಾರ್ ಸಿಂಗ್‌ನ ತಲೆಗೆ ಗಾಯವಾಗಿ ಮೆದುಳು ಹೊರಗಡೆ ಬಂದು ಸತ್ತು ಹೋಗಿರುತ್ತಾರೆ.

ಈ ಕೃತ್ಯವನ್ನು ಎಸಗಿ ಪರಾರಿಯಾಗಿರುವ ಆರೋಪಿಗಳ ಬಗ್ಗೆ ಸೂಕ್ತ ಕಾನೂನು ಕ್ರಮ ಜರುಗಿಸುವಂತೆ ನೀಡಿರುವ ದೂರಿನ ಮೇರೆಗೆ ಪಿಎಸ್‌ಐ ವಿಠಲ್ ವೈ.


ಪಿಎಸ್‌ಐ ವಿಠಲ್ ವೈ..ತಳವಾರ್


ಪಿಎಸ್‌ಐ ಎಲ್. ಮಮತಾ

ತಳವಾರ್ ಠಾಣೆಯ ಮೊ.ಸಂ. 23/2025 ಕಲಂ 103(1) 238(ಎ) 3 ಬಿಎನ್‌ಎಸ್-2023 ರೀತ್ಯಾ ಪ್ರಕರಣವನ್ನು ದಾಖಲಿಸಿಕೊಂಡರು. ಸ್ಥಳಕ್ಕೆ ಎಸ್ಪಿ ಬಿ. ನಿಖಿಲ್, ಎಎಸ್ಪಿಗಳಾದ ರವಿಶಂಕರ್, ಜಗದೀಶ್, ಡಿವೈಎಸ್ಪಿ ನಂದಕುಮಾರ್, ನಗರ ಪೊಲೀಸ್ ಠಾಣೆಯ ಪಿಐ ರಾಜಣ್ಣ, ಸಿಬ್ಬಂದಿ ವರ್ಗ, ಶ್ವಾನದಳ, ಬೆರಳಚ್ಚು ತಜ್ಞರು ಆಗಮಿಸಿ ಪರಿಶೀಲಿಸಿದ ನಂತರ ಗ್ರಾಮದ ಪಂಚರ ಸಮಕ್ಷಮದಲ್ಲಿ ಮಹಜರ್ ನಡೆಸಿದ ಮೇಲೆ ಮೃತದೇಹವನ್ನು ಮುಳಬಾಗಿಲು ಸರ್ಕಾರಿ ಆಸ್ಪತ್ರೆಯ ಶವಗಾರಕ್ಕೆ ಸಾಗಿಸಲಾಯಿತು. ಅಲ್ಲಿ ಮರುದಿನ ಬೆಳಿಗ್ಗೆ ಆಸ್ಪತ್ರೆಯ ವೈದ್ಯಾಧಿಕಾರಿಗಳಿಂದ ಮೃತದೇಹದ ಪರೀಕ್ಷೆ ನಡೆಸಿದ ನಂತರ ಶವವನ್ನು ವಾರಸುದಾರರಿಗೆ ನೀಡಲಾಯಿತು.

### ಲೈಂಗಿಕ ಕಿರುಕುಳಕ್ಕೆ ಬೇಸತ್ತು ಕೊಲೆ

ಜಲ್ಲಿ ಕ್ರಷರ್‌ನಲ್ಲಿ ಕೂಲಿ ಕೆಲಸ ಮಾಡುತ್ತಿದ್ದ ಉಮೇಶ್‌ಕುಮಾರ್ ಸಿಂಗ್‌ನನ್ನು ಜೊತೆಯಲ್ಲಿರುವವರೇ ಯಾವುದೋ ವಿಚಾರಕ್ಕೆ ಕೊಲೆ ಮಾಡಿ ಅಪಘಾತದಿಂದ ಮೃತಪಟ್ಟಿರುವಂತೆ ಬಿಂಬಿಸಲು ಶವವನ್ನು ಘಟನಾ ಸ್ಥಳದಿಂದ ತಂದು ರಸ್ತೆಗೆ ಎಸೆದು ಎಲ್ಲರೊಂದಿಗೆ ಇರುವ ಕೊಲೆಪಾತಕರು ಯಾರೆಂದು ಪತ್ತೆಹಚ್ಚಿ ಅವರ ಮೇಲೆ ಕಾನೂನು ಜರುಗಿಸಲು ಎಸ್ಪಿ ಬಿ. ನಿಖಿಲ್, ಡಿವೈಎಸ್ಪಿ ನಂದಕುಮಾರ್‌ರವರ ಮಾರ್ಗದರ್ಶನದಲ್ಲಿ ಗ್ರಾಮಾಂತರ ಪೊಲೀಸ್ ಠಾಣೆಯ ಪ್ರಭಾರಿಯಾಗಿರುವ ನಗರ ಠಾಣೆಯ ಪಿಐ ರಾಜಣ್ಣನವರ ನೇತೃತ್ವದಲ್ಲಿ ಪಿಎಸ್‌ಐಗಳಾದ ವಿಠಲ್ ವೈ. ತಳವಾರ್, ಎಲ್. ಮಮತಾ, ಸಿಬ್ಬಂದಿ ವರ್ಗದವರಾದ ಸುರೇಶ್, ಮಂಜುನಾಥ ರೆಡ್ಡಿ, ರವೀಂದ್ರ, ಆನಂದ್, ಮಂಜುನಾಥ್, ರಾಕೇಶ್, ಸಿದ್ದಣ್ಣ, ಗಂಜ್ಯಾಳ್, ರಘುಪತಿ ರೆಡ್ಡಿ, ಮಹಿಳಾ ಪಿಸಿ ನಳಿನಿ ಮುಂತಾದವರ ತಂಡವನ್ನು ರಚಿಸಲಾಗಿದ್ದು, ಮೊದಲಿಗೆ ಕ್ರೈಂ ತಂಡವು ಜಲ್ಲಿ ಕ್ರಷರ್ ಬಳಿಗೆ ಬಂದು ಇಲ್ಲಿ ವಾಸವಿರುವ ಸತ್ಯಂ ಮತ್ತು ಸುರೇಶ್‌ಕುಮಾರ್ ರವರನ್ನು ವಿಚಾರಣೆ ಮಾಡಲಾಗಿ ಕೌಲಾಸ್ ಮನೆಯಿಂದ ಉಮೇಶ್‌ಕುಮಾರ್ ಸಿಂಗ್‌ರವರ ಕಿರುಚಾಟದ ಶಬ್ದ ಕೇಳಿ ಬಂದಿದ್ದು, ಕೌಲಾಸ್‌ಪಾಲ್‌ರವರ ಪತ್ನಿ ಶಿವಾನಿಯವರ ಜೊತೆ ಉಮೇಶ್‌ಕುಮಾರ್ ಸಿಂಗ್‌ರವರು ಅನೈತಿಕ ಸಂಬಂಧ ಇಟ್ಟುಕೊಂಡಿರುವ ಬಗ್ಗೆ ಕೌಲಾಸ್‌ಪಾಲ್‌ರವರೇ ಸ್ವತಃ ಸಹ ಕೆಲಸಗಾರರ ಬಳಿ ಹೇಳಿಕೊಂಡಿದ್ದರು.

ಉಮೇಶ್‌ಕುಮಾರ್ ಸಿಂಗ್‌ರವರು ಶಿವಾನಿಗೆ ನೀಡುತ್ತಿದ್ದ ಕಿರುಕುಳದಿಂದ ಬೇಸತ್ತು ಹೆಂಡತಿ ಮೂಲಕ ಶೆಡ್‌ಗೆ ಕರೆಸಿಕೊಂಡು ಸಾಯಿಸಿ ಮೃತದೇಹವನ್ನು ತೆಗೆದುಕೊಂಡು ಹೋಗಿ ರಸ್ತೆಯಲ್ಲಿ ಹಾಕಿ ಅಪಘಾತವೆಂದು ಬಿಂಬಿಸಿರುವಂತೆ ಕಾಣುತ್ತಿದೆ ಎಂದು ಹೇಳಿದರು. ಇವರು ಕೊಟ್ಟ ಹೇಳಿಕೆ ಆಧಾರದ ಮೇಲೆ ಕ್ರಮ ಕೈಗೊಂಡಿದ್ದು, ಪೊಲೀಸ್ ಬಾತ್ಮೀದಾರರು ನೀಡಿದ ಸುಳಿವಿನ ಮೇರೆಗೆ ಜನವರಿ 25ರಂದು ರಾತ್ರಿ 7 ಗಂಟೆ ಸಮಯದಲ್ಲಿ ತಾಲ್ಲೂಕಿನ ಮುಡಿಯನೂರು ಗೇಟ್‌ನ ಕ್ರಾಸ್ ಬಳಿ ಓರಿಸ್ಸಾ ರಾಜ್ಯದ ಮೈರ್‌ಭಂಜ್ ಜಿಲ್ಲೆಯ ಪಕ್‌ಪೋಕ ಗ್ರಾಮದ ವಾಸಿ ಹೇಮ್‌ಚಂದ್‌ಪಾಲ್‌ರವರ ಮಗ ಕೌಲಾಸ್‌ಪಾಲ್ (35) ಹಾಗೂ ಇವರ ಪತ್ನಿ ಶಿವಾನಿ ಅಲಿಯಾಸ್ ಮಿನಿಪಾಲ್ ಉರುಫ್ ಶಿಬಾನಿ ಬೆಹರಾ (22) ಇದೇ ದಿನ ರಾತ್ರಿ 11 ಗಂಟೆ ಸಮಯದಲ್ಲಿ ಬಿಎಂಸಿ ಜಲ್ಲಿ ಕ್ರಷರ್‌ನ ಶೆಡ್‌ನಲ್ಲಿದ್ದ ಕಲಬುರ್ಗಿ ಜಿಲ್ಲೆ ಜೇವರ್ಗಿ ತಾಲ್ಲೂಕಿನ ಕಲ್ಲೂರ ಗ್ರಾಮದ ವಾಸಿ ಗೋಣೆಪ್ಪನ ಮಗ ಕ್ರಷರ್‌ನಲ್ಲಿ ಮಿಷನರಿ ಆಪರೇಟರ್ ಆಗಿ ಕೆಲಸ ಮಾಡುತ್ತಿರುವ ರಮೇಶ್ (38) ಹಾಗೂ ಇದೇ ಗ್ರಾಮದ ವಾಸಿ ಗುರುಬಸಪ್ಪನ ಮಗ ಕ್ರಷರ್‌ನಲ್ಲಿ ಕೂಲಿ ಕೆಲಸ ಮಾಡುವ ಸೋಮಶೇಖರ್ (33)ರವರನ್ನು ಬಂಧಿಸಿ ಪೊಲೀಸ್ ಠಾಣೆಗೆ ಕರೆದುಕೊಂಡು ಬಂದು ವಿಚಾರಣೆಗೆ ಒಳಪಡಿಸಲಾಗಿ ಮೊದಲಿಗೆ ಕೌಲಾಸ್‌ಪಾಲ್ ನೀಡಿದ ಹೇಳಿಕೆಯಲ್ಲಿ ಉಮೇಶ್‌ಕುಮಾರ್ ಸಿಂಗ್ ಮತ್ತು ನಾನು ಒಟ್ಟಿಗೆ ಒಂದೇ ಶೆಡ್‌ನಲ್ಲಿ ವಾಸವಿದ್ದೆವು. ಬಟವಾಡೆ ಹಣ ಬಂದಾಗ ಮುಳಬಾಗಿಲಿಗೆ ಹೋಗಿ ಇಬ್ಬರು ಒಟ್ಟಿಗೆ ಕುಡಿದುಕೊಂಡು ಬರುತ್ತಿದ್ದೆವು. ಕೆಲವೊಂದು ಸಾರಿ ವೈನ್ ಶಾಪ್‌ನಿಂದ ಮದ್ಯ ಬಾಟಲಿಗಳನ್ನು ತೆಗೆದುಕೊಂಡು ಬಂದು ಶೆಡ್‌ನಲ್ಲಿಯೇ ಪಾರ್ಟಿ ಮಾಡುತ್ತಿದ್ದೆವು. ವರ್ಷದಲ್ಲಿ 1-2 ಬಾರಿ ಊರಿಗೆ ಹೋಗಿ ಕುಟುಂಬದವರೊಂದಿಗೆ ಎರಡು ದಿನ ಕಾಲ ಕಳೆದು ಮತ್ತೆ ಫ್ಯಾಕ್ಟರಿಗೆ ಬಂದು ಬಿಡುತ್ತಿದ್ದೆನು.



ಜನವರಿ 10ರಂದು ಊರಿಗೆ ಹೋಗಿದ್ದು 14ರಂದು ಬರುವಾಗ ಪತ್ನಿ ಶಿವಾನಿಯನ್ನು ಕರೆದುಕೊಂಡು ಬಂದು ಮಾಲೀಕರಿಗೆ ಹೇಳಿ ಪ್ರತ್ಯೇಕ ಶೆಡ್‌ನಲ್ಲಿ ನಾವಿಬ್ಬರು ವಾಸವಾಗಿದ್ದೆವು. ನಮ್ಮ ಶೆಡ್‌ನ ಅಕ್ಕಪಕ್ಕದಲ್ಲಿ ಉಮೇಶ್ ಕುಮಾರ್ ಸಿಂಗ್ ಮತ್ತು ಅವನ ಸ್ನೇಹಿತರು ಹಾಗೂ ರಮೇಶ್ ಮತ್ತು ಸೋಮಶೇಖರ್ ಇನ್ನೊಂದರಲ್ಲಿದ್ದರು. ಇನ್ನುಳಿದ ಶೆಡ್‌ಗಳಲ್ಲಿ ಹೆಂಡತಿ, ಮಕ್ಕಳೊಂದಿಗೆ ಸುಮಾರು ಕುಟುಂಬಗಳು ವಾಸವಿದ್ದವು. ಅವರೊಂದಿಗೆಲ್ಲಾ ಪತ್ನಿ ಶಿವಾನಿ ಹೊಂದಾಣಿಕೆ ಮಾಡಿಕೊಂಡು ಅನ್ಯೋನ್ಯವಾಗಿದ್ದಳು. ನಮ್ಮ ಶೆಡ್‌ನ ಪಕ್ಕದಲ್ಲಿದ್ದ ಉಮೇಶ್‌ಕುಮಾರ್ ಸಿಂಗ್ ನಮ್ಮ ಮನೆಗೆ ಆಗಾಗ ಬಂದು ತರಕಾರಿ ಬೇಕು, ಕರಿಬೇವಿನ ಸೊಪ್ಪು ಬೇಕೆಂದು ಹೇಳಿ ನನ್ನ ಪತ್ನಿ ಬಳಿ ಕೇಳಿ ತೆಗೆದುಕೊಂಡು ಹೋಗುತ್ತಿದ್ದನು. ಅವನು ಕೇಳಿದ ಪದಾರ್ಥಗಳು ನಮ್ಮ ಬಳಿ ಇದ್ದರೆ ಅವುಗಳನ್ನು ಕೊಡುತ್ತಿದ್ದಳು. ಇದೇ ರೀತಿ ದಿನವು ನಮ್ಮ ಮನೆಗೆ ಬಂದು ಹೋಗುತ್ತಾ ಸಲಿಗೆ ಬೆಳೆಸಿಕೊಂಡಿದ್ದ ಉಮೇಶ್ ಕುಮಾರ್ ಸಿಂಗ್ ನನ್ನ ಪತ್ನಿಯನ್ನು ಲೈಂಗಿಕವಾಗಿ ಬಳಸಿಕೊಳ್ಳಲು ನಾನು ಕೆಲಸಲಕ್ಕೆ ಅಥವಾ ಮುಳಬಾಗಿಲಿಗೆ ಹೋಗಿದ್ದಾಗ ನಮ್ಮ ಶೆಡ್‌ಗೆ ಬಂದು ಹರಟೆ ಹೊಡೆದುಕೊಂಡು ಇರುತ್ತಿದ್ದವನು ಮೈಕೈ ಮುಟ್ಟಿ ಮಾತನಾಡುತ್ತಾ ಲೈಂಗಿಕ ಕ್ರಿಯೆಗೆ ಪುಸಲಾಯಿಸುತ್ತಾ ದೈಂಹಿಕವಾಗಿ ಹಿಂಸೆ ನೀಡುತ್ತಿದ್ದನಂತೆ. ಇವನ ಕಾಮದಾಟದ ಬಗ್ಗೆ ನನ್ನ ಬಳಿ ಹೇಳಿ ಕಣ್ಣೀರಿಟ್ಟಳು. ಈ ವಿಚಾರವನ್ನು ತಿಳಿದುಕೊಂಡ ನಾನು ಉಮೇಶ್‌ಕುಮಾರ್ ಸಿಂಗ್ ಬಳಿ ನನ್ನ ಪತ್ನಿ ಶಿವಾನಿಯ ತಂಟೆಗೆ ಹೋಗದಂತೆ ಬುದ್ಧಿ ಹೇಳಿದ್ದೆನು. ಆದರೆ ಅವನು ಬಾಯಿ ಬಾಲ ಡೊಂಕು ಎನ್ನುವಂತೆ ಬುದ್ಧಿ ಕಲಿಯದೆ ನನ್ನ ಹೆಂಡತಿ ಹಿಂದೆ ಬಿದ್ದವನನ್ನು ಮುಗಿಸಿ ಬಿಡಬೇಕೆಂದು ಯೋಚಿಸಿ ನನ್ನ ಜೊತೆ ಕೆಲಸ ಮಾಡುತ್ತಿದ್ದ ಸೋಮಶೇಖರ್ ಹಾಗೂ ರಮೇಶ್‌ನ ಜೊತೆ ಮಾತನಾಡಿ ಪ್ಲಾನ್ ಮಾಡಿಕೊಂಡು ಜನವರಿ 24ರ ರಾತ್ರಿ ಲಾರಿಯಲ್ಲಿ ಊಟ ಮಾಡುತ್ತಾ ಕುಳಿತಿದ್ದವನನ್ನು ಕರೆದುಕೊಂಡು ಬರುವಂತೆ ಪತ್ನಿ ಶಿವಾನಿಗೆ ಹೇಳಿ ಕಳುಹಿಸಿದ್ದು, ನಾವು ಮೂರು ಜನ ಜಲ್ಲಿ ರಾಶಿ ಹಿಂದೆ ಅಡಗಿ ಕುಳಿತಿದ್ದೆವು. ಪತ್ನಿ ಸ್ವಲ್ಪ ಹೊತ್ತಿಗೆಲ್ಲಾ ಕೌಲಾಸ್‌ಪಾಲ್‌ನನ್ನು ಕರೆದುಕೊಂಡು ಜಲ್ಲಿ ರಾಶಿ ಹಿಂದೆ ಬರುತ್ತಿದ್ದಂತೆ ಕಬ್ಬಿಣದ ರಾಡ್ ಮತ್ತು ದೊಣ್ಣೆಗಳಿಂದ ಅಟ್ಯಾಕ್ ಮಾಡಿ ಸಾಯಿಸಿ ಶವವನ್ನು ಎಳೆದುಕೊಂಡು ಹೋಗಿ ಶ್ರೀನಿವಾಸಪುರದ ಕಡೆ ದೊಡ್ಡಗುರ್ಕಿ ಕ್ರಾಸ್ ಬಳಿ ರಸ್ತೆಯಲ್ಲಿ ಬಿಸಾಡಿ ಶೆಡ್‌ಗೆ ಬಂದು ಎಲ್ಲರೊಂದಿಗೆ ಮಾತನಾಡುತ್ತಾ ಇದ್ದೆವು. ಸ್ವಲ್ಪ ಸಮಯದ ನಂತರ ಉಮೇಶ್‌ಕುಮಾರ್ ಸಿಂಗ್ ಎಲ್ಲಿಗೋ ಹೋಗಿ ಶೆಡ್‌ಗೆ ಬರುತ್ತಿದ್ದಾಗ ಯಾವುದೋ ವಾಹನ ಬಡಿದು ಮೃತಪಟ್ಟಿರುವುದಾಗಿ ಹೇಳಿಕೊಳ್ಳುತ್ತಿದ್ದರು. ನಾವು ಸಹ ಅವರ ಜೊತೆ ಸೇರಿಕೊಂಡು ಸಹೋದ್ಯೋಗಿಯ ಸಾವಿನ ಸೂತಕದಲ್ಲಿ ಭಾಗಿಯಾಗಿದ್ದೆವು. ಆದರೆ ಪೊಲೀಸರ ತನಿಖೆಯಲ್ಲಿ ನಮ್ಮ ನಾಟಕ ಬಯಲಾಗಿ ಅವರ ಕೈಗೆ ತಗಲಾಕೊಂಡೆವೆಂದು ಹೇಳಿದನು. ಆರೋಪಿ ಪತ್ನಿ ಶಿವಾನಿಯು ತನ್ನ ಹೇಳಿಕೆಯಲ್ಲಿ ಊರಿನಿಂದ ನಾನು ಶೆಡ್‌ಗೆ ಬಂದಾಗಿನಿಂದ ಪಕ್ಕದ ಶೆಡ್‌ನಲ್ಲಿದ್ದ ಉಮೇಶ್‌ಕುಮಾರ್ ಸಿಂಗ್ ಯಾವುದಾದರೊಂದು ಕಾರಣ ಹೇಳಿಕೊಂಡು ನಮ್ಮ ಶೆಡ್‌ಗೆ ಬಂದು ನನ್ನ ಜೊತೆ ಮಾತನಾಡುತ್ತಾ ಯಾರು ಇಲ್ಲದ ಸಮಯ ನೋಡಿ ದೈಹಿಕವಾಗಿ ಹಿಂಸೆ ನೀಡುತ್ತಾ ಲೈಂಗಿಕವಾಗಿ ಬಳಸಿಕೊಳ್ಳಲು ಪ್ರಯತ್ನಿಸುತ್ತಿದ್ದನು. ಈ ವಿಚಾರವನ್ನು ಗಂಡ ಕೌಲಾಸ್‌ಪಾಲ್‌ಗೆ ಹೇಲಿದೆ. ಅವರೂ ಸಹ ಅವನಿಗೆ ಬುದ್ಧಿ ಹೇಳಿ ನೋಡಿದರು. ಅವನು ಇವರ ಮಾತನ್ನೂ ಕೇಳದೆ ಅಕ್ಕಪಕ್ಕದ ಶೆಡ್‌ಗಳಲ್ಲಿ ಯಾರು ಇಲ್ಲದಿರುವುದನ್ನು ನೋಡಿ ಕಳ್ಳಬೆಕ್ಕಿನಂತೆ ಶೆಡ್‌ಗೆ ಬಂದು ಲೈಂಗಿಕ ಕ್ರಿಯೆಗೆ ಪುಸಲಾಯಿಸುತ್ತಾ ಹಿಂಸೆ ನೀಡುತ್ತಿದ್ದನು. ಇವನ ಕಾಟವನ್ನು ತಡೆಯಲಾರದೆ ಗಂಡನಿಗೆ ಹೇಳಿದೆ. ಆಗ ಅವರು ಇಬ್ಬರು ಸಹೋದ್ಯೋಗಿಗಳನ್ನು ಸಹಾಯಕ್ಕೆ ಕರೆದುಕೊಂಡು ಪ್ಲಾನ್ ಮಾಡಿ ಸ್ಪಾಟ್‌ಗೆ ಕರೆದುಕೊಂಡು ಬರುವಂತೆ ಹೇಳಿದರು. ಅದರಂತೆ ನಾನು ಹೋಗಿ ಲಾರಿಯಲ್ಲಿ ಕುಳಿತು ಊಟ ಮಾಡುತ್ತಿದ್ದವನನ್ನು ಜಲ್ಲಿ ರಾಶಿ ಹಿಂದೆ ಹೋಗಿ ನಾವಿಬ್ಬರು ಸೇರೋಣ ಬಾ ಎಂದು ಕರೆದನು. ಊಟ ತಿನ್ನುವುದನ್ನು ಬಿಟ್ಟು ನನ್ನ ಹಿಂದೆ ಬಂದು ತನ್ನ ಪ್ರಾಣವನ್ನು ತಾನೇ ತೆಗೆದುಕೊಂಡನು ಎಂದು ಹೇಳಿದಳು. ನಾಲ್ವರಿಂದ ಹೇಳಿಕೆ ಪಡೆದ ನಂತರ ಕೃತ್ಯ ನಡೆದ ಸ್ಥಳಕ್ಕೆ ಕರೆದುಕೊಂಡು ಹೋಗಿ ಸ್ಥಳದ ಮಹಜರ್ ನಡೆಸಿದ ಮೇಲೆ ಕೃತ್ಯಕ್ಕೆ ಉಪಯೋಗಿಸಿದ್ದ ರಾಡ್ ಮತ್ತು ದೊಣ್ಣೆಗಳನ್ನು ಪೊಲೀಸರು ವಶಕ್ಕೆ ಪಡೆದುಕೊಂಡ ನಂತರ ನಾಲ್ಕು ಜನ ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಈ ಕಾರ್ಯಾಚರಣೆಯಲ್ಲಿ ಪಾಲ್ಗೊಂಡ ಅಧಿಕಾರಿ ಮತ್ತು ಸಿಬ್ಬಂದಿಯವರ ಕಾರ್ಯವನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ. ನಿಖಿಲ್‌ರವರು ಶ್ಲಾಘಿಸಿದ್ದಾರೆ. ☯



ಆರೋಪಿಗಳಾದ ರಮೇಶ್ ಹಾಗೂ ಸೋಮಶೇಖರ್


ರೈಟರ್ ಸುರೇಶ್

## ನಿಮ್ಮ ಸುತ್ತಮುತ್ತಲಿನ ಸುದ್ದಿ ಹಾಗೂ ಅನ್ಯಾಯ-ಭ್ರಷ್ಟಾಚಾರಗಳನ್ನು ತಿಳಿಸಿ!

ಕರ್ನಾಟಕ ರಾಜ್ಯದ ಮಹಾಜನತೆಗೆ ಇದೋ ಒಂದು ಸುವರ್ಣಾವಕಾಶ. ನಿಮ್ಮ ಸುತ್ತಮುತ್ತ ನಡೆಯುವ ಅನ್ಯಾಯ, ಅಕ್ರಮ, ಅನಾಚಾರ, ಭ್ರಷ್ಟಾಚಾರಗಳನ್ನು ಸಂಕಟಪಡುತ್ತಿದ್ದೀರಾ? ಹಾಗಾದರೆ; ಈ ಕೂಡಲೇ ಸವಿವರ ಸಮೇತ ಅವುಗಳನ್ನು ನಮ್ಮ ಕಛೇರಿಗೆ ಕಳುಹಿಸಿ! ನಿಮ್ಮ ಹೆಸರು, ವಿಳಾಸ, ಮೊಬೈಲ್ ನಂಬರ್ ಇತ್ಯಾದಿ ವಿವರಗಳನ್ನು ನಾವು ಅತ್ಯಂತ ಗೌಪ್ಯವಾಗಿಡುತ್ತೇವೆ. ಯಾವುದೇ ಕಾರಣಕ್ಕೂ ಅದನ್ನು ಬಹಿರಂಗಪಡಿಸುವುದಿಲ್ಲ. 'ಪೊಲೀಸ್ ನ್ಯೂಸ್' ವಾರಪತ್ರಿಕೆಯಲ್ಲಿ ಸುದ್ದಿ ಪ್ರಕಟಿಸುವ ಮೂಲಕ ಸಂಬಂಧಪಟ್ಟ ಇಲಾಖೆಗೆ ತಿಳಿಸಿ ಸೂಕ್ತ ಕಾನೂನು ಕ್ರಮ ಜರುಗಿಸಲು ಸೂಚಿಸುವ ಕೆಲಸ ಮಾಡುವ ಹೊಣೆ ನಮ್ಮದು.

**ವಿಳಾಸ : ಪೊಲೀಸ್ ನ್ಯೂಸ್, ವಾರಪತ್ರಿಕೆ**

**ನಂ. 165, 8ನೇ ಮುಖ್ಯರಸ್ತೆ, ಬಿಇಎಂಎಲ್ ಬಡಾವಣೆ, ಬಸವೇಶ್ವರನಗರ, ಬೆಂಗಳೂರು-560 079. ಮೊ : 9513892666**




# ವೇಶ್ಯಾವಾಟಿಕೆ ನಡೆಯುತ್ತಿದ್ದ ಜಸ್ವಂತ್ ರೆಸಿಡೆನ್ಸಿ ರೈಡ್!

ಕೊಳ್ಳೇಗಾಲ

✍ ಎಸ್. ಸ್ವಾಮಿ

ಒಂದು ಕಾಲದಲ್ಲಿ ಕೊಳ್ಳೇಗಾಲದ ಶೆಟ್ಟಿ ಹೋಟೇಲ್ ಎಂದರೆ ಸುತ್ತಮುತ್ತಲ ಹಳ್ಳಿಗಳು, ಪಟ್ಟಣ ಹಾಗೂ ನಗರಗಳಲ್ಲಿ ಬಹಳ ಪ್ರಸಿದ್ಧಿ. ಊಟ ತಿಂಡಿಗೆ ಹೆಸರು ವಾಸಿಯಾಗಿದ್ದ ಕಾಲ ಒಂದಿತ್ತು. ಈ ಕುಟುಂಬ ದವರಾದ ದಿವಂಗತ ಸತ್ಯನಾರಾಯಣರವರು ಡಾ. ರಾಜಕುಮಾರ್ ರಸ್ತೆಯಲ್ಲಿ ಬಿಲ್ಡಿಂಗ್ ಒಂದನ್ನು ನಿರ್ಮಿಸಿ ಶೆಟ್ಟಿ ಉಪಹಾರ ದರ್ಶಿನಿ ಎಂಬ ಹೆಸರಿನಲ್ಲಿ ಹೋಟೆಲ್ ಉದ್ಯಮ ನಡೆಸುತ್ತಿದ್ದರು. ಇದರ ಜೊತೆಗೆ ಅದೇ ಕಟ್ಟಡದಲ್ಲಿ ಶೆಟ್ಟಿ ಎಂಪೋರಿಯಂ ಎಂಬ ಹೆಸರಿನ ವಸತಿ ಗೃಹವೊಂದನ್ನು ನಡೆಸುತ್ತಿದ್ದರು. 2009ರಲ್ಲಿ ಕೊಳ್ಳೇಗಾಲ ಕ್ಷೇತ್ರಕ್ಕೆ ಉಪ ಚುನಾವಣೆಯಾದಾಗ ಬಿಜೆಪಿಯವರು ಈ ವಸತಿಗೃಹವನ್ನು ಚುಣಾವಣಾ ಕಛೇರಿಯಾಗಿ ಬಳಸಿ ಕೊಂಡಿದ್ದರು. ಈ ವೇಳೆ ಇಲ್ಲಿಗೆ ಗಣ್ಯರು ಬಂದು




ಹೋಗುತ್ತಿದ್ದರಿಂದ ಇಲ್ಲಿ ಲಾಡ್ಜ್ ಇರುವುದು ಬೆಳಕಿಗೆ ಬಂದಿತ್ತು. ಮಾಲಿಕ ಸತ್ಯನಾರಾಯಣ ಅವರು ಈಗ ಬದುಕಿಲ್ಲ, ಅವರ ಕಾಲ ನಂತರ ಈ ಲಾಡ್ಜ್ ಅವರ ಪತ್ನಿ ರಾಜೇಶ್ವರಿಯವರಿಗೆ ಸೇರಿದ್ದು. ಗಂಡ ತೀರಿಕೊಂಡ ನಂತರ ಆಕೆ ಲಾಡ್ಜ್ ನಡೆಸಲಾಗದೆ ಮಂಡ್ಯ ಜಿಲ್ಲೆ ಪಾಂಡವಪುರ ತಾಲ್ಲೂಕು ಕೆ.ಬೆಟ್ಟಳ್ಳಿ ಗ್ರಾಮದ ರಂಗನಾಯಕನ ಮಗ ಯೋಗೀಶ್ ಎಂಬುವವರಿಗೆ ಕಳೆದ 2023ರ ನವಂಬರ್ 23 ರಿಂದ (ಒಂದು ಕಾಲು ವರ್ಷದಿಂದ) ಲೀಜ್‌ಗೆ ಹಾಕಿದ್ದಾರೆ. ಲಾಡ್ಜನ್ನು ಆತನ ಸಹಾಯಕ ಟಿ.ನರಸೀಪುರ ತಾಲ್ಲೂಕು ತಡಿಮಾಲಂಗಿ ಗ್ರಾಮದ ಸಿದ್ದರಾಜು ಮಗ ನಾಗೇಂದ್ರರವ ರೊಡನೆ ನಡೆಸುತ್ತಿದ್ದನು. ಆದರೆ ಇಲ್ಲಿಗೆ ವಾಸ್ತವ್ಯ ಹೂಡಲು ಪ್ರಾರಂಭ ದಿಂದಲೂ ಗಿರಾಕಿಗಳು ಸರಿಯಾಗಿ ಬಾರದ ಕಾರಣ ಪಿಕಪ್ ಜೋಡಿಗಳು ಬಂದು ಮೈ ಕಾವು ಇಳಿಸಿಕೊಂಡು ಹೋಗುತ್ತಿದ್ದವು. ನಂತರ ಲಾಡ್ಜ್ ನಡೆಸುತ್ತಿದ್ದ ಮಾಲಿಕ ಯೋಗೀಶ್ ಹಾಗೂ ಸಹಾಯಕ ನಾಗೇಂದ್ರರವರೆ ಒಂದಷ್ಟು ಸ್ಥಳೀಯ ಹಾಗೂ ಹೊರಗಿನ ಹುಡುಗಿಯರು ಹಾಗೂ ಹೆಂಗಸರನ್ನು ಕರೆತಂದು ಲಾಡ್ಜ್ ನಲ್ಲಿ ವೇಶ್ಯಾವಾಟಿಕೆ ನಡೆಸುತ್ತಿದ್ದರು. ಅದಕ್ಕಾಗಿ ಪರಿಚಯ ವಿರುವ ವಿಟಪುರುಷರಿಗೆ ವಾಟ್ಸಾಪ್ ಮೂಲಕ ಹುಡುಗಿ ಯರ ಫೋಟೋ ಕಳುಹಿಸಿ ವ್ಯವಹಾರ ಕುದುರಿಸುತ್ತಿದ್ದರು.

ಹುಡುಗಿಯರ ಹೆಂಗಸರ ಚಟ ಇರುವಂತ ವಿಟರು ಇಲ್ಲಿನ ಖಾಯಂ ಗಿರಾಕಿಗಳಾಗಿದ್ದರು. ಇದು ತುಂಬಾ ದಿನಗಳಿಂದ ಇಲ್ಲಿ ನಿರಂತರವಾಗಿ ಈ ದಂಧೆ ನಡೆಯುತ್ತಲೇ ಇತ್ತು.

ದಿನಾಂಕ 01-02-2025 ರಂದು ರಾತ್ರಿ 07-00 ಗಂಟೆಯ ಸಮಯದಲಿ ಕೊಳ್ಳೇಗಾಲ ವೃತ್ತ ನಿರೀಕ್ಷಿತ ಶಿವಮಾದಯ್ಯ ಪಟಣದ ಡಾ. ಬಿ.ಆರವ ಅಂಬೇಡ್ಕರ್ ರಸ್ತೆಯಲ್ಲಿ ಗಸ್ತು ಕರ್ತವ್ಯದಲ್ಲಿದ್ದಾಗ ಬಾತ್ಮೀದಾರರಿಂದ ಕೊಳ್ಳೇಗಾಲ ಟೌನ್‌ನ ಡಾ. ರಾಜಕುಮಾರ್ ರಸ್ತೆಯಲ್ಲಿರುವ ದತ್ತ ಮೆಡಿಕಲ್ ಎದುರುಗಡೆ ಆಟೋ ನಿಲ್ದಾಣದ ಪಕ್ಕದಲ್ಲಿರುವ ಜಸ್ವಂತ್ ರೆಸಿಡೆನ್ಸಿಯಲ್ಲಿ ಕಾನೂನುಬಾಹಿರ ವಾಗಿ ವೇಶ್ಯಾವಾಟಿಕೆ ನಡೆಸುತ್ತಿದ್ದಾರೆ ಎಂಬ ಮಾಹಿತಿ ಬರುತ್ತದೆ,

ಬಾತ್ಮೀದಾರರಿಂದ ಬಂದ ಖಚಿತ ಮಾಹಿತಿಯ ಮೇರೆಗೆ ಕಾರ್ಯ ಕಾರ್ಯಪ್ರವೃತ್ತರಾದ ಶಿವಮಾದಯ್ಯ ರವರು ಕೂಡಲೇ ಠಾಣೆಗೆ ಬಂದು ದಾಳಿ ನಡೆಸಲು ಸಜ್ಜಾಗುತ್ತಾರೆ. ಅದಕ್ಕಾಗಿ ಕೊಳ್ಳೇಗಾಲ ಉಪ ವಿಭಾಗದ ಅಪರಾಧ ಪತ್ತೆ ದಳದ ಸಿಬ್ಬಂದಿಗಳಾದ ಎಎಸ್‌ಐ ತಖೀವುಲ್ಲಾ, ಹೆಚ್ ಸಿಗಳಾದ ರವಿ, ವೆಂಕಟೇಶ್, ಪಿಸಿಗಳಾದ ಬಿಳಿಗೌಡ, ಶಿವಕುಮಾರ್, ಕೊಳ್ಳೇಗಾಲ ಉಪವಿಭಾಗದ ಕಚೇರಿಯ ಸಿಬ್ಬಂದಿಗಳಾದ ಹೆಚ್‌ಸಿ ವಸಂತ, ಪಿಸಿ ಪಡಿಯಪ್ಪ ಗೋಕಾವಿರವರನ್ನು ಮತ್ತು ಕೊಳ್ಳೇಗಾಲ ಪಟ್ಟಣ ಪೊಲೀಸ್ ಠಾಣೆಯ ಸಿಬ್ಬಂದಿಗಳಾದ ಹೆಚ್‌ಸಿಗಳಾದ ಡಿ. ಸೂರ್ಯಪ್ರಕಾಶ್, ಶ್ರೀಮತಿ ರಾಧ, ಶ್ರೀಮತಿ ಯಶೋ ದಮ್ಮ, ಪಿಸಿಗಳಾದ ಅನಿಲ್‌ಕುಮಾರ್, ಸಚಿನ್‌ಕುಮಾರ್


ಸಿಪಿಐ ಶಿವಮಾದಯ್ಯ


ಪಿಎಸ್‌ಐ ಬಿ.ವಿ. ವರ್ಷಾ

ರವರುಗಳನ್ನು ಕೊಳ್ಳೇಗಾಲ ಪಟ್ಟಣ ಪೊಲೀಸ್ ಠಾಣೆಗೆ ಬರ ಮಾಡಿಕೊಂಡು ಅವರುಗಳಿಗೆ ನನಗೆ ದೊರೆತಿರುವ ಖಚಿತ ಮಾಹಿತಿಯ ವಿಚಾರವನ್ನು ತಿಳಿಸಿ ದಾಳಿ ಮಾಡುವ ವೇಳೆ ನನ್ನ ಜೊತೆ ಹಾಜರಿರುವಂತೆ ಸೂಚಿಸಿ ಎಲ್ಲರನ್ನು ಅವರವರ ಸ್ವಂತ ದ್ವಿಚಕ್ರ ವಾಹನದಲ್ಲಿ ಜಸ್ವಂತ್ ರೆಸಿಡೆನ್ಸಿ ಬಳಿ ಬರುವಂತೆ ಸೂಚಿಸಿ ಇಲಾಖಾ ವಾಹನ ಕೆಎ-10 ಜಿ-0782ರಲ್ಲಿ ರಾತ್ರಿ 7-15 ಗಂಟೆಗೆ ವೈಶ್ಯವಾಟಿಕೆ ದಂಧೆ ನಡೆಯುತ್ತಿದ್ದ ಕೊಳ್ಳೇಗಾಲ ಟೌನ್‌ನ ರಾಜಕುಮಾರ್ ರಸ್ತೆಯಲ್ಲಿರುವ ದತ್ತ ಮೆಡಿ ಕಲ್ ಎದುರುಗಡೆ ಇರುವ ಆಟೋ ನಿಲ್ದಾಣದ ಪಕ್ಕದ ಜಸ್ವಂತ್ ರೆಸಿಡೆನ್ಸಿಯ ಮೇಲೆ ಡಿವೈಎಸ್ಪಿ ಅಪರಾಧ ಪತ್ತೆ ದಳ, ಕೊಳ್ಳೇಗಾಲ ವೃತ್ತ ನಿರೀಕ್ಷಕ ಶಿವಮಾದಯ್ಯ ಹಾಗೂ ತಂಡ ರಾತ್ರಿ 7-30ರಲ್ಲಿ ದಿಢೀರ್ ದಾಳಿ ನಡೆಸಿದ್ದಾರೆ. ಈ ವೇಳೆ ವೇಶ್ಯಾವಾಟಿಕೆಯಲ್ಲಿ ತೊಡಗಿದ್ದ ಕಾರವಾರ ಮೂಲದ ಓರ್ವ ಮಹಿಳೆ, ಸ್ಥಳೀಯ ಮೂವರು ಸೇರಿದಂತೆ ನಾಲ್ವರು ಮಹಿಳೆಯರ ಜೊತೆ ನಾಲ್ವರು ಪುರುಷರು ಪೊಲೀಸರಿಗೆ ಸಿಕ್ಕಿಬಿದ್ದಿದ್ದಾರೆ.

ನಂತರ ಹೆಚ್‌ಸಿ ರವರ ಮೂಲಕ ಸ್ಥಳಕ್ಕೆ ಇಬ್ಬರು


ಎಸ್ಪಿ ಡಾ. ಕವಿತಾ


ಡಿವೈಎಸ್ಪಿ ಧರ್ಮೇಂದ್ರ

ಪಂಚಾಯ್ತಿದಾರರುಗಳಾದ ಹರಳೆ ಗ್ರಾಮದ ಮಹದೇವಯ್ಯ ಬಿನ್ ಲೇಟ್ ಸೀರಯ್ಯ, ಹೊಸ ಅಣಗಳ್ಳಿ ಗ್ರಾಮದ ಪಿ. ಸುನಿಲ್‌ಕುಮಾರ್ ಬಿನ್ ಪುಟ್ಟಮಾದ, ಪಿಎಸ್‌ಐ ಶ್ರೀಮತಿ ಉಮಾವತಿ (ಅಪರಾಧ ವಿಭಾಗ) ಕೊಳ್ಳೇಗಾಲ ಪಟ್ಟಣ ಪೊಲೀಸ್ ಠಾಣೆರವರನ್ನು ಬರ ಮಾಡಿಕೊಂಡು ಅವರುಗಳಿಗೆ ದೊರೆತಿರುವ ಖಚಿತ ಮಾಹಿತಿಯನ್ನು ತಿಳಿಸುತ್ತಾರೆ. ಹಾಗೂ ದಾಳಿ ವೇಳೆ ಪಂಚರಾಗಿ ಹಾಜರಿರು ವಂತೆ ಕೋರಿಕೊಂಡಾಗ ಅವರು ಒಪ್ಪಿದ ನಂತರ ಈ ಸಂಭಂಧ ಅವರು ಗಳಿಗೆ ನೋಟೀಸನ್ನು ಜಾರಿ ಮಾಡು ತ್ತಾರೆ. ರಾತ್ರಿ 7-30 ಗಂಟೆಯಲ್ಲಿ ವರದಿ ತಯಾರಿಸಿ ಠಾಣಾ ಪಿಸಿ ಸಚಿನ್ ಕುಮಾರ್‌ರವರು ಹಸ್ತ ಕಳುಹಿಸಿಕೊಡುತ್ತಾರೆ.




ವೈಶ್ಯವಾಟಿಕೆಯಲ್ಲಿ ಪ್ರಕರಣದಲ್ಲಿ ಸಿಲುಕಿದ್ದವರು ಸ್ಥಳೀಯರಾಗಿದ್ದು, ಓರ್ವ ಮಹಿಳೆ ಹೊರ ಜಿಲ್ಲೆಯವ ರಾಗಿದ್ದು ನಾಲ್ವರು ಮಹಿಳೆಯರನ್ನು ರಕ್ಷಿಸಿರುವ ಪೊಲೀಸರು, ಕೊಳ್ಳೇಗಾಲದಲ್ಲಿರುವ (ಮಹಿಳಾ ಸಾಂತ್ವನ) ಸಾದಾರ ಕೇಂದ್ರಕ್ಕೆ ಕಳುಹಿಸಿದ್ದಾರೆ. ಮಹಿಳೆಯರ ಜೊತೆ ವೇಶ್ಯಾವಾಟಿಕೆಯಲ್ಲಿ ತೊಡಗಿದ್ದ ಪುರುಷೋತ್ತಮ್, ಮನೋಜ್‌ಕುಮಾರ್, ಮಹಾಲಿಂಗಸ್ವಾಮಿ ಹಾಗೂ ನಾಗೇಂದ್ರ ಎಂಬ ಸ್ಥಳೀಯ ನಾಲ್ವರು ವಿಟಾಪುರುಷರನ್ನು ವಶಕ್ಕೆ ಪಡೆದಿರುವ ಪೊಲೀಸರು ಅವರನ್ನು ಠಾಣೆಗೆ ಕರೆತಂದು ವಿಚಾರಣೆ ನಡೆಸಿ ನಂತರ ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದಾರೆ.

ಲಾಡ್ಜ್ ಮಾಲಿಕರಾದ ಕೊಳ್ಳೇ ಗಾಲ ಪಟ್ಟಣದ ರಾಜೇಶ್ವರಿ ಕೋಂ ಲೇಟ್ ಸತ್ಯನಾರಾಯಣ ಹಾಗೂ ಲಾಡ್ಜ್ ನೋಡಿಕೊಳ್ಳುತ್ತಿದ್ದ ಮಂಡ್ಯ ಜಿಲ್ಲೆ ಪಾಂಡವಪುರ ತಾಲ್ಲೂಕು ಕೆ.ಬೆಟ್ಟಳ್ಳಿ ಗ್ರಾಮದ ರಂಗನಾಯಕನ ಮಗ ಯೋಗೀಶ್ ಹಾಗೂ ಆತನ ಸಹಾಯಕ ಟಿ.ನರಸೀಪುರ ತಾಲ್ಲೂಕು ತಡಿಮಾಲಂಗಿ ಗ್ರಾಮದ ಸಿದ್ದರಾಜು ಮಗ ನಾಗೇಂದ್ರರವರ ವಿರುದ್ಧ ಕೊಳ್ಳೇಗಾಲ ಪಟ್ಟಣ ಠಾಣಾ ಮೊಕೊದ್ದಮೆ ಸಂಖ್ಯೆ 20/2025, 3,4,5 The immoral traffic(prevention) Act 1956 ರಡಿ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಯೋಗೀಶ್ ಹಾಗೂ ನಾಗೇಂದ್ರನನ್ನು ಬಂಧಿಸಿ ಠಾಣೆಗೆ ಕರೆತಂದು ವಿಚಾರಣೆ ನಡೆಸಿದಾಗ ವ್ಯಶ್ಯವಾಟಿಕೆ ಚಟುವಟಿಕೆಯಲ್ಲಿ ತೊಡಗಿರುವುದಾಗಿ ಒಪ್ಪಿಕೊಂಡಿ ದ್ದಾರೆ.

ದಾಳಿಯಲ್ಲಿ ಪಟ್ಟಣ ಪಿಎಸ್‌ಐ ವರ್ಷಾ, ಠಾಣೆಯ ಅಪರಾಧ ವಿಭಾಗದ ಪಿಎಸ್‌ಐ ಉಮಾವತಿ, ಅಪರಾಧ ಪತ್ತೆ ದಳದ ಎಎಸ್‌ಐ ತಖೀವುಲ್ಲಾ, ಮುಖ್ಯಪೇದೆ ಗಳಾದ ರವಿ, ಕಿಶೋರ್, ವೆಂಕಟೇಶ್, ಪೇದೆಗಳಾದ ಶಿವಕುಮಾರ್, ಬಿಳಿಗೌಡ, ಪಟ್ಟಣ ಠಾಣೆಯ ಮುಖ್ಯ ಪೇದೆಗಳಾದ ಸೂರ್ಯ ಪ್ರಕಾಶ್, ವಸಂತ, ರಾಧ, ಯಶೋಧಮ್ಮ, ಪಡಿಯಪ್ಪ ಇದ್ದರು.









# ಕಾಲೇಜಿನ ಆಡಳಿತ ಮಂಡಳಿ ಕಿರುಕುಳಕ್ಕೆ ವಿದ್ಯಾರ್ಥಿನಿ ಆತ್ಮಹತ್ಯೆ !
# ಡೆತ್‌ನೋಟ್‌ನಲ್ಲಿ ಕಾಲೇಜಿನ ಅಕ್ರಮಗಳು ಬಟಾ ಬಯಲು!!

**ರಾಮನಗರ**

✍ ಶಾಂತರಾಜು ಜಿ. ಕಲ್ಲಹಳ್ಳಿ

**ರಾಮನಗರ ಜಿಲ್ಲೆ ಹಾರೋಹಳ್ಳಿ ತಾಲ್ಲೂಕಿನ ಚೇಲೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ದೇವರ ಕಗ್ಗಲಹಳ್ಳಿ ಗ್ರಾಮದ ಹತ್ತಿರ, ಕನಕಪುರ ಮುಖ್ಯರಸ್ತೆಯಲ್ಲಿರುವ ಡಾ|| ಚಂದ್ರಮ್ಮ ದಯಾನಂದ ಸಾಗರ್ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಎಜುಕೇಷನ್ ಅಂಡ್ ರೀಸರ್ಚ್‌ನ ಖಾಸಗಿ ನರ್ಸಿಂಗ್ ಕಾಲೇಜಿನಲ್ಲಿ ಬಿಎಸ್‌ಸಿ ನರ್ಸಿಂಗ್ ವಿದ್ಯಾರ್ಥಿನಿ ಅನಾಮಿಕ ವಿನೀತ 19 ವಯಸ್ಸಿನ ಈಕೆ, ಮೂಲತಃ ಕೇರಳ ರಾಜ್ಯದ ಕಣ್ಣೂರು ಜಿಲ್ಲೆಯ ಮಂಜಪ್ಪಿಲನಗ ಗ್ರಾಮದ ವಿವೀತ್ ಕುಮಾರ್ ನಾವತ್ ಮಗಳು. ಈ ಅನಾಮಿಕ ವಿನೀತ ಬಿಎಸ್‌ಸಿ ನರ್ಸಿಂಗ್ ಪ್ರಥಮ ವರ್ಷದ ವಿದ್ಯಾರ್ಥಿಯಾಗಿ ವಿದ್ಯಾಭ್ಯಾಸ ಮಾಡುತ್ತಿದ್ದಳು. ಇತ್ತೀಚೆಗೆ ಈ ಕಾಲೇಜಿನ ಆಡಳಿತ ಮಂಡಳಿಯ ಕಿರುಕುಳಕ್ಕೆ ಮನನೊಂದು ಈ ಕಾಲೇಜಿನ ಹಾಸ್ಟೆಲ್‌ನಲ್ಲಿ ಆತ್ಮಹತ್ಯೆಗೆ ಶರಣಾಗಿದ್ದಾಳೆ.**



ಮೃತೆದುರ್ದೈವಿ ಅನಾಮಿಕ ವಿನೀತ

ಅಂದು ಮಂಗಳವಾರ ರಾತ್ರಿ ಊಟಕ್ಕೆ ಅನಾಮಿಕ ವಿನೀತ ಬಂದಿರದ ಕಾರಣ, ಸಹಪಾಠಿಗಳು ಅನಾಮಿಕ ವಿನೀತ ಇದ್ದ ಕೊಠಡಿ ಬಳಿ ಬಂದು ಬಾಗಿಲು ಬಡಿದಾಗ ಒಳಗಿನಿಂದ ಯಾವುದೇ ಪ್ರತಿಕ್ರಿಯೆ ಬಂದಿರಲಿಲ್ಲ. ನಂತರ ಸ್ನೇಹಿತರೆಲ್ಲರು ಕಿಟಕಿ ತೆರೆದು ನೋಡಿದಾಗ ಕೊಠಡಿಯ ಫ್ಯಾನ್‌ಗೆ ನೇಣು ಬಿಗಿದುಕೊಂಡು ನೇತಾಡುತ್ತಿರುವುದನ್ನು ಕಂಡು, ಕೂಡಲೇ ಈ ವಿಷಯವನ್ನು ಹಾಸ್ಟೆಲ್ ವಾರ್ಡನ್ ಗಮನಕ್ಕೆ ತಂದಿದ್ದಾರೆ. ನಂತರ ವಾರ್ಡನ್ ಆಡಳಿತ ಮಂಡಳಿಯ ಗಮನಕ್ಕೆ ತಂದಾಗ, ಗಾಬರಿಗೊಂಡ ಆಡಳಿತ ಮಂಡಳಿಯು ಹಾರೋಹಳ್ಳಿ ಪೊಲೀಸ್ ಠಾಣೆಗೆ ವಿಷಯ ಮುಟ್ಟಿಸಿದ್ದಾರೆ. ಸ್ಥಳಕ್ಕೆ ಬಂದ ಹಾರೋಹಳ್ಳಿ ಪೊಲೀಸರು ಆತ್ಮಹತ್ಯೆ ಮಾಡಿಕೊಂಡ ಕೊಠಡಿಯ ಬಳಿ ಬಂದು ಪರಿಶೀಲಿಸಲಾಗಿ ಅನಾಮಿಕ ವಿನೀತ ವಿದ್ಯಾರ್ಥಿನಿ ಸಾಯುವ ಮುನ್ನ ಡೆತ್‌ನೋಟ್ ಬರೆದಿದ್ದು, ಈಕೆಯ ಪರ್ಸನಲ್ ಡೈರಿಯಲ್ಲಿ ಕಾಲೇಜಿನ ಆಡಳಿ ಮಂಡಳಿಯ ಕೆಲವು ಅಕ್ರಮ ವಿಚಾರಗಳನ್ನು ಬರೆದಿಟ್ಟಿದ್ದ ಡೈರಿಯನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಮೃತೆ ಅನಾಮಿಕ ವಿನೀತ ವಿದ್ಯಾರ್ಥಿನಿ ಮಂಗಳವಾರ ರಾತ್ರಿ ಎಂಟು ಗಂಟೆ ಸುಮಾರಿಗೆ ಆತ್ಮಹತ್ಯೆಗೆ ಶರಣಾಗಿದ್ದು, ಈ ಕಾಲೇಜಿನ ಆಡಳಿತ ಮಂಡಳಿ ಹಾಗೂ ಪ್ರಾಂಶುಪಾಲರು ಸೇರಿ ಯಾರಿಗೂ ಈ ವಿಷಯ ಹೇಳಬಾರದು ಎಂದು ವಿದ್ಯಾರ್ಥಿಗಳಿಗೆ ಧಮ್ಕಿ ಹಾಕಿದ್ದರು ಎಂದು ವಿದ್ಯಾರ್ಥಿಗಳ ಬಾಯಲ್ಲೇ ಕೇಳಿ ಬರುತ್ತಿದ್ದ ವಿಚಾರ. ಆದರೆ ಬುಧವಾರ ಬೆಳಿಗ್ಗೆ ಈ ಆತ್ಮಹತ್ಯೆಯ ವಿಷಯವನ್ನು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದರಿಂದ ಈ ವಿಷಯ ಬೆಳಕಿಗೆ ಬಂದಿದೆ.

**ವಿದ್ಯಾರ್ಥಿಗಳಿಂದ ಪ್ರತಿಭಟನೆ**

ಮೃತೆ ನರ್ಸಿಂಗ್ ವಿದ್ಯಾರ್ಥಿನಿ ಅನಾಮಿಕ ವಿನೀತ ಆತ್ಮಹತ್ಯೆಯ ಹಿನ್ನೆಲೆಯಲ್ಲಿ ನರ್ಸಿಂಗ್ ವಿದ್ಯಾರ್ಥಿಗಳು ಎಲ್ಲಾ ತರಗತಿಗಳನ್ನು ಬಹಿಷ್ಕರಿಸಿ ಕಾಲೇಜು ಆವರಣದಲ್ಲಿ ಪ್ರತಿಭಟನೆ ನಡೆಸಿ ಕಾಲೇಜಿನ ಆಡಳಿತ ಮಂಡಳಿಯ ಕಿರುಕುಳವೇ ಸಾವಿಗೆ ಕಾರಣ ಎಂದು ಆಕ್ರೋಶ ವ್ಯಕ್ತಪಡಿಸಿದರು. ನಾವುಗಳು ಪರೀಕ್ಷೆಯಲ್ಲಿ ಒಂದು ವಿಷಯದಲ್ಲಿ ಅನುತ್ತೀರ್ಣರಾದರೆ ನಿಯಮದಂತೆ ಒಂದು ಸಾವಿರ ರೂ. ಶುಲ್ಕ ಪಡೆದು ಮರುಪರೀಕ್ಷೆ ನೀಡಬೇಕು. ಆದರೆ ಈ ಕಾಲೇಜಿನ ಆಡಳಿತ ಮಂಡಳಿಯಲ್ಲಿ 7 ಸಾವಿರ ರೂಪಾಯಿ ಪಡೆಯುತ್ತಿದ್ದಾರೆ. ಇದನ್ನು ಕೇಳಿದರೆ ಟಾರ್ಗೆಟ್ ಮಾಡಿ ನಮ್ಮನ್ನು ಅನುತ್ತೀರ್ಣಗೊಳಿಸುತ್ತಾರೆ ಎಂದು ಆಕ್ರೋಶದಿಂದ ಮನದಾಳದಲ್ಲಿದ್ದ ನೋವುಗಳ ವಿಚಾರಗಳನ್ನು ಹಂಚಿಕೊಂಡರು. ಪ್ರಾಂಶುಪಾಲರು ಮತ್ತು ಸಿಬ್ಬಂದಿ ವರ್ಗ ಮಾನಸಿಕವಾಗಿ ಹಿಂಸೆ ನೀಡುತ್ತಾರೆ. ಏನಾದರು ವಿಚಾರ ಕೇಳಿದರೆ ವಿದ್ಯಾರ್ಥಿಗಳಾದ ನಮಗೆ ನೀವು ಈ ಬಾರಿ ಫೇಲಾಗುತ್ತೀರಿ ಎಂದು ನೇರವಾಗಿ ಹೇಳುತ್ತಾರೆ. ವಿದ್ಯಾರ್ಥಿಗಳ ಜೀವನವನ್ನು ನರಕಯಾತನೆಗೆ ಸಿಲುಕಿಸುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಈ ನರ್ಸಿಂಗ್ ಕಾಲೇಜಿನಲ್ಲಿ ಕ್ರಮಗಳು ಹೆಚ್ಚಾಗಿದ್ದು, ಈ ಕಾಲೇಜಿನ ಆಡಳಿತ ಮಂಡಳಿಗೆ ಸಂಬಂಧಪಟ್ಟವರು ಮತ್ತು ಸರ್ಕಾರ ಇತ್ತ ಗಮನಹರಿಸಿ ರಕ್ಷಣೆ ಕೊಡಿಸಿ. ನಮ್ಮಗಳ ವಿದ್ಯಾಭ್ಯಾಸಕ್ಕೆ ಅನುವು ಮಾಡಿಕೊಡಬೇಕೆಂದು ಪ್ರತಿಭಟನೆ ವೇಳೆ ಒತ್ತಾಯಗಳು ಕೇಳಿಬರುತ್ತಿದ್ದವು.



ಆಡಳಿತ ಮಂಡಳಿ ವಿರುದ್ಧ ವಿದ್ಯಾರ್ಥಿಗಳು ಪ್ರತಿಭಟಿಸುತ್ತಿರುವುದು

ವಿಚಾರ ತಿಳಿದ ಮೃತೆ ಅನಾಮಿಕ ವಿನೀತ ವಿದ್ಯಾರ್ಥಿನಿಯ ತಂದೆ ವಿನೀತ್ ಕುಮಾರ್ ನಾವತ್‌ರವರು ಹಾರೋಹಳ್ಳಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ದೂರಿನಲ್ಲಿ ತಿಂಗಳ ಹಿಂದೆ ನನ್ನ ಮಗಳು ಅನಾಮಿಕ ಕೇರಳದ ನಮ್ಮ ಮನೆಗೆ ಬಂದಿದ್ದಳು. ಆ ಸಮಯದಲ್ಲಿ ನಮ್ಮ ಕಾಲೇಜಿನಲ್ಲಿ ನಾನು ಓದಲು ಸಾಧ್ಯವಾಗುತ್ತಿಲ್ಲ. ಆಡಳಿತ ಮಂಡಳಿ ನನಗೆ ತುಂಬಾ ತೊಂದರೆ ನೀಡುತ್ತಿದೆ ಎಂದು ಅಳಲು ತೋಡಿಕೊಂಡಿದ್ದಳು. ಆಗ ನಾನು ಧೈರ್ಯ ತುಂಬಿ ಸಮಾಧಾನ ಮಾಡಿ ಕಾಲೇಜಿಗೆ ಕಳುಹಿಸಿದ್ದೆ. ಫೆಬ್ರವರಿ 4ರಂದು ಮಧ್ಯಾಹ್ನ ಸುಮಾರು 2 ಗಂಟೆಗೆ ಮಗಳು ಕರೆ ಮಾಡಿ ಈ ಕಾಲೇಜಿನಲ್ಲಿ ನನಗೆ ತುಂಬಾ ಹಿಂಸೆಯಾಗುತ್ತಿದೆ ಎಂದು ಹೇಳಿದ್ದಳು. ನಾನು ಊರಿನಿಂದ ಬಂದು ಆಡಳಿತ ಮಂಡಳಿಯ ಜೊತೆ ಮಾತನಾಡುವೆ ಎಂದು ಧೈರ್ಯ ಹೇಳಿದ್ದೆ. ಆದರೆ ಅದೇ ದಿನ ರಾತ್ರಿ 10 ಗಂಟೆಗೆ ಹಾಸ್ಟೆಲ್‌ನ ವಾರ್ಡನ್ ಕರೆ ಮಾಡಿ ನಿಮ್ಮ ಮಗಳು ಅನಾಮಿಕ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾಳೆಂದು ತಿಳಿಸಿದರು. ಈ ಕಾಲೇಜಿನ ಪ್ರಾಂಶುಪಾಲರು ಬ್ಲಾಕ್ ಲಿಸ್ಟ್‌ಗೆ ಹಾಕುವುದಾಗಿ ಹೆದರಿಸಿದ್ದರು ಎಂದು ತಿಳಿದು ನನ್ನ ಮಗಳು ಆತ್ಮಹತ್ಯೆ ಮಾಡಿಕೊಂಡಿದ್ದು, ನನ್ನ ಮಗಳ ಸಾವಿಗೆ ಈ ಆಡಳಿತ ಮಂಡಳಿ ಮತ್ತು ಪ್ರಾಂಶುಪಾಲರ ವಿರುದ್ಧ ಕಾನೂನು ರೀತಿ ಕ್ರಮ ಕೈಗೊಳ್ಳಬೇಕೆಂದು ದೂರಿನಲ್ಲಿ ಸ್ಪಷ್ಟಪಡಿಸಿದ್ದಾರೆ.



ಹಾಸ್ಟೆಲ್ ಮುಂದೆ ಮಾತಿನ ಚಕಮಕಿ

ಪ್ರಾಂಶುಪಾಲರು ಹಾಗೂ ಒಬ್ಬ ಉಪನ್ಯಾಸಕರ ವಿರುದ್ಧ ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್) ಸೆಕ್ಷನ್ 108ರ ಅಡಿ (ಆತ್ಮಹತ್ಯೆಗೆ ಪ್ರಚೋದನೆ) ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ತಿಳಿದು ಬಂದಿದೆ. ಘಟನಾ ಸ್ಥಳದ ಕೊಠಡಿಯಲ್ಲಿ ಎರಡು ಡೆತ್‌ನೋಟ್‌ಗಳು ಸಿಕ್ಕಿವೆ. ಈ ಪೈಕಿ ಒಂದು ಮಾತ್ರ ಪೊಲೀಸರ ಕೈಗೆ ಸಿಕ್ಕಿದೆ. ಮತ್ತೊಂದರಲ್ಲಿ ಕಾಲೇಜಿನ ಆಡಳಿತ ಮಂಡಳಿಯವರ ಕಿರುಕುಳದ ಕುರಿತಾದ ವಿಚಾರಗಳು ಬರೆದಿದ್ದು, ಅದನ್ನು ಮಂಡಳಿ ಮುಚ್ಚಿಟ್ಟಿದೆ ಎಂದು ಪ್ರತಿಭಟನಾ ನಿರತ ವಿದ್ಯಾರ್ಥಿಗಳು ಆಕ್ರೋಶದಿಂದ ಆರೋಪಿಸಿದ್ದರು. ಮೃತೆ ಅನಾಮಿಕ ವಿನೀತ ಮೃತದೇಹವನ್ನು ಹಾರೋಹಳ್ಳಿಸ ಸಾರ್ವಜನಿಕ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ ಶವವನ್ನು ಕುಟುಂಬಸ್ಥರಿಗೆ ಹಸ್ತಾಂತರಿಸಲಾಗಿದೆ.

ಏನೇ ಆದರೂ ನಾಲ್ಕು ತಿಂಗಳ ಹಿಂದೆ ಕಾಲೇಜಿಗೆ

☞ 12





ಆತ್ಮಹತ್ಯೆ ಮಾಡಿಕೊಂಡ ಹಾಸ್ಟೆಲ್



ಅನಾಮಿಕ ವಿನೀತ್ ಶವ ಆಸ್ಪತ್ರೆಗೆ ರವಾನಿಸುತ್ತಿರುವುದು



ಕಾಲೇಜಿನ ಮುಂದೆ ವಿದ್ಯಾರ್ಥಿಗಳು ಜಮಾವಣೆಗೊಂಡಿರುವುದು

# ಪ್ರೇಮಿಯ ಜೊತೆ ಹಾಸಿಗೆಯಲ್ಲಿ ಉರುಳಾಡಿ ಯೂಟರ್ನ್ ಪ್ರಿಯತಮನ ವಿರುದ್ಧವೇ ಟಾರ್ಚರ್ ಆರೋಪ!



**ಪಂಡರಾಪುರ ಯಾತ್ರೆಯಲ್ಲಿ ಒಂದಾದ ಜೋಡಿ ಹಾಸಿಗೆಯಲ್ಲಿ ಹೊರಳಾಡಿದ ನಂತರ ಯುವತಿ ಹೊಡೆದ ಯೂಟರ್ನ್‌ಗೆ ಯುವಕ ಸುಸ್ತೋ ಸುಸ್ತು. ದೈಹಿಕ ಸುಖ ಅನುಭವಿಸಿದ ಹುಡುಗಿ ಪ್ರಿಯತಮನ ವಿರುದ್ದವೇ ಕೊಟ್ಟ ಕಂಪ್ಲೇಂಟ್ ಯಾವ ಎಫೆಕ್ಟ್ ಆಗಿದೆ ಅಂದ್ರೆ, ಭಗ್ನ ಪ್ರೇಮಿ ಊರೇ ಬಿಡುವಂತಾಗಿದೆ. ದಿನಕ್ಕೊಂದು ಜಾಗ ಬದಲಾಯಿಸುತ್ತಾ ನಿಗೂಢ ಸ್ಥಳದಿಂದ ವಿಡಿಯೋ ಮಾಡಿ ನ್ಯಾಯಕ್ಕಾಗಿ ಪರಿಪರಿಯಾಗಿ ಬೇಡುತ್ತಿರುವ ಹುಡುಗನ ಸ್ಟೋರಿ ಇದು. ಭಗ್ನಪ್ರೇಮಿಯ ಬಾಳಲ್ಲಿ ಚೆಲ್ಲಾಟವಾಡಿದ ಯುವತಿಯ ಅಸಲಿಯತ್ತನ್ನ ಖಾಸಗಿ ಫೋಟೋಗಳು ಬಯಲು ಮಾಡಿವೆ. ಇಬ್ಬರ ಪ್ರೈವೇಟ್ ಫೋಟೋಗಳು ಯುವತಿಯ ಬಣ್ಣ ಬಯಲು ಮಾಡಿದೆ. ಯುವಕನಿಗಾಗಿ ಹುಡುಕಾಟ ನಡೆಸುತ್ತಿರುವ ಬೀದರ್ ಜಿಲ್ಲೆಯ ಹಳ್ಳಿಖೇಡಾ ಠಾಣೆ ಪೊಲೀಸರು ಯುವತಿಯ ಅಸಲಿಯತ್ತನ್ನ ಬಯಲಿಗೆಳೆಯಬೇಕಿದೆ.**

✍ ಟಿ.ಎನ್. ಕೃಷ್ಣಕುಮಾರ್

ಇದು ಬೀದರ್ ಜಿಲ್ಲೆ ಹುಮನಾಬಾದ್‌ನ ಹಳ್ಳಿಖೇಡಾ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿನಡೆದ ವಿಚಿತ್ರ ಲವ್ ಸ್ಟೋರಿ. ಸಹಜವಾಗಿ ಲವ್ ಫೇಲ್ಯೂರ್ ಪ್ರಕರಣಗಳಲ್ಲಿ ಹುಡುಗನಿಂದ ಹುಡುಗಿ ಟಾರ್ಚರ್ ಎದುರಿಸುವುದು ಸಾಮಾನ್ಯದ ಸುದ್ದಿ. ಆದ್ರೆ ಇಲ್ಲಿ ರಿವರ್ಸ್ ಆಗಿದೆ. ಯುವಕನಿಂದ ಎಲ್ಲಾ ರೀತಿಯ ಸುಖ ಪಡೆದ ಯುವತಿ ಮನೆಯವರಿಗೆ ಲವ್ ಮ್ಯಾಟರ್ ತಿಳಿಯುತ್ತಿದ್ದಂತೆಯೇ ಅದೆಂತಾ ನಾಟಕ ಆಡಿದ್ದಾಳೆ ಅಂದ್ರೆ ಈಕೆ ಹೆಣೆದ ಕಥೆಗೆ ಪೊಲೀಸರೂ ಸಹ ಬೇಸ್ತು ಬಿದ್ದಿದ್ದಾರೆ. ಹುಡುಗಿ ಬಿಟ್ಟ ರೀಲ್‌ನ ಕಂಪ್ಲೀಟ್ ಆಗಿ ಸುತ್ತಿಕೊಂಡು ಯುವಕನನ್ನ ವಿಲನ್ ತರಹ ಬಿಂಬಿಸಿ ಎಫ್ ಐಆರ್ ದಾಖಲಿಸಿ ಅರೆಸ್ಟ್ ಮಾಡೋಕೆ ಒಂದು ತಿಂಗಳಿಂದ ಎಡಬಿಡದೆ ಬೇಟೆ ಆಡ್ತಿದ್ದಾರೆ. ಇಬ್ಬರೂ ಸೇರಿ ಮಾಡಿಡ ತಪ್ಪಿಗೆ ತಾನೊಬ್ಬನೇ ಶಿಕ್ಷೆ ಅನುಭವಿಸುತ್ತಿದ್ದಾನೆ. ನನಗೆ ನ್ಯಾಯ ಬೇಕು ಎಂದು ಅಂಗಲಾಚುತ್ತಿರುವ ಈತನಿಗೆ ಕಾನೂನು ನೆರವು ಬೇಕಿದೆ.

ಬೀದರ್ ಜಿಲ್ಲೆ ಹಮ್ನಾಬಾದ್ ಸುಲ್ತಾನಾಬಾದ್‌ನ ಲೋಕೇಶ್ ಮಲ್ಲಿಕಾರ್ಜುನ ಹಾಗೂ ಸಕ್ಕೂಭಾಯಿ ಗಣಪತರಾವ್ ನಡುವೆ ನಡೆದ ಪ್ರೇಮಪ್ರಸಂಗವೇ ಈ ಸ್ಟೋರಿ. ಸಕ್ಕೂಭಾಯಿ ಅದೆಂತಹ ಕಿಲಾಡಿ ಅಂದ್ರೆ ಲೋಕೇಶ್ ಜೊತೆ ಲಾಡ್ಜ್‌ಗಳ ಹಾಸಿಗೆಯಲ್ಲಿ ಹೊರಳಾಡಿ ಖುಷಿ ಖುಷಿಯಾಗಿ ತೆಗೆಸಿಕೊಂಡ ಫೋಟೋಗಳೇ ಸಾಕ್ಷಿಯಾಗಿವೆ. ಸಕ್ಕೂಭಾಯಿ ಕಾಲೇಜಿಗೆ ಹೋಗುವಾಗ ಲೋಕೇಶ್ ಹಿಂದಿಂದೇನೇ ಫಾಲೋ ಮಾಡ್ತಾ ಲವ್ ಮಾಡುವಂತೆ ಪೀಡಿಸಿದ್ದನಂತೆ. ಲವ್ ಮಾಡದೆ ಇದ್ರೆ ನಿನ್ನ ಹಾಗೂ ನಿನ್ನ ಕುಟುಂಬವನ್ನ ಖತಂ ಮಾಡುವುದಾಗಿ ಬೆದರಿಕೆ ಹಾಕಿದ್ದನಂತೆ. ಆನ್‌ಲೈನ್‌ನಲ್ಲಿ ಫೋಟೋಗಳನ್ನ ತೆಗೆದುಕೊಂಡು ಸಾಮಾಜಿಕ ಜಾಲತಾಣದಲ್ಲಿ ಹಾಕ್ತೀನಿ ಅಂತ ಹೆದರಿಸಿದ್ದನಂತೆ. ಹೀಗೆಲ್ಲಾ ಆರೋಪಿಸಿ ಸಕ್ಕೂಭಾಯಿ ಹಳ್ಳಿಖೇಡಾ ಪೊಲೀಸ್ ಠಾಣೆಯಲ್ಲಿ ಲವರ್ ಮೇಲೇ ಕಂಪ್ಲೇಂಟ್ ಕೊಟ್ಟಿದ್ದಾಳೆ. ಇನ್ನೋ ಆ ಪೊಲೀಸ್ರಂತೂ ಹಿಂದೆ ಮುಂದೆ ಯೋಚಿಸದೆ ಕಂಪ್ಲೇಂಟ್ ದಾಖಲಿಸಿ ಎಫ್ ಐಆರ್ ಮಾಡಿ ಲೋಕೇಶ್ ಬೇಟೆಗೆ ಇಳಿದು ಬಿಟ್ಟಿದ್ದಾರೆ. ಆದ್ರೆ ಅದೃಷ್ಟವಶಾತ್ ಲೋಕೇಶ್ ತನ್ನತ್ರ ಇಟ್ಟುಕೊಂಡಿದ್ದ ಕೆಲವು ಖಾಸಗಿ ಫೋಟೋಗಳು ಅಸಲಿಯತ್ತನ್ನ ಬಯಲು ಮಾಡಿದೆ. ಸಕ್ಕೂಭಾಯಿ ಹೊಡೆದ ಯೂಟರ್ನ್ ಬೆಳಕಿಗೆ ಬಂದಿದೆ.





ಹುಮ್ನಾಬಾದ್‌ನ ಸರ್ವೋದಯ ಕಾಲೇಜ್‌ನಲ್ಲಿ ಲೋಕೇಶ್ ಬಿಕಾಂ ಓದುತ್ತಿದ್ರೆ, ಸಕ್ಕೂಭಾಯಿ ಬಿಎ ಸ್ಟೂಡೆಂಟ್. ಕಾಲೇಜಲ್ಲಿ ಓದುತ್ತಿದ್ದಾಗ ಇಬ್ಬರಿಗೂ ಅಷ್ಟೊಂದು ಪರಿಚಯ ಇಲ್ಲ. ಆದ್ರೆ, ತಮ್ಮ ಮನೆ ಏರಿಯಾದಲ್ಲಿ ಗುಂಪೊಂದು ಪಂಡರಾಪುರಕ್ಕೆ ಯಾತ್ರೆ ಅರೇಂಜ್ ಮಾಡಿದ್ರು. ಅದ್ರಲ್ಲಿ ಲೋಕೇಶ್ ಹಾಗೂ ಸಕ್ಕೂಭಾಯಿ ಕುಟುಂಬದವರೂ ಇದ್ರು. ಇಲ್ಲೇ ಶುರುವಾಯ್ತು ಇಬ್ಬರಿಗೂ ಲವ್. ಮೊದಲು ಪರಿಚಯ ನಂತರ ಮೊಬೈಲ್ ಫೋನ್ ನಂಬರ್‌ಗಳ ವಿನಿಮಯ.ಇಷ್ಟು ಸಾಕಲ್ವಾ ಬೆಂಕಿ ಕಾಯೋಕ್ಕೆ. ಯಾತ್ರೆ ಮುಗಿಯುವಷ್ಟರಲ್ಲಿ ಇಬ್ಬರ ನಡುವೆ ಅದೆಂತಹ ಗಾಢಪ್ರೇಮ ಶುರುವಾಗಿತ್ತು ಅಂದ್ರೆ ಒಬ್ಬರನ್ನ ಒಬ್ರು ಬಿಟ್ಟಿರಲಾಗದಂತಹ ಸ್ಥಿತಿ. ಬಿಕಾಂ ಮುಗಿಸಿದ್ದ ಲೋಕೇಶ್‌ಗೆ ಉತ್ತಮ ಭವಿಷ್ಯ ರೂಪಿಸಿಕೊಳ್ಳುವ ಛಲ ಇತ್ತು. ಈ ಮಧ್ಯೆ ಲವ್ ಬೇರೆ ಅಟಕಾಯಿಸಿಕೊಂಡಿತ್ತು. ಒಂದೆಡೆ ಲವ್ ಮತ್ತೊಂದೆಡೆ ಫ್ಯೂಚರ್. ಎರಡು ಸಂದಿಗ್ಧತೆಯ ಮಧ್ಯೆ ಲೋಕೇಶ್ ಕಾಂಪಿಟಿಟಿವ್ ಎಕ್ಸಾಂಗಳನ್ನ ತೆಗೆದುಕೊಂಡಿದ್ದ. ಕೆಲವು ಆಪ್‌ಗಳಲ್ಲಿ ಬರುವ ಆನ್ ಲೈನ್ ಕೋಚಿಂಗ್‌ಗಳನ್ನ ಅಟೆಂಡ್ ಮಾಡ್ತಿದ್ದ. ಭವಿಷ್ಯದ ಚಿಂತೆಯಲ್ಲಿದ್ದ ಲೋಕೇಶ್ ಮನಸ್ಸನ್ನ ಸಕ್ಕೂಭಾಯಿ ಚಂಚಲತೆಗೆ ಕೊಂಡೊಯ್ದಳು. ನಾನೂ ಕಾಂಪಿಟಿಟಿವ್ ಎಕ್ಸಾಂ ತಗೋತೀನಿ ಕ್ಲಾಸ್ ಅಟೆಂಡ್ ಮಾಡ್ತೀನಿ ಅಂತ ಮತ್ತಷ್ಟು ಹತ್ತಿರವಾದ್ಲು. ಕೋಚಿಂಗ್ ತೆಗೆದುಕೊಳ್ಳುವ ಭರದಲ್ಲಿ ಇಬ್ಬರೂ ಮತ್ತಷ್ಟು ಹತ್ತಿರವಾದ್ರು.


ಲೋಕೇಶ್ ಪರಿಶಿಷ್ಠ ಪಂಗಡಕ್ಕೆ ಸೇರಿದವನು. ಸಕ್ಕೂಭಾಯಿ ಮರಾಠಾ ಜನಾಂಗದವಳು. ಲವ್ ಆಕರ್ಷಣೆಯಲ್ಲಿದ್ದ ಸಕ್ಕೂಭಾಯಿಗೆ ಜಾತಿ ಅಡ್ಡಿಯಾಗಲಿಲ್ಲ, ಮದುವೆ ಪ್ರಸ್ತಾಪವನ್ನೂ ಮುಂದಿಟ್ಲು, ನಿನ್ನನ್ನೇ ಮದುವೆ ಆಗೋದು ಅಂತಾ ನಂಬಿಕೆ ಹುಟ್ಟಿಸಿದ್ಲು. ಸಿನಿಮಾ ಪಾರ್ಕ್‌ಗಳು ಮಾತನಾಡುವ ಸೆಂಟರ್ ಆಯ್ತು. ಮುಂದಿನ ಹೆಜ್ಜೆ ಲಾಡ್ಜ್. ಮದುವೆ ಆಗೇ ಆಗ್ತೀನಿ ಅಂತ ನಂಬಿಸಿ ಲಾಡ್ಜ್ ಮೆಟ್ಟಿಲು ಹತ್ತಿದ್ಲು.ಇದೆಲ್ಲಾ ಬೇಡ ನಾನು ಓದಬೇಕು ಕೆಲಸ ಮಾಡಬೇಕು ಅಂತೆಲ್ಲಾ ಹೇಳಿದ್ರೂ ಕೇಳದ ಸಕ್ಕೂಭಾಯಿ ಸರ್ವಸ್ವವನ್ನೂ ಅರ್ಪಿಸಿಬಿಟ್ಲು. ನೆನಪಿನಾರ್ಥವಾಗಿ ಕೆಲವು ಫೋಟೋಗಳು ವಿಡಿಯೋಗಳು ಮೊಬೈಲ್‌ನಲ್ಲಿ ರೆಕಾರ್ಡ್ ಆದವು.ಹಾಸಿಗೆಯಲ್ಲಿ ಹೊರಳಾಡಿದ ವಿಡಿಯೋ ಫೋಟೋಗಳು ಇಬ್ಬರ ಮೊಬೈಲ್‌ನಲ್ಲೂ ಭದ್ರವಾದವು. ಇಬ್ಬರ ನಡುವೆ ಎಲ್ಲವೂ ಸರಿಯಾಗೇ ನಡೆದಿತ್ತು. ಇವರಿಬ್ಬರ ಕಾಮದಾಟಕ್ಕೆ ಸಾಕಷ್ಟು ಲಾಡ್ಜ್‌ಗಳ ಹಾಸಿಗೆಗಳೂ ಸಾಕ್ಷಿಯಾಗಿತ್ತು. ತಾನೊಂದು ಬಗೆದರೆ ದೈವ ಒಂದು ಬಗೆದಂತೆ ಎಂಬ ಗಾದೆ ಇವರಿಬ್ಬರ ಬಾಳಲ್ಲಿ ನಡೆದುಹೋಯ್ತು. ಕಳ್ಳಬೆಕ್ಕುಗಳ ಆಟ ಸಕ್ಕೂಭಾಯಿ ಮನೆಯವರಿಗೆ ತಿಳಿದುಹೋಯ್ತು.

ಸಕ್ಕೂಭಾಯಿ ತನ್ನ ಮೊಬೈಲ್‌ನ ತನ್ನ ತಮ್ಮನಿಗೆ ಕೊಟ್ಟಿದ್ಲು, ತಮ್ಮನ ಕಣ್ಣಿಗೆ ಇಬ್ಬರ ಕಾಮದಾಟದ ವಿಡಿಯೋ ಹಾಗೂ ಫೋಟೋಗಳು ಬಿದ್ದವು. ಮನೆಯಲ್ಲಿ ದೊಡ್ಡ ರಾದ್ಧಾಂತವೇ ನಡೆದುಹೋಯ್ತು. ತಾನು ಬಚಾವ್ ಆಗಲು ಇಲ್ಲಸಲ್ಲದ ನೆಪ ಒಡ್ಡಿ ಪ್ರಿಯತನಮ ಕೊರಳಿಗೆ ಹಗ್ಗ ಹಣೆದಳು.ಮಾಟ ಮಂತ್ರ ಮಾಡಿ ವಶೀಕರಿಸಿಕೊಂಡಿದ್ದಾನೆ. ಜ್ಯೂಸ್ ನಲ್ಲಿ ಗುಳಿಗೆ ಹಾಕಿಕೊಟ್ಟಿದ್ದಾನೆ. ಕಾಲೇಜ್‌ಗೆ ಹೋಗುವಾಗ ಹಿಂದೆ ಬಂದು ಚುಡಾಯಿಸ್ತಾನೆ ಅಂತ ಪುಂಗಿ ಆಟವಾಡಿ ಮನೆಯವರನ್ನ ಒಪ್ಪಿಸಿ ಯೂಟರ್ನ್ ಹೊಡೆದು ಪೊಲೀಸ್ ಠಾಣೆಯಲ್ಲಿ ಮೊಕದ್ದಮೆ ದಾಖಲಿಸಿದ್ದಾಳೆ. ಯಾವಾಗ ಪ್ರಕರಣ ದಾಖಲಾಯ್ತೋ ಆವತ್ತು ಮನೆ ಬಿಟ್ಟ ಲೋಕೇಶ್ ಊರೂರು ಅಲೆಯುತ್ತಿದ್ದಾನೆ. ಯಾವ ಸಮಯದಲ್ಲಿ ಪೊಲೀಸ್ರು ಬಂದು ಎತ್ತಾಕಿಕೊಂಡು ಹೋಗ್ತಾರೋ ಎಂಬ ಭಯದಲ್ಲಿ ತಲೆ ಮರೆಸಿಕೊಂಡಿದ್ದಾನೆ. ನಿಗೂಢ ಪ್ರದೇಶದಿಂದ ಸೆಲ್ಫೀ ವಿಡಿಯೋ ಮಾಡಿರುವ ಲೋಕೇಶ್ ತನಗೆ ನ್ಯಾಯ ದೊರಕಿಸುವಂತೆ ಅಂಗಲಾಚುತ್ತಿದ್ದಾನೆ. ತನಗೆ ತನ್ನ ಕುಟುಂಬಕ್ಕೆ ಜೀವಭಯ ಇದೆ ಎನ್ನುವ ಲೋಕೇಶ್ ರಕ್ಷಣೆ ಬೇಕೆಂದು ಅವಲತ್ತುಕೊಂಡಿದ್ದಾನೆ. ಇಬ್ಬರೂ ಸೇರಿ ಮಾಡಿದ ತಪ್ಪಿಗೆ ಒಬ್ಬನಿಗೆ ಮಾತ್ರ ಟಾರ್ಚರ್ ಆಗಿದೆ.

## ಖಾಸಗಿ ಫೋಟೋಗಳು ಬಿಚ್ಚಿಟ್ಟ ರಹಸ್ಯ!

ಇಬ್ಬರ ನಡುವೆ ನಡೆದಿರುವ ಪ್ರಣಯ ಪ್ರಸಂಗಗಳ ಒಂದೊಂದು ಫೋಟೋ ಅಸಲಿ ಬಣ್ಣವನ್ನ ಪ್ರದರ್ಶಿಸುತ್ತಿದೆ. ಯಾವುದೇ ಫೋಟೋದಲ್ಲಿ ಸಕ್ಕೂಭಾಯಿ ಹೆದರಿದಂತ ಭಾವನೆ ಪ್ರದರ್ಶಿಸಿಲ್ಲ.ತನ್ನಿಷ್ಟದಂತೆಯೇ ಫೋಸ್ ಕೊಟ್ಟಂತೆ ಭಾಸವಾಗುತ್ತಿದೆ.ಹಾಸಿಗೆಯಲ್ಲಿ ಒಬ್ಬರ ಮೇಲೊಬ್ಬರು ಮಲಗಿರುವ ಫೋಟೋಗಳು ನೈಜತೆಯನ್ನ ಹೇಳುತ್ತಿದೆ.ಬೆತ್ತಲೆ ಫೋಟೋಗಳಂತೂ ಇಬ್ಬರ ನಡುವಿನ ಉತ್ತಮ ಸಂಭಂಧಕ್ಕೆ ಪುಷ್ಠಿ ನೀಡಿದಂತೆ ಕಾಣಿಸುತ್ತಿವೆ. ಲೋಕೇಶ್ ಜೊತೆ ಬೆತ್ತಲೆಯಾಗಿ ಮಲಗಿ ರಾಜಾರೋಷವಾಗಿ ಫೋಸ್ ಕೊಟ್ಟಿರುವ ಸಕ್ಕೂಭಾಯಿ ಫೋಟೋಗಳು ಸತ್ಯಾಂಶ ಹೇಳುತ್ತಿವೆ. ಗುಳಿಗೆ ತಿಂದು ಮತ್ತು ಬಂದಂತಹ ಯಾವುದೇ ಕುರುಹುಗಳು ಇದರಲ್ಲಿ ಕಾಣುತ್ತಿಲ್ಲ, ಸಕ್ಕೂಭಾಯಿ ಕೊಟ್ಟ ಸುಳ್ಳು ಕಂಪ್ಲೇಂಟ್ ದಾಖಲಿಸಿಕೊಂಡಿರುವ ಹಳ್ಳಿಖೇಡಾ ಪೊಲೀಸರು ನಿಜಾಂಶ ತಿಳಿಯದೆ ಲೋಕೇಶ್‌ನ ಜೈಲಿಗಟ್ಟುವ ಯೋಚನೆಯಲ್ಲೇ ಇದ್ದಾರೆ.










ಉತ್ತಮ ಭವಿಷ್ಯ ರೂಪಿಸಿಕೊಳ್ಳಬೇಕಿದ್ದ ಯುವಕ ನೀಗ ಹುಡುಗಿಯ ಮೋಹಕ್ಕೆ ಬಿದ್ದು ವಿಲ ವಿಲ ಒದ್ದಾಡುತ್ತಿದ್ದಾನೆ. ಕೆಎಎಸ್ ಎಕ್ಸಾಂಗೆ ಪ್ರಿಪೇರ್ ಆಗಬೇಕಿದ್ದ ಲೋಕೇಶ್ ತಲೆಮರೆಸಿಕೊಳ್ಳುವ ಪರಿಸ್ಥಿತಿ ಬಂದಿದೆ. ಅತಂತ್ರ ಸ್ಥಿತಿ ತಲುಪಿರುವ ಲೋಕೇಶ್‌ಗೆ ನ್ಯಾಯ ಬೇಕಿದೆ.

ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಈ ಫೋಟೋಗಳನ್ನ ಸಾಕ್ಷಿಯಾಗಿ ಪಡೆದು ನಿಜವಾದ ತನಿಖೆ ನಡೆಸಿ ಸತ್ಯಾಸತ್ಯತೆಯನ್ನ ಬಯಲಿಗೆಳೆಯಬೇಕಿದೆ.ಕಾನೂನು ಎಲ್ಲರಿಗೂ ಒಂದೇ. ಹುಡುಗನಾಗಲಿ ಹುಡುಗಿಯಾಗಲಿ ತಪ್ಪು ತಪ್ಪೇ. ಕಾನೂನಿನ ಮುಂದೆ ಎಲ್ಲರೂ ಒಂದೇ. ಕಾನೂನಿಗೆ ತಲೆಬಾಗಲೇಬೇಕಿದೆ.ಹೆಣ್ಣುಮಕ್ಕಳ ಪರವಾಗಿ ಕಾನೂನು ಇದೆ ಅಂತ ಅನಾವಶ್ಯಕವಾಗಿ ಒಬ್ಬ ಯುವಕನ ಭವಿಷ್ಯದಲ್ಲಿ ಚೆಲ್ಲಾಟ ಆಡುವುದು ಸೂಕ್ತವಲ್ಲ, ಫೋಟೋಗಳನ್ನ ಸೂಕ್ಷ್ಮವಾಗಿ ಪರಿಶೀಲಿಸಿ ನಂತರ ಶಿಕ್ಷೆಗೆ ಗುರಿಪಡಿಸಲಿ. ತಪ್ಪು ಮಾಡಿದ್ರೆ, ಖಂಡಿತ ಶಿಕ್ಷೆಯಾಗಲಿ. ಹಳ್ಳಿಖೇಡಾ ಪೊಲೀಸರೇ ನಿಜವಾಗಿಯೂ ಈ ಪ್ರಕರಣದಲ್ಲಿ ನ್ಯಾಯ ಒದಗಿಸುವಂತಿದ್ರೆ ಪ್ರಾಮಾಣಿಕವಾಗಿ ತನಿಖೆ ನಡೆಸಿ...

☯

# ಹೆಂಡತಿಯನ್ನು ಬಡಿದು ನೀರಿನ ಸಂಪಿಗೆ ಹಾಕಿ ಮುಚ್ಚಿದ ಗಂಡ!

**ಈ ದಂಪತಿಗಳಿಬ್ಬರಿಗೂ ಎದೆ ಎತ್ತರಕ್ಕೆ ಬೆಳೆದು ನಿಂತ ಇಬ್ಬರು ಗಂಡು ಮಕ್ಕಳಿದ್ದು ಹಿರಿಯ ಮಗನಿಗೆ ಮದುವೆ ಮಾಡಿದ್ದಾರೆ. ಆದರೂ ಇವರಿಗೆ ಈ ವಯಸ್ಸಿನಲ್ಲಿ ಇದೆಲ್ಲಾ ಬೇಕಿತ್ತಾ... ಗಂಡ ಬೇರೊಬ್ಬಳ ಜೊತೆ ಅಕ್ರಮ ಸಂಬಂಧ ಇಟ್ಟುಕೊಂಡಿದ್ದಾನೆ ಎಂದು ಮುನಿಸಿಕೊಂಡು ಮಕ್ಕಳೊಡನೆ ಮನೆಬಿಟ್ಟು ಬೇರೊಂದು ಊರಿನಲ್ಲಿ ಮನೆ ಮಾಡಿಕೊಂಡಿದ್ದಳು ಹೆಂಡತಿ. ಇತ್ತ ಹೆಂಡತಿ ಮಕ್ಕಳು ಮನೆ ಬಿಟ್ಟು ಹೋದ ಮೇಲೆ ಗಂಡನಿಗೆ ಊಟ ತಿಂಡಿ ಮಾಡಿಕೊಡುವವರು ಯಾರು ಇಲ್ಲದೆ ಅನ್ನಕ್ಕಾಗಿ ಮನೆಮನೆ ಅಲೆಯುವ ಪರಿಸ್ಥಿತಿ ಬಂದೊದಗಿತ್ತು. ಹೆಂಡತಿ ಎಷ್ಟೇ ಕರೆದರೂ ಗಂಡನಿಗೆ ಒಂದು ಲೋಟ ನೀರು ಕೊಡದಷ್ಟು ನಿಕೃಷ್ಠವಾಗಿ ಕಡೆಗಣಿಸುತ್ತಿದ್ದಳು. ಇದರಿಂದ ಗಂಡನ ಕೊಪ ದಿನೇದಿನೇ ತಾರಕಕ್ಕೆರುತ್ತಿತ್ತು. ಅದೊಂದು ದಿನ ಆತನ ಸಹನೆಯ ಕಟ್ಟೆಯೊಡೆದು ಹೆಂಡತಿಯ ತಲೆಗೆ ಬಲವಾಗಿ ಬಡಿದೆ ಬಿಟ್ಟ. ಇದರಿಂದ ಮೂರ್ಛೆಹೋದ ಅವಳು ಅಲ್ಲೇ ಇದ್ದ ನೀರಿನ ಸಂಪಿನೊಳಗೆ ಕುಸಿದು ಬಿದ್ದಳು. ನೀರಿನ ಸಂಪಿಗೆ ಬಿದ್ದ ಹೆಂಡತಿಯನ್ನು ಕಾಪಾಡುವ ಬದಲು ಗಂಡ ಸಂಪಿನ ಬಾಗಿಲು ಮುಚ್ಚಿಹೋಗಿಯೇ ಹೋಗಿಬಿಟ್ಟ. ಅಲ್ಲಿಯೇ ಆಕೆಯ ಪ್ರಾಣಪಕ್ಷಿ ಹಾರಿಹೋಗಿತ್ತು. ಘಟನೆಯಿಂದ ಹೆಂಡತಿ ಪ್ರಾಣ ಕಳೆದುಕೊಂಡರೆ ಗಂಡ ಜೈಲು ಪಾಲಾಗಿದ್ದಾನೆ.**



ಆರೋಪಿ ರಾಜು

**ಚಾಮರಾಜನಗರ**

✍ ಎಸ್. ಸ್ವಾಮಿ

ಈ ದುರ್ಘಟನೆ ನಡೆದಿರುವುದು ಚಾಮರಾಜನಗರ ಜಿಲ್ಲೆ ಹನೂರು ತಾಲೂಕು ಕುರುಬರ ದೊಡ್ಡಿ ಗ್ರಾಮದಲ್ಲಿ, ಗ್ರಾಮದ ಲೇಟ್ ಸಿದ್ದೇಗೌಡನ ಮಗ ಸುಮಾರು 56 ವರ್ಷದ ರಾಜು ಅಲಿಯಾಸ್ ಕಜ್ಜಾಯ ರಾಜು. ಪತ್ನಿ ರಾಜಮ್ಮ ಗಂಡ ರಾಜು ಎಂಬಾತನಿಂದ ಹತಳಾದ ದೌರ್ಭಾಗ್ಯೆ. 1994ರಲ್ಲಿ ರಾಮಾಪುರ ಗ್ರಾಮದ ಮಾದೇಗೌಡರವರ ಮಗಳಾದ ರಾಜಮ್ಮಳನ್ನು ರಾಜು ಮದುವೆಯಾಗಿದ್ದು ಇವರಿಗೆ ಇಬ್ಬರು ಗಂಡು ಮಕ್ಕಳು ಹಿರಿಯ ಮಗ ಸತೀಶ್ ಮದುವೆಯಾಗಿ ಹೆಂಡತಿಯೊಡನೆ ಬೆಂಗಳೂರಿನಲ್ಲಿ ವಾಸವಿದ್ದು ಆಗಾಗ ಊರಿಗೆ ಬಂದು ಹೋಗುತ್ತಾನೆ. ಎರಡನೆಯವನು ಸಂತೋಷ್ ಈತ ರಾಮಪುರದ ಬಸವರಾಜು ಎಂಬುವರ ಬಳಿ ಡ್ರೈವರ್ ಆಗಿ ಕೆಲಸ ಮಾಡಿಕೊಂಡಿರುತ್ತಾನೆ ಈತನಿಗೆ ಇನ್ನೂ ಮದುವೆಯಾಗಿಲ್ಲ, ಆದರೆ ಬಾಳಿ ಬದುಕಿ ಮಕ್ಕಳು, ಮೊಮ್ಮಕ್ಕಳಿಗೆ ಆದರ್ಶವಾಗಬೇಕಿದ್ದ ಇಳಿ ವಯಸ್ಸಿನಲ್ಲಿ ರಾಜಮ್ಮ ಹಟಕ್ಕೆ ಬಿದ್ದು ಉಸಿರು ಚೆಲ್ಲಿದ್ದಾಳೆ. ಗಂಡ ರಾಜು ಜೈಲು ಸೇರಿ ಅನಗತ್ಯವಾಗಿ ಬದುಕನ್ನು ಕೊನೆಗಾಣಿಸಿ ಕೊಂಡಿದ್ದಾರೆ.



ರಾಜಮ್ಮ ಬದುಕಿದ್ದಾಗ

ರಾಜು ಈ ಹಿಂದಿನಿಂದಲೂ ವ್ಯವಸಾಯ ಮಾಡಿಕೊಂಡು ಅದರ ಜೊತೆಗೆ ತಿಂಡಿ ಪದಾರ್ಥಗಳನ್ನು ಅಂಗಡಿಗಳಿಗೆ ಮಾರಾಟ ಮಾಡುವ ಕೆಲಸ ಮಾಡಿಕೊಂಡಿದ್ದ ರಾಜುಗೆ ಪಿತ್ರಾರ್ಜಿತವಾಗಿ ಬಂದಂತಹ ಸುಮಾರು 4.5 ಎಕರೆ ಜಮೀನು ಹಾಗೂ ಸ್ವಯಾರ್ಜಿತವಾಗಿ ಸಂಪಾದಿಸಿದ ನಾಲ್ಕು ಎಕರೆ ಜಮೀನನ್ನು ಇಬ್ಬರು ಮಕ್ಕಳಿಗೆ ಸಮನಾಗಿ ಭಾಗ ಮಾಡಿಕೊಟ್ಟಿದ್ದಾನೆ. ಅಲ್ಲದೆ ತನ್ನ ಹೆಂಡತಿ ಹೆಸರಿಗೆ ವಾಸದ ತೊಟ್ಟಿ ಮನೆ, ಹೊಸದಾಗಿ ಆರ್.ಸಿ.ಸಿ ಮನೆ ಕಟ್ಟುತ್ತಿರುವ ಜಾಗ ಹಾಗೂ ನಿಂಗಮ್ಮರವರ ಮನೆಯ ಪಕ್ಕದ ಜಾಗ ಹಾಗೂ ಅರ್ಧ ಎಕರೆ ತೋಟ ಬರೆದು ಕೊಟ್ಟಿದ್ದಾನೆ.

ಗಂಡ ಹೆಂಡತಿ ಮಕ್ಕಳು ಈಗ್ಗೆ ಸುಮಾರು ಏಳು ತಿಂಗಳವರೆಗೆ ಅನ್ಯೋನ್ಯವಾಗಿ ಜೀವನ ಮಾಡಿಕೊಂಡಿದ್ದರು. ಕಳೆದ ವರ್ಷ ಅಂದರೆ ಸುಮಾರು ಎಂಟು ತಿಂಗಳ ಹಿಂದೆ ಹಿರಿಯ ಮಗ ಸತೀಶನಿಗೆ ಮದುವೆ ಮಾಡಿದ್ದರು. ತದನಂತರದಲ್ಲಿ ಸಣ್ಣಪುಟ್ಟ ವಿಚಾರಕ್ಕೆ ಹೆಂಡತಿ ಮತ್ತು ಮಕ್ಕಳ ನಡುವೆ ಸಣ್ಣಪುಟ್ಟ ವಿಚಾರಕ್ಕೆ ವೈಮನಸ್ಸು ಉಂಟಾಗಿ ಮಾತಿಗೆ ಮಾತು ಬೆಳೆದಿತ್ತು. ಮೃತೆ ರಾಜಮ್ಮ ಹಾಗೂ ಮಕ್ಕಳು ತಂದೆ ರಾಜುಗೆ ತಿಳಿಯದಂತೆ ಹಣಕಾಸಿನ ವ್ಯವಹಾರ ಮಾಡುತ್ತಿದ್ದರು. ಕೊನೆಗೆ ಈ ವಿಚಾರ ಗಂಡನಿಗೆ ತಿಳಿದು ಒಬ್ಬರಿಗೊಬ್ಬರಿಗೆ ಗಲಾಟೆ ಆಗಿತ್ತು. ಆಗ ರಾಜಮ್ಮ ಮತ್ತು ಮಕ್ಕಳು ರಾಮಪುರಕ್ಕೆ ಬಂದು ಪ್ರತ್ಯೇಕವಾಗಿ ಮನೆ ಮಾಡಿಕೊಂಡು ವಾಸವಿದ್ದರು.

ಇವರುಗಳನ್ನು ಎಷ್ಟೇ ಕರೆದರೂ ವಾಪಸು ಮನೆಗೆ ಬರುತ್ತಿರಲಿಲ್ಲ, ಈ ವೇಳೆ ರಾಜು ತನ್ನ ಅಕ್ಕ ಭಾವ ಹಾಗೂ ಮುಖಂಡರ ಮುಖೇನ ಹೆಂಡತಿ, ಮಕ್ಕಳಿಗೆ ಬುದ್ಧಿವಾದ ಹೇಳಿಸುತ್ತಾನೆ ಆದರೂ ಅವರು ಒಪ್ಪುವುದಿಲ್ಲ, ತನ್ನೆಲ್ಲಾ ಆಸ್ತಿಯನ್ನು ಹೆಂಡತಿ, ಮಕ್ಕಳ ಹೆಸರಿಗೆ ಮಾಡಿದ್ದರು. ಹೆಂಡತಿ ಮಕ್ಕಳು ತಂದೆ ರಾಜುವನ್ನು ನೋಡಿಕೊಳ್ಳದೆ ಆತನ ಮೇಲೆ ಮುನಿಸಿಕೊಂಡು ಪ್ರತ್ಯೇಕವಾಗಿ ವಾಸವಿದ್ದರಿಂದ ಈ ಬಗ್ಗೆ ನಾಲ್ಕು ತಿಂಗಳ ಹಿಂದೆ ರಾಜು ಹೆಂಡತಿ ಮಕ್ಕಳ ವಿರುದ್ದ ರಾಮಪುರ ಠಾಣೆಗೆ ದೂರು ನೀಡಿದ್ದನು. ಈ ವಿಚಾರದಲ್ಲಿ ಹೆಂಡತಿ ಹಾಗೂ ಮಕ್ಕಳು ಗ್ರಾಮದ ಮುಖಂಡರನ್ನು ಸೇರಿಸಿ ನ್ಯಾಯ ಪಂಚಾಯಿತಿ ಮಾಡಿಸಿ ತಂದೆ ಜೀವನಾಂಶಕ್ಕೆ ತಮ್ಮ ಹೆಸರಿನಲ್ಲಿದ್ದ ಜಮೀನಿನಲ್ಲಿ ಒಂದೊಂದು ಎಕರೆ ಜಮೀನನ್ನು ರಾಜು ಹೆಸರಿಗೆ ಬರೆದುಕೊಡುತ್ತಾರೆ. ಆದರೆ ಹೆಂಡತಿ, ಮಕ್ಕಳು ಕುರುಬರದೊಡ್ಡಿಗೆ ಬಾರದೇ ರಾಮಪುರದಲ್ಲಿ ಉಳಿದುಕೊಳ್ಳತ್ತಾರೆ. ಇದರಿಂದಾಗಿ ರಾಜು ಊಟೋಪಚಾರಕ್ಕೆ ತುಂಬಾ ತೊಂದರೆ ಆಗುತ್ತದೆ.

ಈ ಕಾರಣಕ್ಕೆ ತನ್ನ ಚಿಕ್ಕಮ್ಮ ಅಂದರೆ ರಾಜು ದಾಯಾದಿ ಸಂಬಂಧಿಸಿದ ಸಿದ್ದೇಗೌಡನ ಹೆಂಡತಿ ಕೆಂಪಮ್ಮರವರ ಮನೆಯಲ್ಲಿ ಬೆಳಗಿನ ತಿಂಡಿ ಮಾಡಿಕೊಂಡು ಸಂಜೆಗೆ ಜಮೀನು ಮನೆಯಲ್ಲಿರುವ ಆತನ ಅಕ್ಕ ಮಹಾದೇವಮ್ಮ ಲೇಟ್ ವೆಂಕಟೇಗೌಡರ ಮನೆಯಲ್ಲಿ ಸಂಜೆಯ ಊಟ ಮಾಡಿಕೊಂಡು ತನ್ನ ಬಟ್ಟೆಯನ್ನು ತಾನೇ ತೊಳೆದುಕೊಂಡು ಜೀವನ ಮಾಡಿಕೊಂಡಿರುತ್ತಾನೆ. ತನ್ನ ಆಸ್ತಿ-ಪಾಸ್ತಿಯನ್ನೆಲ್ಲಾ ಹೆಂಡತಿ ಮಕ್ಕಳ ಹೆಸರಿಗೆ ಬರೆದು ಕೊಟ್ಟರು ಅವರು ಈತನ ಮೇಲೆ ವಿನಾಕಾರಣ ಕೋಪಗೊಂಡು ಪ್ರತ್ಯೇಕವಾಗಿದ್ದುಕೊಂಡಿದ್ದರಿಂದ ರಾಜು ಒಂದೊಂದು ಹೊತ್ತಿನ ಊಟಕ್ಕೂ ಬೇರೆಯವರ ಮನೆ ಬಾಗಿಲಿಗೆ ಅಲೆಯಬೇಕಾಗಿರುತ್ತದೆ. ಹೀಗಾಗಿ ಮಕ್ಕಳು ನನ್ನ ಜೊತೆ ಇಲ್ಲದಿದ್ದರೂ ಪರವಾಗಿಲ್ಲ ನನ್ನ ಹೆಂಡತಿ ಆದರೂ ನನ್ನ ಜೊತೆ ಇಲ್ಲವಲ್ಲ ಎಂಬ ಬೇಸರ ರಾಜುನನ್ನು ತುಂಬಾ ಕಾಡುತ್ತಿತ್ತು. ಅಲ್ಲದೆ ಇದರಿಂದಾಗಿ ಊರಿನಲ್ಲಿ ಮಾನ ಮರ್ಯಾದೆ ಹೋಗಿತ್ತು.



ಎಸ್ಪಿ ಡಾ. ಕವಿತಾ



ಸಿಪಿಐ ಪಿ.ಎನ್. ಶೇಷಾದ್ರಿ



ಗಂಡನಿಂದ ಕೊಲೆಯಾದ ರಾಜಮ್ಮ

ಹೀಗಿರುವಾಗ ಕಳೆದ ಒಂದು ತಿಂಗಳ ಹಿಂದೆ ತನ್ನ ಹೆಂಡತಿ ರಾಜಮ್ಮಳು ಕಿರಿಯ

☞ 10

# ಹೆಂಡತಿಯನ್ನು ಬಡಿದು ನೀರಿನ ಸಂಪಿಗೆ ಹಾಕಿ ಮುಚ್ಚಿದ ಗಂಡ!

9 ☞

ಮಗನಾ ಜೊತೆ ಕುರುಬರದೊಡ್ಡಿಯ ಮನೆಗೆ ಬಂದು ವಾಸವಿದ್ದಳು. ಹಿರಿಯ ಮಗ ತನ್ನ ಹೆಂಡತಿ ಜೊತೆ ಬೆಂಗಳೂರಿಗೆ ಹೋಗಿ ಅಲ್ಲೇ ಬಾಡಿಗೆ ಮನೆ



ಮಾಡಿಕೊಂಡಿದ್ದನು. ರಾಜಮ್ಮ ಮತ್ತು ಕಿರಿಯ ಮಗ ಸತೀಶ ಊರಿನ ಮನೆಗೆ ಬಂದು ವಾಸವಿದ್ದರೂ ರಾಜುನನ್ನು ಮಾತನಾಡಿಸುತ್ತಿರಲಿಲ್ಲ, ಆತನಿಗೆ ಊಟ ತಿಂಡಿ ಕೊಡದೆ ಕಡೆಗಣಿಸಿದ್ದರು. ರಾಜು ತನ್ನ ಹೆಂಡತಿಯನ್ನು ಹೀಗೇಕೆ ಮಾಡುತ್ತೀಯ ಮಕ್ಕಳು ನನ್ನನ್ನು ಅರ್ಥ ಮಾಡಿಕೊಳ್ಳದಿದ್ದರೂ ಪರವಾಗಿಲ್ಲ ನೀನಾದರೂ ನನ್ನನ್ನು ಅರ್ಥ ಮಾಡಿಕೊಂಡು ಬಾಳಾಟ ಮಾಡಬಾರದೆ ಎಂದು ಕೇಳಿದರು. ಗಂಡನ ಮಾತನ್ನು ಮನಸ್ಸಿಗೆ ಹಾಕಿಕೊಳ್ಳದೆ ತನ್ನಿಷ್ಟಕ್ಕೆ ಇದ್ದಳು. ಇದರಿಂದ ಊರಿನಲ್ಲಿ ನನ್ನ ಗೌರವವು ತುಂಬಾ ಹಾಳಾಗಿತ್ತು. ಈ ಕಾರಣದಿಂದ ಕೋಪದಲ್ಲಿ ರಾಜು ಹೆಂಡತಿಯನ್ನು ನೀನು ಹೀಗೆ ಮಾಡುತ್ತಿದ್ದರೆ ಒಂದಲ್ಲ ಒಂದು ದಿನ ನಿನ್ನನ್ನು ಸಾಯಿಸಿ ನೀರಿನ ಸಂಪಿನೊಳಗೆ ಹಾಕಿಬಿಡುತ್ತೇನೆಂದು ಬೆದರಿಸಿದ್ದನು.

ದಿನಾಂಕ **29.01.2025** ರಂದು ರಾಜು ಮನೆಯಲ್ಲಿದ್ದಾಗ ತನ್ನ ಹಿರಿಯ ಮಗ ಸತೀಶನು ಏನೋ ಕೆಲಸಕ್ಕೆ ಎಂದು ಬೆಂಗಳೂರಿಂದ ಮನೆಗೆ ಬಂದಿರುತ್ತಾನೆ. ಬೆಳಿಗ್ಗೆ ಸುಮಾರು **11:00** ಗಂಟೆಗೆ ಇಬ್ಬರು ಮಕ್ಕಳು ಕೆಲಸದ ಮೇಲೆ ಮನೆಯಿಂದ ಹೊರಗೆ ಹೋಗುತ್ತಾರೆ. ನಂತರ ಮಧ್ಯಾಹ್ನ ಸುಮಾರು **12:30** ಗಂಟೆ ಸಮಯದಲ್ಲಿ ರಾಜು ಮನೆಯ ಬಳಿಗೆ ಬಂದಾಗ ಹೆಂಡತಿ ರಾಜಮ್ಮ ಮನೆಯ ಹಿಂಭಾಗದ ಕಾಂಪೌಂಡ್ ಒಳಭಾಗದ ನೀರಿನ ಸಂಪಿನ ಬಳಿ ಬಟ್ಟೆ ತೊಳೆಯುತ್ತಿದ್ದಳು.

ಅಲ್ಲಿಗೆ ಹೋದ ಗಂಡ ರಾಜು ಹೆಂಡತಿಯನ್ನು ಈಗಲಾದರೂ ನನಗೆ ಊಟ ತಿಂಡಿ ಮಾಡಿಕೊಟ್ಟು ಬಟ್ಟೆ ಬರೆ ಒಗೆದು ಗಮನಿಸು ಎಂದು ಕೇಳುತ್ತಾನೆ. ಅದಕ್ಕೆ ರಾಜಮ್ಮ ನಾನು ಇರುವವರೆಗೆ ನಿನಗೆ ಒಂದು ಲೋಟ ಕಾಫಿಯನ್ನು ಕಾಯಿಸಿ (ಮಾಡಿ) ಕೊಡುವುದಿಲ್ಲ ಎಂದು ತಿರುಗಿ ಬೀಳುತ್ತಾಳೆ ಇದರಿಂದ ಕುಪಿತಗೊಂಡ ರಾಜು ಹೆಂಡತಿಯ ತಲೆಗೆ ಬಲವಾಗಿ ಒಡೆಯುತ್ತಾನೆ. ಇದರಿಂದ ಮೂರ್ಛೆ ತಪ್ಪಿ ರಾಜಮ್ಮ ಸಂಪಿಗೆ ಕುಸಿದು ಬೀಳುತ್ತಾಳೆ. ಮೊದಲೇ ಕೋಪದಲ್ಲಿದ್ದ ಗಂಡ ರಾಜು ನೀರಿನ ಸಂಪಿಗೆ ಬಿದ್ದ ಹೆಂಡತಿಯನ್ನು ಮೇಲೆತ್ತಿ ಕಾಪಾಡುವ ಬದಲು ಸಂಪಿನ ಬಾಗಿಲು ಹಾಕಿ ಅಲ್ಲಿಂದ ಹೊರಟು ಹೋಗುತ್ತಾನೆ. ಹೋಗುವಾಗ ದಾರಿಯಲ್ಲಿ ಗ್ರಾಮಸ್ಥರೊಡನೆ ನನ್ನ ಹೆಂಡತಿಯನ್ನು ನೀರಿನ ಸಂಪಿಗೆ ಮುಳುಗಿಸಿದ್ದೇನೆ ನನ್ನ ಮಕ್ಕಳಿಗೆ ಹೇಳಿಬಿಡಿ ಎಂದು ಹೇಳಿ ಹೋಗುತ್ತಾನೆ.

ಕೂಡಲೆ ಹಿರಿಯ ಮಗ ಸತೀಶನ ಸ್ನೇಹಿತ ಅದೇ ಗ್ರಾಮದ ಇಮ್ರಾನ್ ಎಂಬಾತ ಸತೀಶನಿಗೆ ಕರೆಮಾಡಿ ನಿಮ್ಮ ತಾಯಿಯನ್ನು ನಿಮ್ಮಪ್ಪ ನೀರಿನ ಸಂಪಿಗೆ ಮುಳುಗಿಸಿದ್ದಾನೆ ಎಂದು ತಿಳಿಸುತ್ತಾನೆ. ಆಗ ಮಧ್ಯಾಹ್ನ ಸುಮಾರು **1:00** ಗಂಟೆ ಸಮಯ ತಕ್ಷಣ ಸತೀಶ ತನ್ನ ತಮ್ಮ ಸಂತೋಷನ ಮೊಬೈಲ್ ಗೆ ಕರೆಮಾಡಿ ಅಪ್ಪ ನಮ್ಮ ತಾಯಿಯನ್ನು ನಮ್ಮ ಮನೆಯ ನೀರಿನ ಸಂಪಿಗೆ ಮುಳುಗಿಸುತ್ತಿದ್ದಾರೆ ಎಂದು ನನ್ನ ಸ್ನೇಹಿತ ಇಮ್ರಾನ್ ತಿಳಿಸಿದ್ದಾನೆ ಬೇಗ ಹೋಗಿ ನೋಡು ಎಂದು ಹೇಳುತ್ತಾನೆ. ಹನೂರಿನ ಆರ್. ಎಸ್. ದೊಡ್ಡಿ ಹತ್ತಿರ ಕಾರಿನಲ್ಲಿ ರಾಮಪುರದ ಮುತ್ತು ರಾಮಣ್ಣ ಹಾಗೂ ಪ್ರಸಾದ್ ರವರೊಡನೆ ಹೋಗುತ್ತಿದ್ದ ಸಂತೋಷ ಕೂಡಲೆ ಕೂಡಲೆ ಕಾರನ್ನು ವಾಪಸ್ ತೆಗೆದುಕೊಂಡು ಮಧ್ಯಾಹ್ನ ಸುಮಾರು **1:20** ಗಂಟೆಗೆ ತಮ್ಮ ಮನೆಗೆ ಬಂದು ಮನೆಯ ಹೊರ ಆವರಣದಲ್ಲಿರುವ ನೀರು ತುಂಬಿದ ಸಂಪಿನೊಳಗೆ ಇಳಿದು ನೋಡಲಾಗಿ ತಾಯಿ ರಾಜಮ್ಮಳ ಶವ ನೀರಿನ ಸಂಪಿನೊಳಗೆ ಇತ್ತು. ತಕ್ಷಣ ಶವವನ್ನು ಮುತ್ತು ರಾಮಣ್ಣನವರ ಸಹಾಯದಿಂದ ಮೇಲಕ್ಕೆ ಎತ್ತಿ ಉಸಿರು ಇರಬಹುದು ಎಂದು ಸುಧಾರಿಸಿ ನೋಡಿದಾಗ ರಾಜಮ್ಮ ಮೃತಪಟ್ಟಿದ್ದರು.

ತಾಯಿಯ ಶವವನ್ನು ಮನೆಯ ಮುಂಭಾಗದಲ್ಲಿರಿಸಿ ತಮ್ಮ ಸಂಬಂಧಿಕರು ಗ್ರಾಮಸ್ಥರಿಗೆ ತಿಳಿಸಿದ ಕಿರಿಯ ಮಗ ಸಂತೋಷ್ ರಾಮಾಪುರ ಪೊಲೀಸ್ ಠಾಣೆಗೆ ಬಂದು ದೂರು ನೀಡುತ್ತಾನೆ. ನಾನು ನಮ್ಮ ತಂದೆ ರಾಜು, ತಾಯಿ ರಾಜಮ್ಮರವರು ಹೀಗೆ **30** ವರ್ಷಗಳ ಹಿಂದೆ ಮದುವೆಯಾಗಿದ್ದು ಇವರಿಗೆ ನಾವು ಇಬ್ಬರು ಗಂಡು ಮಕ್ಕಳು. ಮೊದಲನೆಯವನು ನನ್ನ ಅಣ್ಣ ಸತೀಶ್ ಎರಡನೆಯವನು ನಾನು ಸಂತೋಷ್ ಆಗಿರುತ್ತೇವೆ ನಮ್ಮ ಅಣ್ಣ ಸತೀಶನು ಮದುವೆ ಮಾಡಿಕೊಂಡು ತನ್ನ ಹೆಂಡತಿ ಜೊತೆ ಬೆಂಗಳೂರಿನಲ್ಲಿ ಕೆಲಸ ಮಾಡಿಕೊಂಡು ವಾಸವಿದ್ದು ಹಾಗಾಗಿ ಊರಿಗೆ ಬಂದು ಹೋಗುತ್ತಿರುತ್ತಾನೆ. ನಾನು ಮತ್ತು ನಮ್ಮ ತಂದೆ ತಾಯಿ ಗ್ರಾಮದಲ್ಲಿ ವಾಸವಿದ್ದು ನನಗೆ ಮದುವೆ



ಆಗಿರುವುದಿಲ್ಲ, ನನ್ನ ತಂದೆ ನಮ್ಮ ಗ್ರಾಮದ ನಮ್ಮ ಸಂಬಂಧಿ ಕೆಂಪಮ್ಮರವರ ಜೊತೆ ಅಕ್ರಮ ಸಂಬಂಧ ಇಟ್ಟುಕೊಂಡಿದ್ದು ಇವಳ ಚಿತಾವಣೆಯಿಂದ ನಮ್ಮ ತಾಯಿಯ ಹೆಸರಿನಲ್ಲಿ ಇದ್ದ ಸೈಟು ಮಾರಾಟ ಮಾಡಿ ಹಣವನ್ನು ಕೊಡು ಎಂದು ನಮ್ಮ ತಾಯಿಯ ಜೊತೆ ಗಲಾಟೆ ಮಾಡುತ್ತಿದ್ದನು ಆಗ ನಮ್ಮ ಗ್ರಾಮದ ನಾಗರಾಜು ಮತ್ತು ಶಿವರಾಜು ರವರನ್ನು ಪಂಚಾಯಿತಿಗೆ ಸೇರಿಸಿ ನಮ್ಮ ತಂದೆಗೆ ಬುದ್ಧಿವಾದ ಹೇಳಿಸಿದ್ದೆವು.

ಆದರೂ ಸಹ ನನ್ನ ತಂದೆ ಯಾವುದನ್ನು ಲೆಕ್ಕಿಸದೆ ಸೈಟು ಮಾರಾಟ ಮಾಡುವಂತೆ ಗಲಾಟೆ ಮಾಡುವುದು ಒಡೆಯುವುದು ಮಾಡುತ್ತಿದ್ದರು ನಮ್ಮ ತಾಯಿ ರಾಜಮ್ಮ ನಮ್ಮ ತಂದೆಗೆ ನೀನು ಕೆಂಪಮ್ಮನ ಜೊತೆ ಇಟ್ಟುಕೊಂಡಿರುವ ಅನೈತಿಕ ಸಂಬಂಧವನ್ನು ಬಿಡು ಎಂದು ಹೇಳಿದರೆ ಇದಕ್ಕೆ ಕೋಪ ಮಾಡಿಕೊಂಡು ನಿನ್ನನ್ನು ಕೊಲೆ ಮಾಡುತ್ತೇನೆ ಎಂದು ಗಲಾಟೆ ಮಾಡುತ್ತಿದ್ದನು. ಈ ದಿನ ದಿನಾಂಕ **29.01.2025** ರಂದು ನಾನು ಮತ್ತು ನನ್ನ ಅಣ್ಣ ಸತೀಶ ಇಬ್ಬರು ಮನೆಯಲ್ಲಿದ್ದು ಬೆಳಗ್ಗೆ **11** ಗಂಟೆಯಲ್ಲಿ ಕೆಲಸಕ್ಕೆಂದು ಹೊರಗಡೆ ಹೋದೆವು ನನ್ನ ತಂದೆ ಮತ್ತು ತಾಯಿ ಇಬ್ಬರು ಮನೆಯಲ್ಲಿದ್ದರು ಈಗಿರುವಾಗ ನಮ್ಮ ತಂದೆ ರಾಜುರವರು ನಮ್ಮ ತಾಯಿಯ ಮೇಲೆ ಗಲಾಟೆ ಮಾಡಿ ಹೊಡೆದು ನೀರು ತುಂಬಿದ ಸಂಪಿಗೆ ಮುಳುಗಿಸಿ ಕೊಲೆ ಮಾಡಿರುತ್ತಾರೆ ಈ ಬಗ್ಗೆ ನಮ್ಮ ಕಡೆಯವರಿಗೆ ವಿಚಾರ ತಿಳಿಸಿ ತಡವಾಗಿ ದೂರು ನೀಡುತ್ತಿದ್ದು ನಮ್ಮ ತಂದೆ ರಾಜು ಮತ್ತು ಕೆಂಪಮ್ಮರವರ ಮೇಲೆ ಸೂಕ್ತ ಕಾನೂನು ಕ್ರಮ ಜರುಗಿಸಬೇಕೆಂದು ಕೋರಿಕೊಳ್ಳುತ್ತೇನೆ ಎಂದು ಕಿರಿಯ ಮಗ ನೀಡಿರುವ ದೂರಿನ ಮೇರೆಗೆ ರಾಮಾಪುರ ಠಾಣೆ ಪೊಲೀಸರು ಠಾಣಾ ಮೊಕೋದ್ದಮೆ ಸಂಖ್ಯೆ: **21/2025** ಕಲಂ: **103 (1), 49** ರೆ:ವಿ **3(5)** ಬಿ ಎನ್ ಎಸ್-**2023** ರಿತ್ಯಾ ಪ್ರಕರಣ ದಾಖಸಿಕೊಳ್ಳುತ್ತಾರೆ.

ರಾಮಾಪುರ ಠಾಣೆ ಸಿಪಿಐ ಪಿ.ಎನ್. ಶೇಷಾದ್ರಿರವರು ಕೂಡಲೆ ಘಟನೆಯ ಕುರಿತು ತಮ್ಮ ಹಿರಿಯ ಅಧಿಕಾರಿಗಳಿಗೆ ವಿಚಾರ ಮುಟ್ಟಿಸುತ್ತಾರೆ. ಚಾಮರಾಜನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ. ಕವಿತಾರವರ ಮಾರ್ಗದರ್ಶನದಲ್ಲಿ ಕೊಲೆ ಮಾಡಿ ಪರಾರಿಯಾಗುತ್ತಿದ್ದ ಆರೋಪಿಯನ್ನು ದೊಮ್ಮನಗದ್ದೆ ರಸ್ತೆಯಲ್ಲಿ ಬಂಧಿಸುತ್ತಾರೆ. ನಂತರ ಠಾಣೆಗೆ ಕರೆತಂದು ವಿಚಾರಣೆ ನಡೆಸುವ ರಾಮಾಪುರ ಸಿಪಿಐ ಪಿ.ಎನ್. ಶೇದ್ರಿರವರು ಆರೋಪಿಯನ್ನು ಜೈಲಿಗೆ ಬಿಟ್ಟು ಬಂದು ಪ್ರಕರಣದ ತನಿಖೆ ಕೈಗೆತ್ತಿಕೊಂಡಿದ್ದಾರೆ.

# ಸ್ನೇಹಿತನೊಂದಿಗೆ ಸರಸ, ಸಂಸಾರದಲ್ಲಿ ವಿರಸ: ಪತ್ನಿಯನ್ನ ಏಳೆಂಟು ಬಾರಿ ಚುಚ್ಚಿ ಚುಚ್ಚಿ ಕೊಂದ!

ಇಬ್ಬರು ಒಂದೇ ಕಡೆ ಕೆಲಸ ಮಾಡುತ್ತಿದ್ದರು. ಹೀಗಾಗಿ ಮೋಹನ್ ರಾಜು ಎನ್ನುವಾತ ತನಗೆ ಮದ್ವೆಯಾಗಿದ್ದರೂ ಸಹ ಗೆಳೆಯನಿಗೆ ವಾಸಿಸಲು ತನ್ನ ಮನೆಯಲ್ಲೇ ನೆಲೆ ಕೊಟ್ಟಿದ್ದ. ಬಳಿಕ ಮೋಹನ್‌ರಾಜು ಹೆಂಡ್ತಿ ಹಾಗೂ ಸ್ನೇಹಿತನ ನಡುವೆ ಲವ್ವಿಡವ್ವಿ ಶುರುವಾಗಿದೆ. ಈ ವಿಚಾರ ಮೋಹನ್‌ರಾಜುಗೆ ಗೊತ್ತಾಗಿ ಪತ್ನಿ ಜತೆ ಗಲಾಟೆ ಮಾಡಿದ್ದಾನೆ. ಬಳಿಕ ಸಂಸಾರದಲ್ಲಿ ವಿರಸ ಉಂಟಾಗಿ ಇಬ್ಬರು ದೂರವಾಗಿದ್ದಾರೆ. ಕೊನೆಗೆ ಮೋಹನ್ ರಾಜು ಪತ್ನಿಯನ್ನು ಭೀಕರವಾಗಿ ಹತ್ಯೆ ಮಾಡಿ ಕೋಪ ತಣಿಸಿಕೊಂಡಿದ್ದಾನೆ.



ನಡುರಸ್ತೆಯಲ್ಲಿ ಪತಿಯೊಬ್ಬ ತನ್ನ ಪತ್ನಿಗೆ ಏಳೆಂಟು ಬಾರಿ ಚಾಕುವಿನಿಂದ ಇರಿದು ಬರ್ಬರವಾಗಿ ಕೊಂದಿರುವ ಅಮಾನುಷ ಘಟನೆ ಬೆಂಗಳೂರಿನ ಹೆಬ್ಬಗೋಡಿಯ ವಿನಾಯಕನಗರದಲ್ಲಿ ನಡೆದಿದೆ. ಆರು ವರ್ಷದ ಮಗುವನ್ನ ಶಾಲೆಗೆ ಬಿಡಲು ಹೋಗುತ್ತಿದ್ದ ಹೆಂಡತಿಯನ್ನು ಅಡ್ಡಗಟ್ಟಿ ಚಾಕುವಿನಿಂದ ಚುಚ್ಚಿ, ಚುಚ್ಚಿ ಕ್ರೌರ್ಯ ಮೆರೆದಿದ್ದಾನೆ. ತನ್ನ ಸ್ನೇಹಿತನೊಂದಿಗೆ ಅಕ್ರಮ ಸಂಬಂಧ ಹೊಂದಿದ್ದಾಳೆಂದು ಪತಿ ಈ ಕೃತ್ಯ ಎಸಗಿದ್ದಾನೆ. ಶ್ರೀಗಂಗಾ **(29)** ಕೊಲೆಯಾದ ಮಹಿಳೆ. ಮೋಹನ್‌ರಾಜು **(32)** ಪತ್ನಿಯನ್ನು ಕೊಲೆಗೈದ ಪತಿ ಮಹಾಶಯ.

ಬೆಂಗಳೂರು ಹೊರವಲಯದ ಹೆಬ್ಬಗೋಡಿಯ ತಿರುಪಾಳ್ಯ ನಿವಾಸಿಗಳಾಗಿರುವ ಶ್ರೀಗಂಗಾ ಹಾಗೂ ಮೋಹನ್‌ರಾಜು ಮದುವೆಯಾಗಿ ಏಳು ವರ್ಷಗಳಾಗಿದ್ದು, ಆರು ವರ್ಷದ ಮಗನಿದ್ದಾನೆ. ಆದರೆ, ಮೋಹನ್ ರಾಜ್ ಸ್ನೇಹಿತನ ಜೊತೆಗೆ ಶ್ರೀಗಂಗಾ ಅಕ್ರಮ ಸಂಬಂಧ ಹೊಂದಿದ್ದಾಳೆಂಬ ಅನುಮಾನ ಇತ್ತು. ಈ ಸಂಬಂಧ ಎರಡ್ಮೂರು ವರ್ಷದಿಂದ ಮೋಹನ್‌ರಾಜ್ ಪತ್ನಿ ಶೀಲ ಶಂಕಿಸಿ ಗಲಾಟೆ ಮಾಡುತ್ತಿದ್ದ.

ಕೊನೆಗೆ ಗಲಾಟೆ ತೀವ್ರ ಸ್ವರೂಪ ಪಡೆದುಕೊಂಡಿದ್ದು, ಕಳೆದ **8** ತಿಂಗಳಿನಿಂದ ಮೋಹನ್ ರಾಜ್ ಹಾಗೂ ಶ್ರೀಗಂಗಾ ದೂರವಾಗಿದ್ದರು. ಆದರೆ, ಫೆಬ್ರವರಿ **4**ರಂದು ರಾತ್ರಿ ಮೋಹನ್‌ರಾಜ್ ತನ್ನ ಮಗುವನ್ನ ನೋಡಲು ಶ್ರೀಗಂಗಾಳ ಮನೆಗೆ ತೆಳಿದ್ದ. ಆ ವೇಳೆ ಇಬ್ಬರ ನಡುವೆ ಮತ್ತೆ ಜಗಳವಾಗಿದೆ.

ಇದರಿಂದ ಕೋಪಗೊಂಡಿದ್ದ ಮೋಹನ್‌ರಾಜ್, ಶ್ರೀಗಂಗಾಳನ್ನು ಕೊಲೆ ಮಾಡಬೇಕೆಂದು ನಿರ್ಧಾರಕ್ಕೆ ಬಂದಿದ್ದಾನೆ. ಅದರಂತೆ ಫೆಬ್ರವರಿ 5ರಂದು ಬೆಳಗ್ಗೆ ಶ್ರೀಗಂಗಾ ಮಗುವನ್ನ ಶಾಲೆಗೆ ಬಿಡಲು ಬೈಕ್ನಲ್ಲಿ ಬಂದಿದ್ದಳು. ಈ ವೇಳೆ ಕಾದು ಕುಳಿತಿದ್ದ ಪತಿ ಮೋಹನ್‌ರಾಜ್ ಪತ್ನಿ ಶ್ರೀಗಂಗಾ ಮೇಲೆ ಅಟ್ಯಾಕ್ ಮಾಡಿದ್ದು, ಏಳೆಂಟು ಬಾರಿ ಚಾಕುವಿನಿಂದ ಇರಿದು ತನ್ನ ಸಿಟ್ಟು ತೀರಿಸಿಕೊಂಡಿದ್ದಾನೆ



ಇನ್ನು ಗಂಭೀರವಾಗಿ ಗಾಯಗೊಂಡು ಸ್ಥಳದಲ್ಲೇ ಕುಸಿದು ಬಿದ್ದಿದ್ದ ಶ್ರೀಗಂಗಾಳನ್ನು ನಾರಾಯಣ ಹೆಲ್ತ್ ಸಿಟಿ ಆಸ್ಪತ್ರೆಗೆ ರವಾನೆ ಮಾಡಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಶ್ರೀಗಂಗಾ ಸಾವನ್ನಪ್ಪಿದ್ದಾರೆ. ಈ ಸಂಬಂಧ ಹೆಬ್ಬಗೋಡಿ ಪೊಲೀಸರು ಆರೋಪಿ ಮೋಹನ್ ರಾಜ್ ಅವರನ್ನ ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದಾರೆ.

**ಬೆಂಗಳೂರು ಗ್ರಾಮಾಂತರ**
**ಎಸ್ಪಿ ಸಿ.ಕೆ.ಬಾಬಾ ಹೇಳಿದ್ದಿಷ್ಟು**

ಇನ್ನು ಈ ಪ್ರಕರಣದ ಬಗ್ಗೆ ಬೆಂಗಳೂರು ಗ್ರಾಮಾಂತರ ಎಸ್ಪಿ ಸಿ.ಕೆ.ಬಾಬಾ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ್ದು, ಬೆಳಗ್ಗೆ ಹೆಬ್ಬಗೋಡಿಯಲ್ಲಿ ಶಾಲೆಗೆ ಮಗುವನ್ನ ಬಿಡಲಿಕ್ಕೆ ತಾಯಿ ಬಂದಾಗ ಘಟನೆ ನಡೆದಿದೆ. ಅವರ ಪತಿ ಶಾಲೆಯ ಕಾಂಪೌಂಡ್ ಬಳಿ ಬಂದು ಚಾಕುವಿನಿಂದ ಇರಿದಿದ್ದಾನೆ.

ಮಾಹಿತಿ ಬಂದ ಕೂಡಲೇ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ, ಆಸ್ಪತ್ರೆಯಲ್ಲಿ ಗಾಯಾಳು ಮೃತಪಟ್ಟಿದ್ದಾರೆ. ಈ ಬಗ್ಗೆ ಹೆಬ್ಬಗೋಡಿ ಠಾಣೆಯಲ್ಲಿ ಕೊಲೆ ಕೇಸ್ ದಾಖಲಾಗಿದ್ದು, ಕೊಲೆ ಆರೋಪಿಯನ್ನ ವಶಕ್ಕೆ ಪಡೆಯಲಾಗಿದೆ. ಪತಿ ಹಾಗೂ ಆತನ ಸ್ನೇಹಿತ ಒಂದೇ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದರು. ಹೀಗಾಗಿ ಈ ಹಿಂದೆ ಪತಿಯು ಸ್ನೇಹಿತನನ್ನ ಮನೆಯಲ್ಲಿ ಇರಿಸಿಕೊಂಡಿದ್ದರು. ಈ ವೇಳೆ ಪತಿಯ ಸ್ನೇಹಿತ ಹಾಗೂ ಮೃತಳ ನಡುವೆ ಸಂಬಂಧ ಇದೆ ಎಂದು ಗಲಾಟೆ ಆಗಿದೆ. ನಂತರ ಪತಿ ಪತ್ನಿ ದೂರವಾಗಿದ್ದರು. ಕಳೆದ ರಾತ್ರಿ ಮಗುವನ್ನ ನೋಡಲು ಬಂದಾಗ ಇಬ್ಬರ ಮಧ್ಯೆ ಗಲಾಟೆಯಾಗಿದೆ. ಇದರಿಂದ ಕೋಪಗೊಂಡು ಇಂದು ಬೆಳಿಗ್ಗೆ ಚಾಕು ಇರಿದು ಕೊಂದಿದ್ದಾನೆ ಎಂದು ಮಾಹಿತಿ ನೀಡಿದರು.

# ಅಕ್ರಮ ಸಂಬಂಧಕ್ಕೆ ಅಡ್ಡಿಯಾಗಿದ್ದ ಗಂಡನಿಗೆ ಎಳ್ಳುನೀರು ಬಿಟ್ಟ ಗೀತಾ
# ಗಂಡ ನಾಪತ್ತೆಯಾಗಿದ್ದಾನೆಂದು ಪೊಲೀಸರನ್ನೇ ಯಾಮಾರಿಸಲು ಹೊರಟಿದ್ದಳು!



ಕೊಲೆಯಾದ ರಮೇಶ

**ಅಕ್ರಮ ಸಂಬಂಧಕ್ಕೆ ಅಡ್ಡಿಯಾಗಿದ್ದ ಕುಡುಕ ಗಂಡನನ್ನು ಪ್ರಿಯಕರನೊಂದಿಗೆ ಸೇರಿ ಅಮಾನುಷವಾಗಿ ಹತ್ಯೆಗೈದು ಕಪಿಲ ನದಿಗೆ ಎಸೆದು ಗಂಡ ನಾಪತ್ತೆಯಾಗಿದ್ದಾನೆಂದು ಪೊಲೀಸ್ ಠಾಣೆಯಲ್ಲಿ ಮಿಸ್ಸಿಂಗ್ ಕಂಪ್ಲೆಂಟ್ ದಾಖಲಿಸಿ ಪೊಲೀಸರನ್ನೇ ಯಾಮಾರಿಸಲು ಹೊರಟಿದ್ದ ಮಾಯಂಗನೆ ಪತ್ನಿ ಹಾಗೂ ಆಕೆ ಪ್ರಿಯಕರ ಪೋಲೀಸರಿಗೆ ಸಿಕ್ಕಿಬಿದ್ದಿದ್ದು, ಚಾಮರಾಜನಗರ ತಾಲೂಕಿನ ಕುದೇರು ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ವ್ಯಕ್ತಿ ನಾಪತ್ತೆ ಪ್ರಕರಣಕ್ಕೆ ತಿರುವು ಸಿಕ್ಕಿದ್ದು, ಪತ್ನಿಯೇ ಪ್ರಿಯಕರನೊಂದಿಗೆ ಸೇರಿ ಪತಿಯನ್ನು ಹತ್ಯೆ ಮಾಡಿರುವುದು ಪೊಲೀಸರ ತನಿಖೆಯಿಂದ ಬಯಲಾಗಿದೆ. ಗಂಡನಿಗೆ ಎಳ್ಳುನೀರು ಬಿಟ್ಟು ಪ್ರಿಯಕರನೊಡನೆ ಸುಖವಾಗಿರಬಹುದೆಂಬ ಭ್ರಮೆಯಲ್ಲಿದ್ದ ಪತ್ನಿ ಹಾಗೂ ಆಕೆಯ ಪ್ರಿಯಕರ ಈಗ ಜೈಲು ಸೇರಿದ್ದಾರೆ.**


ಆರೋಪಿ ಗೀತಾ

**ಚಾ**ಮರಾಜನಗರ ತಾಲೂಕಿನ ಜನ್ನೂರು ಗ್ರಾಮದ ಲೇಟ್ ಮಹಾದೇವಪ್ಪರವರ ಮಗ ರಮೇಶ್ (45) ಕೊಲೆಯಾದ ವ್ಯಕ್ತಿ. ಆತನ ಪತ್ನಿ ಗೀತಾ ತನ್ನ ಪ್ರಿಯಕರ ಗುರುಪಾದಸ್ವಾಮಿ ಜೊತೆ ಸೇರಿ ಕಳೆದ 25 ವರ್ಷಗಳಿಂದ ಒಟ್ಟಿಗೆ ಸಂಸಾರ ಮಾಡಿದ ಗಂಡನನ್ನು


ಎಸ್ಪಿ ಡಾ. ಕವಿತಾ


ಡಿವೈಎಸ್ಪಿ ಲಕ್ಷ್ಮಯ್ಯ


ಸಿಪಿಐ ಬಸವರಾಜು

ಕೊಲೆ ಮಾಡಿ ನಾಪತ್ತೆಯಾಗಿದ್ದಾನೆಂದು ಪೊಲೀಸ್ ಠಾಣೆಯಲ್ಲಿ ಮಿಸ್ಸಿಂಗ್ ಕಂಪ್ಲೆಂಟ್ ದಾಖಲಿಸಿ ಪೊಲೀಸರನ್ನೇ ಯಾಮಾರಿಸಲು ಹೊರಟಿದ್ದ ಗರತಿ.

ಜನ್ನೂರು ಗ್ರಾಮದ ಲೇಟ್ ಮಹಾದೇವಪ್ಪ ಹಾಗೂ ನಾಗಮ್ಮ ದಂಪತಿಗಳಿಗೆ ಇಬ್ಬರೂ ಪುತ್ರರು ಹಾಗೂ ಮೂವರು ಪುತ್ರಿಯರು ಒಟ್ಟು 5 ಜನ ಮಕ್ಕಳು. ಮೊದಲನೆಯವಳು ಸುವರ್ಣಮ್ಮ, ಎರಡನೆಯವಳು ಶೈಲಜಾ, ಮೂರನೆಯವನು ಮೃತ ರಮೇಶ್, ನಾಲ್ಕನೆಯವನು ಸಿದ್ದರಾಜು, ಕಿರಿಯವಳು ಸುಮಾ. ತಮ್ಮ ಸಿದ್ದರಾಜು, ಹಾಗೂ ತಂಗಿ ಸುಮಾ ಆದಾಗಲೇ ತೀರಿಕೊಂಡಿದ್ದಾರೆ. ಹಾಗೆಯೇ ಕಳೆದ 5 ವರ್ಷಗಳ ಹಿಂದೆ ತಂದೆ ಮಹಾದೇವಪ್ಪ ಹಾಗೂ ಎರೆಡುವರೆ ವರ್ಷಗಳ ಹಿಂದೆ ತಾಯಿ ನಾಗಮ್ಮನೂ ತೀರಿಕೊಂಡಿದ್ದಾರೆ. ಅಕ್ಕಂದಿರಾದ ಸುವರ್ಣಮ್ಮ ಹಾಗೂ ಶೈಲಜಾ ಇಬ್ಬರಿಗೂ ಮದುವೆಯಾಗಿ ಗಂಡನ ಮನೆಯಲ್ಲಿದ್ದಾರೆ. ಈ ಕುಟುಂಬಕ್ಕೆ ಪಿತ್ರಾರ್ಜಿತವಾಗಿ ಬಂದ ಒಂದಷ್ಟು ಖುಷ್ಕಿ (ಮಳೆಯಾಶ್ರಿತ) ಜಮೀನಿದೆ. ಅದರಲ್ಲಿ ಜೋಳ ಅಥವಾ ಬಾಳೆ ಬೆಳೆಯುತ್ತಾರೆ. ಆದರೂ ರಮೇಶ್ ತಂದೆ ಬದುಕಿದ್ದಾಗಲೇ ಜೀವನೋಪಾಯಕ್ಕೆಂದು ಬೆಂಗಳೂರಿಗೆ ಹೋಗಿದ್ದ. ಅಲ್ಲಿ ಪಾನಿಪುರಿ ಹಾಕುವ ಕೆಲಸ ಮಾಡುತ್ತಿದ್ದ. ಈ ವೇಳೆ ರಮೇಶನಿಗೆ ಜಯನಗರದ ಗೀತಾಳ ಪರಿಚಯವಾಗಿದೆ. ರಮೇಶ್ ಹಾಗೂ ಗೀತಾ ನಡುವೆ ಪ್ರೇಮಾಂಕುರವಾಗಿ ಪರಸ್ಪರ ಪ್ರೀತಿಸಿ ಕಳೆದ 25 ವರ್ಷಗಳ ಹಿಂದೆ ಮದುವೆಯಾಗಿದ್ದರು. ಪ್ರಾರಂಭದಲ್ಲಿ ದಂಪತಿಗಳು ಅನ್ಯೂನ್ಯವಾಗಿದ್ದರು ಅದರ ಫಲವಾಗಿ ಮನೋಜ್ ಕುಮಾರ್ (25) ಕಾವ್ಯಶ್ರೀ (20) ಎಂಬ ವಯಸ್ಸಿಗೆ ಬಂದ ಇಬ್ಬರು ಮಕ್ಕಳಿದ್ದಾರೆ. ಆದರೆ ಗಂಡ ರಮೇಶ್ ಕುಡಿತಕ್ಕೆ ದಾಸನಾಗಿ ಹೆಂಡತಿ ಮೇಲೆ ಹಿಡಿತ ಸಾಧಿಸುವಲ್ಲಿ ವಿಫಲನಾಗಿದ್ದ. ಆದರೆ ಆಗ ತಾನೆ ಗೀತಾಳಿಗೆ 25ರ ಪ್ರಾಯ ಆ ವಯಸ್ಸಿನಲ್ಲಿ ಎಲ್ಲಾ ಹೆಂಗಸರಿಗೂ ಇರುವಂತೆ ಅವಳಲ್ಲೂ ಸುಪ್ತ ಬಯಕೆಗಳು ಪುಟಿದೇಳುತ್ತಿದ್ದವು. ಆದರೆ ಕುಡಿತಕ್ಕೆ ದಾಸನಾಗಿದ್ದ ರಮೇಶ್ ಗೀತಾಳ ಅಗತ್ಯಗಳನ್ನು ಪೂರೈಸುವಲ್ಲಿ ವಿಫಲನಾಗಿದ್ದ ಈ ವೇಳೆ ಗೀತಾಳ ಯವ್ವನದ ಹೊಳೆಯಲ್ಲಿ ಈಜಲು ಇಳಿದವನೆ ಗುರುಪಾದಸ್ವಾಮಿ ಎಂಬ ಗೆಣೆಕಾರ.

**ಚಾಮರಾಜನಗರ**

✍ ಎಸ್. ಸ್ವಾಮಿ

### ಅವನು ಗುರುಪಾದಸ್ವಾಮಿ

ಅದೇ ಗ್ರಾಮದ ಸೋಮಣ್ಣ ಶಿವಮಲ್ಲಪ್ಪ ಹಾಗೂ ಮಹಾದೇವಮ್ಮ ರವರ ಪುತ್ರ ಗುರುಪಾದಸ್ವಾಮಿ ಸ್ಟಿಲ್ ಬ್ಯಾಚುಲರ್. ಈತನ ಅಕ್ಕ ಲೀಲಾವತಿ, ತಮ್ಮ ಪ್ರಸಾದ್ ಗ್ರಾಮದಲ್ಲಿ ಕೃಷಿ ಜಮೀನುಗಳಲ್ಲಿ ಕೆಲಸ ಮಾಡಿಕೊಂಡು ಎತ್ತಿನ ಗಾಡಿ ಇಟ್ಟುಕೊಂಡು ಜೀವನ ನಡೆಸುತ್ತಿದ್ದನು. ವಯಸ್ಸಿಗೆ ಬಂದಿದ್ದ ಗುರುಪಾದಸ್ವಾಮಿಗೆ ಎಲ್ಲರಂತೆ ಹೆಂಗಸರ ಮೇಲೆ ಆಕರ್ಷಿತವಾದ ಸಹಜ ಬಯಕೆ ಮೂಡಲು ಶುರವಾಯಿತು. ಆಗಾಗಿ ಗೀತಾಳ ಮೇಲೆ ಆಕರ್ಷಿತನಾದ. ಈತನ ಮೇಲೆ ಗೀತಾಳಿಗೆ ಅದೇಗೆ ಕ್ರಶ್ ಆಯಿತೋ.... ಅಥವಾ ತನ್ನ ಗಂಡನಲ್ಲಿ ಇಲ್ಲದ್ದನ್ನು ಈತನಲ್ಲಿ ಅದೇನು ಕಂಡಳೋ... ಈತನ ಪ್ರೇಮಪಾಸಕ್ಕೆ ಬಿದ್ದು ಕಳೆದ 20 ವರ್ಷಗಳಿಂದ ಅನೈತಿಕ ಸಂಬಂಧ ಇರಿಸಿಕೊಂಡಿದ್ದಳು. ಸಂಸಾರದ ನೊಗ ಎಳೆಯುವಲ್ಲಿ ರಮೇಶ್ ವಿಫಲನಾದಾಗ ಗೆಣೆಕಾರ ಗುರುಪಾದಸ್ವಾಮಿ ಗೀತಾಳಾ ಎಲ್ಲಾ ಅಗತ್ಯಗಳನ್ನು ಪೂರೈಸುತ್ತಿದ್ದನು. ಮದುವೆಯಾಗದೆ ಜೀವನವನ್ನು ಅವಳಿಗಾಗಿಯೇ ಮುಡಿಪಾಗಿಟ್ಟಿದ್ದ. ಇತ್ತೀಚಿಗೆ ರಮೇಶ ಕುಡಿದು ಬಂದು ದಿನಾಲು ಗೀತಾಳ ಜೊತೆ ಗಲಾಟೆ ಮಾಡುತ್ತಿದ್ದನು. ಇದರಿಂದ ಬೇಸತ್ತ ಗೀತಾ ತನ್ನ ಪ್ರಿಯಕರ ಗುರುಪಾದಸ್ವಾಮಿ ಜೊತೆ ಸೇರಿ ತಮ್ಮ ಅಕ್ರಮ ಸಂಬಂಧಕ್ಕೆ ಅಡ್ಡಿಯಾಗುತ್ತಿರುವ ಪತಿ ರಮೇಶ್‌ನನ್ನು ಮುಗಿಸಲು ಯೋಜನೆ ರೂಪಿಸಿದ್ದಳು.



ಆರೋಪಿ ಗುರುಪಾದಸ್ವಾಮಿ

### ಕೊಲೆ ಮಾಡಿ ನದಿಗೆ ಎಸೆದರು

ಅಂದು ದಿನಾಂಕ 13.01.2025 ರಾತ್ರಿ ಸುಮಾರು 8:00 ಗಂಟೆಯ ಸಮಯ ರಮೇಶ್ ಎಂದಿನಂತೆ ಕುಡಿದು ಬಂದಿದ್ದರಿಂದ ಮನೆಯಲ್ಲಿ ಗಂಡ-ಹೆಂಡತಿ ನಡುವೆ ಜಗಳ ಶುರುವಾಗಿದೆ. ಈ ವೇಳೆ ಗೀತಾ ತನ್ನ ಪ್ರಿಯಕರ ಗುರುಪಾದಸ್ವಾಮಿ ಮೊಬೈಲ್‌ಗೆ ಕರೆಮಾಡಿ ಬರಮಾಡಿ ಕೊಂಡಿದ್ದಾಳೆ. ಅಲ್ಲಿಗೆ ಬಂದ ಗುರುಪಾದಸ್ವಾಮಿ ಈ ಹಿಂದೆ ಇಬ್ಬರು ಸೇರಿ ರಮೇಶ್ ಕೊಲೆಗೆ ಯೋಜನೆ ರೂಪಿಸಿಕೊಂಡಿದ್ದಂತೆ ಮಚ್ಚಿನಿಂದ ರಮೇಶನ ಬಲಗಡೆಯ ಕುತ್ತಿಗೆಗೆ ಒಡೆದು ಸಾಯಿಸಿದ್ದಾನೆ. ನಂತರ ಇಬ್ಬರು ಸೇರಿ ಮೃತ ದೇಹವನ್ನು ಹಸಿರು ಬಣ್ಣದ ಬೆಡ್ ಸೀಟ್ ನಿಂದ ಸುತ್ತಿ ಬಿಳಿಯ ಬಣ್ಣದ ಪ್ಲಾಸ್ಟಿಕ್ ಚೀಲದಲ್ಲಿ ಹಾಕಿಕೊಂಡು ಟಿ.ನರಸೀಪುರ ತಾಲ್ಲೂಕು ಕುಪ್ಪೇಗಾಲ ಬಳಿ ಕಪಿಲ ನದಿಗೆ ಸೇತುವೆಯ ಮೇಲಿಂದ ಯಾರೂ ಕಾಣದ ಹಾಗೆ ಬೆಳಗಿನ ಜಾವ ಬೀಸಾಡಿ ಬಂದಿದ್ದಾರೆ. ಬಳಿಕ ಯಾರಿಗೂ ಅನುಮಾನ ಬರಬಾರದ ಹಾಗೆ ಮನೆ ಸೇರಿಕೊಂಡಿದ್ದಾರೆ. ಘಟನೆಯ

☞ 12







# ಅಕ್ರಮ ಸಂಬಂಧಕ್ಕೆ ಅಡ್ಡಿಯಾಗಿದ್ದ ಗಂಡನಿಗೆ ಎಳ್ಳುನೀರು ಬಿಟ್ಟ ಗೀತಾ

11 ☞

ನಂತರ ಇಬ್ಬರು ಏನು ನಡೆದೇ ಇಲ್ಲ ಎಂಬಂತೆ ತಮ್ಮಷ್ಟಕ್ಕೆ ತಾವು ಸುಮ್ಮನಿರುತ್ತಾರೆ.

ಆದರೆ ಈ ಸೈಬರ್ ತಂತ್ರಜ್ಞಾನದ ಯುಗದಲ್ಲಿ ಒಬ್ಬರನ್ನು ಕೊಲೆ ಮಾಡಿ ನೆಮ್ಮದಿಯಾಗಿರಲು ಸಾಧ್ಯವೇ?



ಅದಾಗಲೇ ಗ್ರಾಮದಲ್ಲಿ ರಮೇಶ್ ಒಂದು ವಾರದಿಂದ ಕಾಣದಿರುವ ಬಗ್ಗೆ ಚರ್ಚೆ ಶುರುವಾಗುತ್ತದೆ ಈ ವೇಳೆ ಆತನ ಅಕ್ಕಂದಿರಾದ ಸುವರ್ಣಮ್ಮ ಹಾಗೂ ಶೈಲಜಾರವರು ಬಂದು ರಮೇಶ್ ಎಲ್ಲಿ ಹೋದ ಎಂದು ಕೇಳಲು ಪ್ರಾರಂಭಿಸುತ್ತಾರೆ. ಇದರಿಂದ ವಿಚಲಿತಳಾದ ಗೀತಾ ಇವರ ಒತ್ತಡಕ್ಕೆ ಜ.21 ರಂದು ಕುದೇರು ಠಾಣೆಗೆ ಬಂದು ತನ್ನ ಪತಿ ರಮೇಶ್ ಜ.14 ರಂದು ರಾತ್ರಿ ಹೊರ ಹೋಗಿದ್ದು ವಾಪಸ್ ಬಂದಿಲ್ಲ, ಆಗಾಗ್ಗೆ ಹೊರಗೆ ಹೋಗುತ್ತಿದ್ದು ವಾಪಸ್ಸು ಬರುತ್ತಿದ್ದರು. ಆದರೆ ಕಳೆದ ಜ.21 ರಂದು ಹೋದವರು ವಾಪಸ್ ಬಂದಿಲ್ಲ ಎಂದು ನಾಪತ್ತೆಯಾಗಿರುವ ಬಗ್ಗೆ ದೂರು ನೀಡುತ್ತಾಳೆ.

ನಾಪತ್ತೆ ಪ್ರಕರಣ ದಾಖಲಿಸಿಕೊಂಡ ಕುದೇರು ಠಾಣೆ ಪಿಎಸ್ಐ ಎಸ್.ಕುಮುದ ಪ್ರಾರಂಭದಲ್ಲಿ ಸಣ್ಣದಾಗಿ ತನಿಖೆ ಆರಂಭಿಸುತ್ತಾರೆ. ಮೊದಲಿಗೆ ಗ್ರಾಮದವರ ಮಾಹಿತಿ ಆಧರಿಸಿ ಗೀತಾಳನ್ನು ವಿಚಾರಣೆ ಮಾಡಿದ ಪೊಲೀಸರಿಗೆ ಸರಿಯಾದ ಮಾಹಿತಿ ಲಭ್ಯವಾಗುವುದಿಲ್ಲ, ಆದರೆ ಗೀತಾಳ ನಡೆ ಪೊಲೀಸರಿಗೆ ಅನುಮಾನ ಮೂಡುವಂತೆ ಮಾಡುತ್ತದೆ ಈ ಹಿನ್ನಲೆಯಲ್ಲಿ ತನಿಖೆ ಚುರುಕುಗೊಳಿಸುತ್ತಾರೆ. ನಂತರ ಈಕೆಯ ಚಲನವಲನದ ಬಗ್ಗೆ ನಿಗಾ ವಹಿಸುವ ಪೊಲೀಸರು ಗೀತಾಳ ಕಾಲ್ ಡಿಟೈಲ್ಸ್ ಪರಿಶೀಲಿಸುತ್ತಾರೆ. ಅದರಲ್ಲಿ ಗೀತಾ ಹಾಗೂ ಗುರುಪಾದಸ್ವಾಮಿ ನಂಬರ್‌ಗೆ ನಿರಂತರವಾಗಿ ಕರೆ ಮಾಡಿರುವುದು ದಾಖಲಾಗಿರುತ್ತದೆ. ಅಲ್ಲಿಗೆ ಪ್ರಕರಣ ಅನೈತಿಕ ಸಂಬಂಧತ್ತ ವಾಲುವ ಎಲ್ಲಾ ಲಕ್ಷಣಗಳು ಕಾಣತೊಡಗಿ ನಾಪತ್ತೆ ಪ್ರಕರಣ ಮತ್ತೊಂದು ತಿರುವು ಪಡೆದುಕೊಳ್ಳುತ್ತದೆ. ಕಾಲ್ ಡಿಟೈಲ್ಸ್ ಹಾಗೂ ಗ್ರಾಮಸ್ಥರು ನೀಡಿದ ಸುಳಿವು ಎರಡಕ್ಕೂ ತಾಳೆಯಾಗಿದ್ದರಿಂದ ರಮೇಶನ ಕೊಲೆ ಮಾಡಿರುವ ಆರೋಪಿಗಳು ಇವರೇ ಎಂಬ ಸುಳಿವು ಪೊಲೀಸರಿಗೆ ದೊರಕುತ್ತದೆ. ಕೂಡಲೇ ಕಾರ್ಯ ಪ್ರವೃತ್ತರಾದ ಕುದೇರು ಪೊಲೀಸರು ತಮ್ಮ ಹಿರಿಯ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ.

ಚಾಮರಾಜನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಕವಿತಾರವರ ಮಾರ್ಗ ದರ್ಶನದಲ್ಲಿ ಚಾಮರಾಜನಗರ ಡಿವೈಎಸ್ಪಿ ಲಕ್ಷ್ಮಯ್ಯರವರ ಸಹಕಾರದೊಡನೆ ಸಂತೇಮರಳ್ಳಿ ಠಾಣೆ ಆರಕ್ಷಕ ನಿರೀಕ್ಷಕ ಬಸವರಾಜುರವರ ನೇತೃತ್ವದಲ್ಲಿ ಕುದೇರು ಠಾಣೆಯ ಪಿಎಸ್ಐ ಎಸ್. ಕುಮುದಾರವರ ತಂಡ ಹಾಗೂ ಪಿಎಸ್ಐ ಟಿ. ತಾಜುದ್ದಿನ್‌ರವರ ತಂಡ ಸಂತೇಮರಳ್ಳಿ ಹಾಗೂ ಕುದೇರು ಠಾಣೆ ಪೇದೆಗಳಾದ ಯಶವಂತ್, ನಾಗನಾಯಕ್, ಕುದೇರು ಠಾಣೆ ಶಂಕರ್, ಸಿಪಿಐ ಕಚೇರಿ ಮುಖ್ಯಪೇದೆ ಸುರೇಶ್, ಎಎಸ್ಐ ಉಮೇಶ್, ಪ್ರಭು, ರಮೇಶ್, ಮಹೇಶ್, ವಿಜಯ್ ಕುಮಾರ್ ರವರನ್ನೊಳಗೊಂಡ ತಂಡವನ್ನು ರಚಿಸುತ್ತಾರೆ. ಹಿರಿಯ ಅಧಿಕಾರಿಗಳ ಮಾರ್ಗ ದರ್ಶನದಲ್ಲಿ ಪ್ರಕರಣದ ತನಿಖೆ ಕೈಗೊಂಡ ಸಂತೇಮರಳ್ಳಿ ಸಿಪಿಐ ಬಸವರಾಜುರವರು ಆರೋಪಿಗಳನ್ನು ಠಾಣೆಗೆ ಕರೆತಂದು ವಿಚಾರಣೆ ನಡೆಸಿದಾಗ ಪ್ರಾರಂಭದಲ್ಲಿ ನಿರಾಕರಿಸುತ್ತಾರೆ. ಆದರೆ ನಿರಾಕರಿಸಿದರೆ ಪೊಲೀಸರು ಬಿಡಬೇಕಲ್ಲ, ತಮ್ಮ ಪೊಲೀಸ್ ಭಾಷೆಯಲ್ಲಿ ಮಾತನಾಡಿಸಿದಾಗ ಗುರು ಪಾದಸ್ವಾಮಿಗೂ ನನಗೂ ಅಕ್ರಮ ಸಂಬಂಧವಿದ್ದು ಇಬ್ಬರು ಸೇರಿ ರಮೇಶ್ ನನ್ನು ಕೊಲೆ ಮಾಡಿ ಶವವನ್ನು ಕುಪ್ಪೇಗಾಲ ಬಳಿ ಕಪಿಲ ನದಿಗೆ ಬೀಸಾಡಿರುವುದಾಗಿ ವಿಚಾರಣೆ ವೇಳೆ ಆರೋಪಿಗಳು ಒಪ್ಪಿಕೊಂಡಿದ್ದಾರೆ. ಅಲ್ಲಿಗೆ ಕುದೇರು ಪೊಲೀಸರು ಹತ್ಯೆ ಪ್ರಕರಣವನ್ನು ಬೇಧಿಸುವಲ್ಲಿ ಯಶಸ್ವಿಯಾಗುತ್ತಾರೆ.



ಪೊಲೀಸ್ ಇಲಾಖೆಯ ತೀವ್ರ ವಿಚಾರಣೆಯಿಂದ ಆರೋಪಿಗಳೇನೋ ಪತ್ತೆಯಾದರು ಆದರೆ ಆರೋಪ ಸಾಭಿತುಪಡಿಸಲು ಪ್ರಮುಖ ಆಧಾರವಾಗಿರುವ ಶವ ಪತ್ತೆಹಚ್ಚುವುದು ಪೊಲೀಸರಿಗೆ ಸವಾಲಿನ ಕೆಲಸವಾಗಿತ್ತು. ಏಕೆಂದರೆ ರಮೇಶನ ಕೊಲೆಯಾಗಿ ಅದಾಗಲೇ 15 ದಿನಗಳಾಗಿತ್ತು. ಸಾಲದ್ದಕ್ಕೆ ಆರೋಪಿಗಳು ಕೊಲೆ ಮಾಡಿ ನದಿಯಲ್ಲಿ ಬಿಸಾಡಿ ಬಂದಿದ್ದರು. ಆದರೂ ಛಲ ಬಿಡದ ಸಂತೇಮರಳ್ಳಿ ಠಾಣೆ ಸಿಪಿಐ ಬಸವರಾಜುರವರ ನೇತೃತ್ವದ ತಂಡ ಕುಪ್ಪೇಗಾಲ ಸೇತುವೆ ಬಳಿ ಕಪಿಲ ನದಿಗಿಳಿದು ನೀರಿನಲ್ಲಿ ಮೃತದೇಹ ಹುಡುಕಾಟದಲ್ಲಿ ತೊಡಗುತ್ತದೆ. ಆದರೆ ಎಷ್ಟು ಹುಡುಕಿದರೂ ಪತ್ತೆಯಾಗುವುದಿಲ್ಲ, ಅಲ್ಲಿಂದ ನಿಧಾನವಾಗಿ ತೇಲಿಕೊಂಡು ಹೋಗಿದ್ದ ಮೃತದೇಹ ಟಿ.ನರಸೀಪುರ ತಾಲೂಕಿನ ಕಿರಗಸೂರು ಗ್ರಾಮದ ಬಳಿ ಪತ್ತೆಯಾಗುತ್ತದೆ. ಸಂತೇಮರಳ್ಳಿ ಠಾಣೆ ಪೇದೆಗಳಾದ ಯಶವಂತ್, ನಾಗನಾಯಕ್ ಕುದೇರು ಠಾಣೆ ಶಂಕರ್‌ರವರು ಶವವನ್ನು ಪತ್ತೆ ಹಚ್ಚುತ್ತಾರೆ. ಅಲ್ಲಿಗೆ ಈ ತಂಡ ನಡೆಸಿದ ಕಾರ್ಯಚರಣೆ ಯಶಸ್ವಿಯಾಗಿ ನಿಟ್ಟಿಸಿರು ಬಿಡುತ್ತದೆ.



ಪಿಎಸ್ ಐ ಟಿ. ತಾಜುದ್ದೀನ್



ಪಿಎಸ್ ಐ ಕುಮುದಾ

ಸ್ಥಳಕ್ಕೆ ಎಸ್ಪಿ ಡಾ.ಕವಿತಾ ಭೇಟಿ ನೀಡಿ ಪರಿಶೀಲಿಸಿ ಸೂಕ್ತ ಮಾರ್ಗದರ್ಶನ ನೀಡಿ ಕೊಲೆ ಪ್ರಕರಣವನ್ನು ಭೇದಿಸಿದ ಬಸವರಾಜುರವರ ನೇತೃತ್ವ ತಂಡವನ್ನು ಶ್ಲಾಘಿಸಿದ್ದಾರೆ. ನಂತರ ಪೊಲೀಸರು ಆರೋಪಿಗಳನ್ನು ಕುಪ್ಪೇಗಾಲ ಬಳಿಯ ಕಪಿಲ ನದಿಗೆ ಕರೆತಂದು ಮಾಹಿತಿ ಪಡೆದುಕೊಂಡು ಬಳಿಕ ನದಿಯಿಂದ ಮೃತದೇಹವನ್ನು ಹೊರ ತೆಗೆಸಿ ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರರಿಗೆ ಒಪ್ಪಿಸಿ ಆರೋಪಿಗಳನ್ನು ಜೈಲಿಟ್ಟಿದ್ದಾರೆ. ಇತ್ತ ರಮೇಶನ ಮಕ್ಕಳಿಬ್ಬರು ಅನಾಥರಾಗಿದ್ದಾರೆ. ಕುಡಕ ತಂದೆ ನಡತೆಗೆಟ್ಟ ತಾಯಿ ಮಾಡಿದ ತಪ್ಪಿಗೆ ಅನಾಚಾರಕ್ಕೆ ಅಮಾಯಕ ಮಕ್ಕಳಿಬ್ಬರ ಬದುಕು ಬೀದಿಗೆ ಬಿದ್ದಿದೆ.

---

2 ☞

ಮುಟ್ಟಿಸುವಲ್ಲಿ ಯಶಸ್ವಿಯಾದರು. ಇಂತಹ ಸಮಾಜಪರ ಕಾರ್ಯಗಳಿಂದಾಗಿಯೇ ಆ ವರ್ಷದ ರಾಮನ್ ಮ್ಯಾಗ್ಸೆಸ್ಸೆ ಪ್ರಶಸ್ತಿಗೆ ಕೇಜ್ರಿವಾಲ್ ಭಾಜನರಾದರು. 2011 ಏಪ್ರಿಲ್ 5ರಂದು ಜಂತರ್ ಮಂತರ್‌ನಲ್ಲಿ ಭಾರತೀಯ ಸೇನೆಯ ಮಾಜಿ ಯೋಧ ಮಹಾರಾಷ್ಟ್ರದಲ್ಲಿ ಭ್ರಷ್ಟರಿಗೆ ಸಿಂಹಸ್ವಪ್ನವಾಗಿದ್ದ ಪದ್ಮ ಭೂಷಣ, ಹಿರಿಯ ಗಾಂಧಿವಾದಿ ಅಣ್ಣಾ ಹಜಾರೆಯವರ ನೇತೃತ್ವದಲ್ಲಿ ಭಾರತವನ್ನು ಭ್ರಷ್ಟಾಚಾರದಿಂದ ಮುಕ್ತಿಗೊಳಿಸೋಣ ಎಂಬ ಧ್ಯೇಯ ವಾಕ್ಯದೊಂದಿಗೆ ಜನಾಂದೋಲನಕ್ಕೆ ಚಾಲನೆ ನೀಡಲಾಯ್ತು. 2011ರ ಆಗಸ್ಟ್ 15ರ ಒಳಗಾಗಿ ಜನಲೋಕಪಾಲ ಮಸೂದೆಯನ್ನು ಜಾರಿಗೆ ತರುವಂತೆ ಒತ್ತಾಯಿಸಲಾಯಿತು.

ಸರ್ಕಾರ ಆಗಸ್ಟ್ 15ರ ತನಕವೂ ಇದರ ಬಗ್ಗೆ ತಲೆಕೆಡಿಸಿಕೊಳ್ಳದಿದ್ದನ್ನು ಕಂಡು ಆಗಸ್ಟ್ 16ರಂದು ಇದೇ ತಂಡ ಉಪವಾಸ ಸತ್ಯಾಗ್ರಹ ಆರಂಭಿಸಿಯೇ ಬಿಟ್ಟಿತು. ಅನುಮತಿ ಪಡೆಯದೇ ಮೈದಾನದಲ್ಲಿ ಜನರನ್ನು ಸೇರಿಸಿದ ಕಾರಣ ನೀಡಿ ಸರ್ಕಾರ ಅಣ್ಣಾ ಹಜಾರೆ, ಕೇಜ್ರಿವಾಲ್ ಮತ್ತಿತರನ್ನು ಎರಡು ದಿನಗಳ ಕಾಲ ತಿಹಾರ್ ಜೈಲಿನಲ್ಲಿಟ್ಟಿತ್ತು. ಜೈಲಿನಿಂದ ಹೊರಬಂದ ತಂಡ ರಾಮ್‌ಲೀಲಾ ಮೈದಾನದಲ್ಲಿ 12 ದಿನಗಳ ಕಾಲ ಸತ್ಯಾಗ್ರಹ ಮಾಡಿತು. ದೇಶಾದ್ಯಂತ ಪ್ರತಿಭಟನೆ ಕಾವೇರಿದಾಗ ಎಚ್ಚೆತ್ತ ಕೇಂದ್ರ ಸರ್ಕಾರ ಜನಲೋಕಪಾಲ ಮಸೂದೆಯನ್ನು ಕೈಗೆತ್ತಿಕೊಳ್ಳುವುದಾಗಿ ಭರವಸೆ ನೀಡಿತು. ಅಂತಿಮವಾಗಿ ಸರ್ಕಾರ ಸಂಸತ್ತಿನಲ್ಲಿ ದುರ್ಬಲ ಲೋಕಪಾಲ ಮಸೂದೆಯನ್ನು ಮಂಡಿಸಿತು.

ಲೋಕಸಭೆಯಲ್ಲಿ ಇದು ಅಂಗೀಕಾರಗೊಂಡರೂ ರಾಜ್ಯಸಭೆ ಇದನ್ನು ತಿರಸ್ಕರಿಸಿತು. ತಮ್ಮ ಬೇಡಿಕೆ ಈಡೇರುವುದಿಲ್ಲವೆಂದು ಅರಿತ ಕೇಜ್ರಿವಾಲ್ 2012ರಲ್ಲಿ ಗೋಪಾಲ್ ರೈ ಹಾಗೂ ಮನೀಶ್‌ರವರ ಜೊತೆಗೂಡಿ ಮತ್ತೆ ಹೋರಾಟಕ್ಕಿಳಿದರು. ಇದಕ್ಕೂ ಸರ್ಕಾರ ಜಗ್ಗದ ಕಾರಣ ಕೇಜ್ರಿವಾಲ್ ಹೊಸದೊಂದು ಪಕ್ಷ ರಚಿಸಿ ರಾಜಕೀಯಕ್ಕೆ ಧುಮುಕಿದರು. ರಾಜಕೀಯದಲ್ಲಿ ಆಸಕ್ತಿ ಹೊಂದಿರದ ಅಣ್ಣಾ ಹಜಾರೆಯವರು ತಮ್ಮ ಬೆಂಬಲಿಗರೊಂದಿಗೆ ಇವರ ತಂಡದಿಂದ ಹೊರ ನಡೆದರು.

ಅರವಿಂದ ಕೇಜ್ರಿವಾಲರು ನವೆಂಬರ್ 2012ರಲ್ಲಿ ಆಮ್ ಆದ್ಮಿ ಪಕ್ಷವನ್ನು ಸ್ಥಾಪಿಸಿದರು. ಅವರು 2013 ಡಿಸೆಂಬರ್ ತಿಂಗಳಿನಲ್ಲಿ ದೆಹಲಿಗೆ ಜರುಗಿದ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಶೀಲಾ ದೀಕ್ಷಿತರನ್ನು ಸೋಲಿಸಿದರು. ನಂತರ ದೆಹಲಿಯ ಮುಖ್ಯಮಂತ್ರಿ ಆದರು. 2015 ದೆಹಲಿ ವಿಧಾನಸಭೆ ಚುನಾವಣೆಯಲ್ಲಿ ಅರವಿಂದ್ ಕೇಜ್ರಿವಾಲ್ ನೇತೃತ್ವದ ಆಮ್ ಆದ್ಮಿ ಪಕ್ಷ ಎಲ್ಲಾ ಲೆಕ್ಕಾಚಾರಗಳನ್ನು ತಲೆಕೆಳಗು ಮಾಡಿ ಬಹುಮತ ಪಡೆದುಕೊಂಡಿತು. 70 ಸದಸ್ಯ ಬಲದ ವಿಧಾನಸಭೆಯಲ್ಲಿ 67 ಸ್ಥಾನಗಳನ್ನು ಪಡೆಯುವ ಮೂಲಕ ಆಮ್ ಆದ್ಮಿ ಪಕ್ಷ ರಾಜಕೀಯ ಪ್ರತಿಸ್ಪರ್ಧಿಗಳಾದ ಕಾಂಗ್ರೆಸ್ ಪಕ್ಷಕ್ಕೆ ಹಾಗೂ ಭಾರತೀಯ ಜನತಾ ಪಕ್ಷಕ್ಕೆ ಮುಖಭಂಗ ಹಾಗೂ ಗರ್ವಭಂಗ ಮಾಡಿತು. ಆದರೆ 2020ರವೇಳೆಗೆ ಜನಪ್ರಿಯತೆ ಕುಗ್ಗಿತು. ಹೀಗಾಗಿ 67 ರಿಂದ 63ಕ್ಕೆ ಕುಗ್ಗಿತು. 2025ರ ಹೊತ್ತಿಗೆ ಅಧಿಕಾರವೇ ಕಳೆದು ಕೊಳ್ಳುವಂತಾಯಿತು. ಮುಂದೇನು ಕಾದು ನೋಡೋಣ...

---

# ...ಕಿರುಕುಳಕ್ಕೆ ವಿದ್ಯಾರ್ಥಿನಿ ಆತ್ಮಹತ್ಯೆ !

7 ☞

ಸೇರಿದ್ದ ಅನಾಮಿಕ ವಿನೀತ ವಿದ್ಯಾರ್ಥಿನಿ ಒಂದೆರಡು ವಿಷಯದಲ್ಲಿ ಹಿಂದುಳಿದಿದ್ದರು. ಇದನ್ನೇ ನೆಪ ಮಾಡಿಕೊಂಡು ಕಾಲೇಜಿನ ಪ್ರಾಂಶುಪಾಲರು ಹಾಗೂ ಆಡಳಿತ ಮಂಡಳಿಯವರು ಅನಾಮಿಕ ವಿನೀತಗೆ ಮಾನಸಿಕವಾಗಿ ಹಿಂಸೆ ನೀಡುತ್ತಿದ್ದರು. ಒಂದು ವಿಷಯದಲ್ಲಿ ಫೇಲಾದರೆ ಇಂತಿಷ್ಟು ಹಣ ಪಾವತಿಸಬೇಕು. ಇಲ್ಲದಿದ್ದರೆ ವರ್ಷದ ಪೂರ್ಣ ಶುಲ್ಕ ಪಾವತಿಸಬೇಕು ಎಂದು ತೊಂದರೆ ಕೊಡುತ್ತಿದ್ದರು. ಕಾಲೇಜು ತೊರೆಯಲು ಮುಂದಾಗಿದ್ದ ಅನಾಮಿಕ ವಿನೀತ ವರ್ಗಾವಣೆ ಪತ್ರ ಕೇಳಿದಾಗ, ನಾಲ್ಕು



ಮೃತ ಶವ ರವಾನಿಸುತ್ತಿರುವುದು

ವರ್ಷದ ಶುಲ್ಕ ಪಾವತಿಸಿದರೆ ವರ್ಗಾವಣೆ ಪತ್ರ ಕೊಡುವುದಾಗಿ ಹೇಳಿದ್ದರು. ಇದರಿಂದ ತೀವ್ರ ಮಾನಸಿಕವಾಗಿ ನೊಂದಿದ್ದ ಅನಾಮಿಕ ವಿನೀತ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ವಿದ್ಯಾರ್ಥಿಗಳು ಪ್ರತಿಭಟನೆಯಲ್ಲಿ ದೂರಿದರು.

ಪೊಲೀಸರು ಈ ಘಟನೆ ಕುರಿತು ನಿಷ್ಪಕ್ಷಪಾತವಾಗಿ ತನಿಖೆ ನಡೆಸಿ ತಪ್ಪಿತಸ್ಥರನ್ನು ಪತ್ತೆಹಚ್ಚಬೇಕು. ವಿದ್ಯಾರ್ಥಿಗಳು ತಪ್ಪು ಮಾಡಿದರೆ ಆಡಳಿತ ಮಂಡಳಿಯು ಪೋಷಕರ ಗಮನಕ್ಕೆ ತಂದು ಸರಿಪಡಿಸಬೇಕು. ಅದನ್ನು ಬಿಟ್ಟು ಕಿರುಕುಳ ನೀಡಿದರೆ ವಿದ್ಯಾರ್ಥಿಗಳು ಆತ್ಮಹತ್ಯೆಯ ಹಾದಿ ಹಿಡಿಯುತ್ತಾರೆ. ಕಾಲೇಜಿನವರು ಈ ಘಟನೆಯಿಂದ ಎಚ್ಚೆತ್ತುಕೊಂಡು ಮುಂದೆ ಈ ರೀತಿ ಕೃತ್ಯಗಳು ನಡೆಯದಂತೆ ಕ್ರಮ ಕೈಗೊಳ್ಳಬೇಕು ಎಂದು ಪ್ರತಿಭಟನಾ ನಿರತರು ಆಗ್ರಹಿಸಿದರು. ವಿದ್ಯಾರ್ಥಿಗಳ ಬೇಡಿಕೆಗೆ ಸ್ಪಂದಿಸುವ ಜೊತೆಗೆ ಪೊಲೀಸ್ ತನಿಖೆಗೆ ಸಹಕರಿಸುವುದಾಗಿ ಆಡಳಿತ ಮಂಡಳಿ ಭರವಸೆ ನೀಡಿದ ಮೇಲೆ ವಿದ್ಯಾರ್ಥಿಗಳು ಪ್ರತಿಭಟನೆ ನಿಲ್ಲಿಸಿದರು.

ಏನೇ ಆದರೂ ಇತ್ತೀಚಿನ ದಿನಗಳಲ್ಲಿ ಕಾಲೇಜುಗಳಲ್ಲಿ ಸುಲಿಗೆ ಮಾಡುತ್ತಿರುವ ಹಾಗೂ ಬಡವರ ರಕ್ತ ಹೀರುತ್ತಿರುವ ಇಂತಹ ಕಾಲೇಜುಗಳಿಗೆ ಕಾನೂನು ರೀತಿ ಕ್ರಮ ಜರುಗಿಸಿ, ಪ್ರತಿಯೊಬ್ಬರಿಗೂ ವಿದ್ಯಾಭ್ಯಾಸ ಮಾಡಲು ಅನುವು ಮಾಡಿಕೊಡಬೇಕೆಂದು ಸರ್ಕಾರಕ್ಕೆ ಮೊರೆ ಹೋದ ಸಾರ್ವಜನಿಕರು.

## ಪಾತಕ ಪ್ರಪಂಚ

# ಸಾವಿನ ಬಯಕೆ

ರಾಜ್ಯ-ಪಂಜಾಬ್

ಸ್ಥಳ-ಪಾಟಿಯಾಲ

ಕಾಲಾವಧಿ-1998ರಿಂದ 1999

ತುಂಬಾ ಹಿಂದೆ ನಡೆದಿದ್ದ ಈ ವಿಚಿತ್ರ-ವಿಲಕ್ಷಣ ಘಟನೆಯ ಬಗ್ಗೆ ತಿಳಿದದ್ದು ಆಕಸ್ಮಿಕ ಸನ್ನಿವೇಶದಲ್ಲಿ. ನನಗೆ ಕರ್ನಾಟಕದಲ್ಲಿ ಪ್ರಚಲಿತವಾಗಿರುವ ಈ ಪತ್ರಿಕೆ ಸಿಕ್ಕಿದ್ದು ಆಕಸ್ಮಿಕವಾಗಿ.

ಹೊರ ರಾಜ್ಯಗಳ ಸುದ್ದಿ ವಿಭಾಗದಲ್ಲಿ ಪ್ರಕಟಗೊಂಡಿದ್ದ ಆ ಕಾಲಂ ತುಂಬಾ ಸಂಕ್ಷಿಪ್ತವಾಗಿತ್ತು. ಅದನ್ನು ಓದಿದ ಮೇಲೆ ಈ ವಿಚಿತ್ರ-ವಿಲಕ್ಷಣ, ಹುಚ್ಚು ಆಸೆ ಇರುವವರು ಈ ಭೂಮಿ ಮೇಲೆ ಇದ್ದಾರ ಎಂಬ ಆಲೋಚನೆ ಕೊರೆಯುತ್ತಿತ್ತು. ವರದಿಯ ಸಾರಾಂಶದ ಜೊತೆಗೆ ವಿಭಿನ್ನ ನಿರೂಪಣೆಯ ಶೈಲಿಯಲ್ಲಿ ರಚಿಸಲಾಗಿದೆ.

ಹೆಸರು-ಪಾಟಿಯಾಲ ಸಿಂಗ್!

ಆ ರಾಜ್ಯದ ಯಾವುದೋ ಮೂಲೆಯಲ್ಲಿರುವ ಈ ಗ್ರಾಮದ ಹೆಸರನ್ನು ತನ್ನ ಹೆಸರಿನ ಜೊತೆ ಸೇರಿಸಿಕೊಂಡಿದ್ದಾನೆ.

ಇವನೊಬ್ಬ ಶ್ರೀಮಂತ.

ಕೋಟಿಗಳ ಲೆಕ್ಕದಲ್ಲಿ ಆಸ್ತಿ ಮಾಡಿರುವ ಮತ್ತು ಸಮಾಜ ಸೇವೆ, ಕಲೆ, ಸಾಹಿತ್ಯದಲ್ಲಿ ತೊಡಗಿಸಿಕೊಂಡಿದ್ದ ಜನಪ್ರಿಯ ವ್ಯಕ್ತಿ. ಹಲವಾರು ಸಂಘ-ಸಂಸ್ಥೆಗಳಿಗೆ ಇವನು ಅಧ್ಯಕ್ಷನಾಗಿದ್ದನು. ಯಾಕೆ ಅಂದರೆ ಧಾರಾಳವಾಗಿ ಡೊನೇಷನ್ ಕೊಡುತ್ತಿದ್ದನು.

ಬಂಧುಗಳ ಸಾವಿಗೆ ಇವನು ದೂರವಾಗಿದ್ದನು. ಕಷ್ಟದಲ್ಲಿರುವವರಿಗೆ ಧಾರಾಳವಾಗಿ ಸಹಾಯ ಮಾಡುತ್ತಿದ್ದನು.

ಸಂಸಾರದ ವಿವರಣೆ.

ಇವನ ಪತ್ನಿ ಸಾರಿಕ ಸಿಂಗ್!

ಇಬ್ಬರು ಮಕ್ಕಳು.

ಮಗಳ ಕೈವಲ್ಯ ಸಿಂಗ್.

ಮಗ ಅರ್ಜುನ್ ಸಿಂಗ್.

ಅವನ ವಾಸ ನಗರದ ರಾಜಧಾನಿಯ ಮುಖ್ಯ ಬಡಾವಣೆಯಲ್ಲಿ ವ್ಯಾಪಾರ, ವ್ಯವಹಾರದ ಒತ್ತಡ ಜಾಸ್ತಿ. ಆದರೆ... ಆದರೆ ಸಮಾಜಮುಖಿಯಾಗಿ, ಸಾಹಿತಿ, ಕಲಾವಿದನಾಗಿ ಸಹ ಹೆಸರು ಮಾಡಿದ್ದಾನೆ. ಇವನು ಸಮಾಜದ ಅತ್ಯಂತ ಗೌರವಾನ್ವಿತ ಗಣ್ಯ ಶ್ರೀಮಂತ ವ್ಯಕ್ತಿ.

ಪಾಟಿಯಾಲ ಸಿಂಗ್!

ಇವನಿಗೊಂದು ವಿಚಿತ್ರ-ವಿಲಕ್ಷಣವಾದ ಮತ್ತು ಇದನ್ನು ಕೇಳಿದರೆ ಇವನಿಗೆಲ್ಲೋ ತಲೆಕೆಟ್ಟಿದೆ ಎಂದು ಅಭಿಪ್ರಾಯ ಬರುವಂತ ಹುಚ್ಚು ಆಸೆ ಬೆಳೆಸಿಕೊಂಡಿದ್ದನು.

ಆ ಹುಚ್ಚು ಆಸೆ ಏನು?

ಅದನ್ನು ಈಗಲೇ ಹೇಳಿದರೆ ಘಟನೆಗಳನ್ನು ಸ್ವಾರಸ್ಯ ಉಳಿಯುವುದಿಲ್ಲ.

ಘಟನೆ ಪ್ರಾರಂಭವಾಗಿದೆ!

●●●

ರಾತ್ರಿ ಹನ್ನೊಂದು ಗಂಟೆ.

ಮನೆಯವರಿಗೆ ಫೋನ್ ಕಾಲ್ ಬಂದಿತು.

ಆಘಾತಕರ ಸುದ್ದಿ!

ಕಾರಲ್ಲಿ ಪ್ರಯಾಣ ಮಾಡುತ್ತಿರುವಾಗ ಅಪಘಾತ ಉಂಟಾಗಿದೆ.

ಕಾರು ಮರಕ್ಕೆ ಗುದ್ದಿದೆ!

ಪಾಟಿಯಾಲ ಸಿಂಗ್ ಮೃತನಾಗಿದ್ದಾನೆ. ಡ್ರೈವರ್ 'ಕಲ್ಮಾಡಿ' ತಪ್ಪಿಸಿಕೊಂಡಿದ್ದಾನೆ.

ಸುದ್ದಿ ಗಾಳಿವೇಗದಲ್ಲಿ ಹರಡಿತು.

ಅಪಘಾತ ನಡೆದಿದ್ದ ಸ್ಥಳಕ್ಕೆ ಹತ್ತಾರು ವಾಹನಗಳಲ್ಲಿ ಗಣ್ಯರು, ಉದ್ಯಮಿಗಳು ಮತ್ತು ಸುದ್ದಿ ಮಾಧ್ಯಮದವರು ಹೋಗುತ್ತಿದ್ದರೆ. ಇಂತಹ ಪ್ರಸಿದ್ಧ ಶ್ರೀಮಂತ ಅಪಘಾತದಲ್ಲಿ ಸತ್ತಿದ್ದಾನೆ ಅಂದರೆ ಪ್ರಚಾರ ಆಗದಿರುವುದೇ?

ನೂರಾರು ಮಂದಿ ಸೇರಿದ್ದಾರೆ. ಪೊಲೀಸರು ಶ್ರೀಮಂತ ಗಣ್ಯರನ್ನು ಗೌರವದಿಂದಲೇ ದೂರ ಕಳಿಸುತ್ತಿದ್ದಾರೆ.

ಕಾರು ಮರಕ್ಕೆ ಗುದ್ದಿರೋದ್ರಿಂದ ಪೂರ್ತಿ ಜಖಂ ಆಗಿದೆ. ಡೆಡ್‌ಬಾಡಿ ಹಿಂಭಾಗದ ಸೀಟಿನಲ್ಲಿ ಹೊರಳಿಕೊಂಡಿರುವ ರೀತಿ ಬಿದ್ದಿದೆ. ಮುಖ ಪೂರ್ತಿ ಜಜ್ಜಿ ಹೋಗಿದೆ. ಇಡೀ ಶರೀರದ ತುಂಬಾ ರಕ್ತ ಹರಿದು ಹೆಪ್ಪುಗಟ್ಟುತ್ತಿದೆ.

ಸಿಮೆಂಟ್ ಕಲರ್‌ನ ಬೆಲೆಬಾಳುವ ಸಫಾರಿ ಡ್ರೆಸ್ ರಕ್ತಮಯ ಆಗಿದೆ.

ಕತ್ತಿನಲ್ಲಿ ಚಿನ್ನದ ಸರ.

ಸರದ ತುದಿಯಲ್ಲಿ ಡಾಲ್ ಇದೆ.

ಅದರಲ್ಲಿ ಫೋಟೋ ಇದೆ.

ಅದು ಯಾವ ಫೋಟೋ...?

ಪ್ಯಾಂಟ್ ಜೇಬಿನಿಂದ ಪರ್ಸ್ ಅರ್ಧಭಾಗ ಹೊರಗೆ ಕಾಣುತ್ತಿದೆ.

ಕಂಪನಿ ಕಾರ್ಡ್.

ವಿಸಿಟಿಂಗ್ ಕಾರ್ಡ್.

ಆರು ಎಟಿಎಂ ಕಾರ್ಡ್‌ಗಳಿವೆ.

ಮತ್ತೊಂದು ಕಡೆ ಮೊಬೈಲ್ ಬಿದ್ದಿದೆ. ಅದೂ ಸಹ ರಕ್ತಮಯ ಆಗಿದೆ.

ಶೂಗಳು-ಕರ್ಚೀಫ್ ಸಹ ರಕ್ತ ಲೇಪನದಿಂದ ಬಣ್ಣ ಬದಲಾಗಿದೆ.

ಮತ್ತೊಂದು ದೃಶ್ಯ ಏನು?

ವಾಚ್... ಗೋಲ್ಡನ್ ಚೈನ್‌ನ ದುಬಾರಿ ಬೆಲೆಯ ವಾಚ್‌ನ ಗಾಜು ಪುಡಿಯಾಗಿದೆ. ಅಬ್ಬ... ಎಂತಹ ಶ್ರೀಮಂತ ವ್ಯಕ್ತಿ, ಗುಣವಂತ, ಸಮಾಜದ ಉಪಕಾರಿ ಮನುಷ್ಯನಿಗೆ ಇಷ್ಟು ಬೇಗ ಈ ರೀತಿ ಸಾವು ಬರಬಾರದಿತ್ತು.

ಡ್ರೈವರ್ ಕಲ್ಮಾಡಿ!

ಇವರ ಕಾರಿನ ಡ್ರೈವರ್ ಆಗಿ ತುಂಬಾ ವರ್ಷಗಳಿಂದ ಕೆಲಸ ಮಾಡುತ್ತಿದ್ದವನು ತಪ್ಪಿಸಿಕೊಂಡಿದ್ದಾನೆ. ಪೊಲೀಸರನ್ನು ಈ ಅನುಮಾನ ತೀವ್ರವಾಗಿ ಕಾಡಿತು.

ಹಿಂಭಾಗದ ಸೀಟಲ್ಲಿ ಕುಳಿತಿದ್ದ ಪಾಟಿಯಾಲ ಸಿಂಗ್ ಅವರಿಗೆ ಸಾವು ಬರುವಷ್ಟರಮಟ್ಟಿಗೆ ಗಾಯಗಳಾಗಿವೆ. ಡ್ರೈವರ್‌ಗೆ ಏನೂ ಆಗಿಲ್ವ?

ಅವನು ಹೇಗೆ ತಪ್ಪಿಸಿಕೊಂಡ?

ಡ್ರೈವರ್ ಫೋನ್ ನಂಬರ್ ಮತ್ತು ಅವನ ಸ್ವಂತ ಸ್ಥಳ ಮತ್ತು ಈ ಊರಲ್ಲಿ ಅವನಿಗೆ ಯಾರ್ಯಾರು ಸಂಬಂಧಿಕರು, ಪರಿಚಯದವರು ಇದ್ದಾರೆ ಎಂಬುದರ ಬಗ್ಗೆ ಮಾಹಿತಿ ಸಂಗ್ರಹಿಸಿದರು. ಕಲ್ಮಾಡಿಗಾಗಿ ಹುಡುಕಾಟ ತೀವ್ರವಾಗಿದೆ ಎಂದು ಹೇಳಬಹುದು.

ಬಾಡಿಯನ್ನು ಪೋಸ್ಟ್‌ಮಾರ್ಟಂಗೆ ಕಳಿಸಲಾಯಿತು. ಪೋಸ್ಟ್‌ಮಾರ್ಟಮ್ ಪ್ರಾರಂಭ ಮಾಡುವ ಅರ್ಧ ಗಂಟೆ ಮೊದಲು ಡಾಕ್ಟರ್‌ಗೆ ಫೋನ್ ಕಾಲ್ ಬಂದಿತು.

ಡಾಕ್ಟರ್ ಕೃಪಾಲ್ ಸಿಂಗ್...!

ಇದಾದ ನಂತರ ಡಾಕ್ಟರ್ ಮೊಬೈಲ್‌ಗೆ ಬ್ಯಾಂಕ್ ಮೆಸೇಜ್ ಬಂದಿತು. ಒಂದು ಲಕ್ಷ ರೂಪಾಯಿ ಅವರ ಖಾತೆಗೆ ಕ್ರೆಡಿಟ್ ಆಗಿದೆ...!

●●●

ಪತ್ನಿ ಸಾರಿಕಾ ಸಿಂಗ್ ಇಬ್ಬರು ಮಕ್ಕಳಿದ್ದಾರೆ.

ಕೈವಲ್ಯ ಸಿಂಗ್ ಎಂಬ ಎಂಟು ವರ್ಷದ ಮಗಳು, ಅರ್ಜುನ್ ಸಿಂಗ್ ಎಂಬ ಆರು ವರ್ಷದ ಮಗ. ಮಕ್ಕಳು ಚಿಕ್ಕವರಾಗಿರೋದ್ರಿಂದ ಶವಸಂಸ್ಕಾರದ ಜವಾಬ್ದಾರಿಯನ್ನು ಜೋಗಿಂಧರ್ ಸಿಂಗ್ ಮಾಡಲೇಬೇಕಾಯಿತು.

ಜೋಗಿಂಧರ್ ಸಿಂಗ್ ಯಾರು?

ಸಾರಿಕಾ ಸಿಂಗ್ ಅವರ ತಾಯಿಯ ತಮ್ಮ. ಅವಳು ಈ ಶ್ರೀಮಂತ ಕುಟುಂಬಕ್ಕೆ ಸೊಸೆಯಾಗಿ ಬಂದ ದಿನದಿಂದಲೇ ಇವರಲ್ಲಿ ಒಬ್ಬನಾಗಿದ್ದನು.

ಬಂಗಲೆಯ ನಿತ್ಯ ವ್ಯವಹಾರಗಳು ಮತ್ತು ಯಜಮಾನ ಪಾಟಿಯಾಲ ಸಿಂಗ್ ಅವರ ವ್ಯವಹಾರಗಳಲ್ಲಿ ಸಹಾಯ ಮಾಡುವುದು ಮತ್ತು ಯಜಮಾನಿ ಸಾರಿಕಾ ಸಿಂಗ್ ಅವರಿಗೆ ಕಾರಿನ ಡ್ರೈವರ್ ಆಗಿದ್ದನು. ಎರಡು ಮಕ್ಕಳ ಸಂಪೂರ್ಣ ಜವಾಬ್ದಾರಿ ಇವನದಾಗಿತ್ತು.

ಕಾರಣ ಸಾರಿಕಾ ಸಿಂಗ್!

ಮುವತ್ತರ ಪ್ರಾಯದವಳು.

ಎರಡು ಮಕ್ಕಳ ತಾಯಿ ಆಗಿದ್ದರೂ ಸಹ ತನ್ನ ಸೌಂದರ್ಯ ಕಾಪಾಡಿಕೊಂಡಿದ್ದಳು. ಇಪ್ಪತ್ತರ ಪ್ರಾಯದ ಯುವತಿಯಂತೆ ಇದೆ ಅವಳ ದೇಹ ಸೌಂದರ್ಯ. ಮೇಕಪ್ ಮಾಡದಿದ್ದರೂ ಸಹ ಬಲು ಆಕರ್ಷಕವಾಗಿ ಕಾಣುತ್ತಾಳೆ. ಇವಳ ಚೆಲುವಿಗೆ ಬೆರಗಾಗಿ, ಅವಳ ತವರಿನವರಿಗೆ ಎಷ್ಟೋ ಲಕ್ಷಗಳ ಸಹಾಯ ಮಾಡಿ ಮದುವೆ ಆಗಿದ್ದನು.

ಹೆಂಡತಿಯ ಗುಲಾಮನೆ?

ನಿಜ ಬ್ಯುಟಿ ಕ್ವೀನ್ ಆಗಿರುವ ಪತ್ನಿಯ ಮಾತು ಮೀರುತ್ತಿರಲಿಲ್ಲ. ಅವಳು ಎಷ್ಟೇ ಹಣ ಖರ್ಚು ಮಾಡಲಿ, ಎಲ್ಲಿಗೆ ಬೇಕಾದರೂ ಹೋಗಿ ಬರಲಿ ಪ್ರಶ್ನೆ ಮಾಡುತ್ತಿರಲಿಲ್ಲ. ಮುಖ್ಯವಾಗಿ ಇವನಿಗೆ ಟೈಂ ಇರಲಿಲ್ಲ.

ಹೆಂಡತಿಗೆ ಸಮಾಜ ಸೇವೆ.

ಗಂಡನಿಗೆ ಬಿಜಿನೆಸ್.

ಸಾರಿಕಾ ಸಿಂಗ್ ಪಂಜಾಬ್‌ನಲ್ಲಿರುವ ಕೆಲವು ಪ್ರಮುಖ ಮಹಿಳಾ ಸಂಘಗಳಿಗೆ ಅಧ್ಯಕ್ಷಳಾಗಿದ್ದಳು. ಧಾರಾಳವಾಗಿ ಡೊನೇಷನ್ ಮಾಡುತ್ತಿದ್ದಳು.

ಅವಳು ನಿಜವಾಗಿ ಚೆಲುವೆ. ಆ ಸಂಘದವರು ಅವಕಾಶ ದೊರೆತಾಗಲೆಲ್ಲಾ ಅವಳ ಚೆಲುವನ್ನು ಹೊಗಳುತ್ತಿದ್ದರು. ಇದರಿಂದ ಅವಳು ರೋಮಾಂಚನಗೊಳ್ಳುತ್ತಿದ್ದಳು.

ಗಂಡ ಸತ್ತಿದ್ದಾನೆ ಎಂಬ ದುಃಖವೇನು ಅವಳ ಮುದ್ದು ಮುಖದಲ್ಲಿ ಕಂಡು ಬಂದಿರಲಿಲ್ಲ. ಆದರೆ ಶವಸಂಸ್ಕಾರವನ್ನು ಅತ್ಯಂತ ವೈಭವದಿಂದ ಮಾಡಿದರು.

ಅಂತಿಮ ದರ್ಶನಕ್ಕೆ ಬಂಗಲೆಯ ಕಾಂಪೌಂಡ್ ಆವರಣದಲ್ಲಿ ವ್ಯವಸ್ಥೆ ಮಾಡಲಾಗಿದೆ. ನಗರದ ಹಲವಾರು ಗಣ್ಯರು ಮತ್ತು ಸಿನಿಮಾರಂಗದವರು ಬಂದಿದ್ದಾರೆ.

ನೂರಾರು ಮಂದಿ ಸೇರಿದ್ದಾರೆ.

ಸಿನಿಮಾ ನಟಿಯರಲ್ಲಿ 'ಪ್ರಲಂಗನ' ಮತ್ತು ಗಗನಸಖಿ ಸ್ಮೃತಿ ಸಿಂಗ್ ಮತ್ತು ಆ ವರ್ಷದ ಮಿಸ್ ಪಂಜಾಬ್ ಆಗಿ ಸೆಲೆಕ್ಟ್ ಆಗಿದ್ದ ಹರ್ಷಿತ ಸಿಂಗ್ ಮತ್ತು ಶ್ರೀಮಂತ ಉದ್ಯಮಿಗಳು ಮತ್ತು ರಾಜಕಾರಣಿಗಳು ಶ್ರದ್ಧಾಂಜಲಿ ಸಲ್ಲಿಸಿದ್ದರು ಮತ್ತು ಟಿ.ವಿ. ಚಾನಲ್‌ಗಳಿಗೆ ಸಂದರ್ಶನ ನೀಡಿದ್ದರು.

ನೂರಾರು ಮಂದಿ ಬಂದು ಹೂವಿನ ಹಾರ ಹಾಕಿ ನಮಸ್ಕರಿಸಿ ಮುಂದೆ ಸಾಗುತ್ತಿದ್ದಾರೆ. ವಿಪರೀತ ಜನಸಂದಣಿಯನ್ನು ನಿಯಂತ್ರಿಸುವುದು ಪೊಲೀಸರಿಗೆ ಕಷ್ಟ ಆಗಿತ್ತು. ಮುಖ್ಯವಾಗಿ ವಾಹನಗಳ ಸಂಖ್ಯೆ ವಿಪರೀತ ಆಗಿದ್ದರಿಂದ, ಪಾರ್ಕಿಂಗ್ ವ್ಯವಸ್ಥೆ ಮಾಡಲು ಪೊಲೀಸರು ದೊಡ್ಡ ಸಾಹಸ ಮಾಡುತ್ತಿದ್ದಾರೆ.

ಶವದ ಮೆರವಣಿಗೆ ಪ್ರಾರಂಭ ಆಗಿದೆ. ಜೋಗಿಂಧರ್ ಸಿಂಗ್ ತುಂಬಾ ವೈಭವ ರೀತಿಯಲ್ಲಿ ಮೆರವಣಿಗೆಗೆ ವ್ಯವಸ್ಥೆ ಮಾಡಿದ್ದಾನೆ.

ನೂರಾರು ಮಂದಿ ಶವಯಾತ್ರೆಯಲ್ಲಿ ಭಾಗವಹಿಸಿದ್ದಾರೆ. ಸಿನಿಮಾ ನಟಿಯರು ಮತ್ತು ಶ್ರೀಮಂತ ಉದ್ಯಮಿಗಳು ಅಂತಿಮ ದರ್ಶನ ಮಾಡಿ, ಟಿ.ವಿ. ಚಾನಲ್‌ಗೆ ಸಂದರ್ಶನ ನೀಡಿದ್ದಾನೆ.

ಈ ಗಣ್ಯರಲ್ಲಿ ಕೆಲವರು ಮಾತ್ರ ಸ್ಮಶಾನಕ್ಕೆ ಬಂದಿದ್ದರು.

ವಿಶೇಷತೆ ಏನು?

ಈ ಜನಗಳ ಗುಂಪಿನಲ್ಲಿ ತುಂಬಾ ಹೊತ್ತಿನಿಂದ ಒಬ್ಬ ಭಿಕ್ಷುಕನಂತೆ ಇದ್ದವನು ತುಂಬಾ ಕುತೂಹಲದಿಂದ ಎಲ್ಲವನ್ನೂ ಸಹ ವೀಕ್ಷಣೆ ಮಾಡುತ್ತಿದ್ದಾನೆ.

ಮೈ ತುಂಬಾ ಕಂಬಳಿ ಸುತ್ತಿಕೊಂಡಿರುವ ಅವನು ನಮ್ಮಲ್ಲಿ ಬಳಕೆಯಲ್ಲಿರುವ ಮಂಕಿ ಕ್ಯಾಪ್ ರೀತಿ ಇದೆ. ಆದರೆ ಅದಕ್ಕೆ ಅಲ್ಲಿರುವ ಹೆಸರು ಬೇರೆ.

ಶವ ಮೆರವಣಿಗೆಯ ಉದ್ದಕ್ಕೂ ನಡೆದುಕೊಂಡು ಬಂದಿದ್ದಾನೆ.

ಎಲ್ಲಾ ಕಡೆ ನೋಡುತ್ತಿದ್ದಾನೆ.

ಎಲ್ಲವನ್ನೂ ಗಮನಿಸುತ್ತಿದ್ದಾನೆ.

ಅವನ ವಿಚಿತ್ರ ರೀತಿಯಲ್ಲಿ ಆನಂದದ ಅನುಭವಿಸುತ್ತಾ ರೋಮಾಂಚನಗೊಳ್ಳುತ್ತಿದ್ದಾನೆ.

ಶವದ ಸಂಸ್ಕಾರದ ಸಮಯದಲ್ಲಿ ಜೋಗಿಂಧರ್ ಸಿಂಗ್ ವಿಶೇಷ ಕಾರ್ಯಕ್ರಮಕ್ಕೆ ಚಾಲನೆ ನೀಡಿದನು.

ಪಟಾಕಿಗಳನ್ನು ಸಿಡಿಸಿದರು.

ಬಣ್ಣದ ಬೆಳಕಿನ ವಿಶೇಷವಾದ ಪಟಾಕಿಗಳು ಎತ್ತರದ ಜಾಗದಲ್ಲಿ ಗಿರ್ರನೆ ತಿರುಗುತ್ತಾ ಬಣ್ಣ ಬಣ್ಣಗಳ ಬೆಳಕನ್ನು ಚೆಲ್ಲಾಡಿದವು.

ಭಿಕ್ಷುಕನ ರೀತಿ ಇದ್ದ ಆ ವ್ಯಕ್ತಿ ರೋಮಾಂಚನಗೊಳ್ಳುತ್ತಿದ್ದಾನೆ. ಒಂದು ಸಲ ಅಂತು ಚಪ್ಪಾಳೆ ತಟ್ಟುತ್ತಾ ಮೈಮರೆತು ಡ್ಯಾನ್ಸ್ ಮಾಡಿದನು.

ಅಲ್ಲಿದ್ದವರು ಕೋಪದಿಂದ ರೇಗಾಡಿದಾಗ ತೆಪ್ಪಗಾದನು. ಕುಲಪದ್ಧತಿಯಂತೆ ಶವಸಂಸ್ಕಾರ ಮುಗಿಯಿತು.

ನಗರದಲ್ಲಿರುವ ಬಂಗಲೆಯಲ್ಲಿ ಈ ಯಜಮಾನನ ಹೆಂಡತಿ, ಮಕ್ಕಳು ಮತ್ತು ಸಂಬಂಧಿಕರು ಸೇರಿದ್ದಾರೆ. ಪಾಟಿಯಾಲ್ ಸಿಂಗ್‌ನ ಗುಣಗಾನ ಮಾಡುತ್ತಿದ್ದಾರೆ.

ಸಾರಿಕಾ ಸಿಂಗ್ ಸಹ ಮಾಧ್ಯಮದವರಿಗೆ ಸಂದರ್ಶನ ನೀಡಿದ್ದಾಳೆ.

ಆಕೆ ಆಗ ಕಂಬನಿ ಮಿಡಿದಿದ್ದಳು.

ಅಳುತ್ತಲೇ ಮಾತಾಡಿದ್ದಳು.

ಗಂಡನ ಗುಣಗಾನ ಮಾಡಿದ್ದಳು. ತಮ್ಮ ಆದರ್ಶ ದಾಂಪತ್ಯದ ಬಗ್ಗೆ ಭಾವುಕಳಾಗಿ ಮಾತಾಡಿದ್ದಳು. ಇದು ವಿಶೇಷ ಸಂದರ್ಶನ. ಎಲ್ಲಾ ಚಾನಲ್‌ಗಳಲ್ಲಿ ಪ್ರಸಾರ ಆಗುವಂತೆ ವ್ಯವಸ್ಥೆ ಮಾಡಿದ್ದವನು ಈ ಜೋಗಿಂಧರ್ ಸಿಂಗ್.

●●●

ನಗರದ ಹೊರವಲಯದಲ್ಲಿರುವ ಒಂಟಿ ಮನೆಯ ಸುತ್ತಲು ಕಾಂಪೌಂಡ್ ಗೋಡೆ ಇದೆ. ಅದು ಶ್ರೀಮಂತಿಕೆಯ ಎಲ್ಲಾ ಅನುಕೂಲ ಮತ್ತು ವೈಭವ ಇರುವಂತಹ ಬಂಗಲೆ ಆಗಿದೆ.

ಬೆಡ್‌ರೂಮು ಸ್ಟಾರ್ ಹೋಟೆಲ್‌ನ ಅನುಕೂಲ, ವೈಭವದಿಂದ ಕೂಡಿದೆ.

ಅಲ್ಲಿ ಒಬ್ಬ ಸೋಫಾದಲ್ಲಿ ಆರಾಮವಾಗಿ ಮೈಚೆಲ್ಲಿ ಕುಳಿತು ಟಿ.ವಿ. ಪ್ರೋಗ್ರಾಂ ನೋಡುತ್ತಿದ್ದಾನೆ.

ಅಂತಿಮ ದರ್ಶನದ ವೇಳೆಯಲ್ಲಿ ಶ್ರೀಮಂತ ಉದ್ಯಮಿಗಳು, ಸಿನಿಮಾರಂಗದವರು, ಇಬ್ಬರು ಗಗನಸಖಿಯರು ನೀಡಿರುವ ಹೇಳಿಕೆಯನ್ನು ದಿನಪೂರ್ತಿ ಪ್ರಸಾರ ಮಾಡುತ್ತಿದ್ದಾರೆ.

ವಿಶೇಷ ಸಂದರ್ಶನ. ಶ್ರೀಮತಿ ಸಾರಿಕಾ ಸಿಂಗ್ ಪತಿಯ ಬಗ್ಗೆ ನೀಡಿದ್ದ ಸಂದರ್ಶನ ಪ್ರಸಾರ ಆಗುತ್ತಿದೆ.

ಭಿಕ್ಷುಕನ ರೀತಿ ಇದ್ದವನ ನಿಜ ವೇಷ ಈಗ ಬೇರೆಯಾಗಿದೆ...!

ಶವಸಂಸ್ಕಾರ ದೃಶ್ಯ. ಗಣ್ಯರ ಹೇಳಿಕೆಗಳು. ಅಂತಿಮ ಸಂಸ್ಕಾರ.

ಎಲ್ಲರನ್ನೂ ನೋಡುತ್ತಾ ಖುಷಿ ಪಡುತ್ತಿದ್ದಾನೆ. ಆಗ ಹೊರಗಿನಿಂದ ಡೋರ್ ಲಾಕ್ ಓಪನ್ ಆಗುತ್ತಿರುವ ಶಬ್ದ ಕೇಳಿಸಿತು.

ಒಬ್ಬ ಒಳಗೆ ಬಂದನು.

☞ 14

13 ☞

ಈ ಬಂಗಲೆಯಿಂದ ಹೋಗುವಾಗ ಡೋರ್‌ಲಾಕ್ ಮಾಡಿಕೊಂಡು ಬಂದಿದ್ದನು. ಈಗ ತಾನು ತಂದಿದ್ದನ್ನೆಲ್ಲಾ ಟೇಬಲ್ ಮೇಲೆ ನೀಟಾಗಿ ಜೋಡಿಸಿದನು.

ಫಾರಿನ್ ವಿಸ್ಕಿ ಬಾಟಲ್. ಸ್ಪೆಷಲ್ ಸೋಡಾ. ಐಸ್ ಕ್ಯೂಬ್...! ಸ್ಪೆಷಲ್ ನಾನ್‌ವೆಜ್ ಐಟಂಗಳು.

''ಬೇರೆ ಏನಾದರೂ ಬೇಕಾ?''

ಆ ದಡೂತಿ ಕೇಳಿದನು.

''ಇವತ್ತಿಗೆ ಸಾಕು. ನೀನು ಸಹ ಕುಡಿದು ಚೆನ್ನಾಗಿ ಊಟ ಮಾಡಿ ಮಲಗು. ಪಾಪ... ನೀನು ತುಂಬಾ ಕಷ್ಟ ಪಟ್ಟಿದ್ದೀಯ'' ಎಂದಾಗ ಆ ದಡೂತಿ ಅಲ್ಲಿಂದ ಹೊರಟನು.

ಕುಡಿತ ಪ್ರಾರಂಭವಾಗಿದೆ. ಅಮಲು ತಲೆಗೇರುತ್ತಿದೆ. ಏನೇನೋ ನೆನಪು ಮಾಡಿಕೊಂಡು ವಿಲಕ್ಷಣ ರೀತಿಯಲ್ಲಿ ನಗುತ್ತಿದ್ದಾನೆ. ತೂರಾಡುತ್ತಾ ಡ್ಯಾನ್ಸ್ ಮಾಡಿದನು.

●●●

ಸಿನಿಮಾ ನಟಿ ಪ್ರಲಂಗನ. ಗಗನಸಖಿ ಸ್ಮೃತಿ ಸಿಂಗ್. ಮಿಸ್ ಪಂಜಾಬ್ ಹರ್ಷಿತ ಸಿಂಗ್. ಇವರುಗಳು ನಗರದ ಬೇರೆ ಬೇರೆ ಬಡಾವಣೆಗಳಲ್ಲಿ ವಾಸವಾಗಿದ್ದಾರೆ.

ಒಂದು ದಿನ ಕಳೆಯಿತು.

ನಗರದ ಪ್ರಸಿದ್ಧ ಶ್ರೀಮಂತ ಉದ್ಯಮಿ ಈ ಪಾಟಿಯಾಲ ಸಿಂಗ್ ಸತ್ತು ಮುವತ್ತಾರು ಗಂಟೆಗಳು ಕಳೆದಿವೆ.

ರಾತ್ರಿ ಒಂಭತ್ತು ಗಂಟೆ. ಸಿನಿಮಾ ನಟಿ ಪ್ರಲಂಗನ ಶೂಟಿಂಗ್ ಮುಗಿಸಿಕೊಂಡು ಕಾರಲ್ಲಿ ಬರುತ್ತಿದ್ದಾಳೆ. ನಗರದ ಹೊರವಲಯದ ಯಾವುದೋ ಗ್ರಾಮದಲ್ಲಿ ಶೂಟಿಂಗ್ ಮಾಡಿದ್ದಾರೆ.

ಶೂಟಿಂಗ್ ತಡವಾಗಿ ಮುಗಿದಿದೆ. ಮರುದಿವಸ ಶೂಟಿಂಗ್ ಇರಲಿಲ್ಲವಾದ್ದರಿಂದ ತಡವಾಗಿದ್ದರೂ ಮನೆಗೆ ಹೋಗುತ್ತಿದ್ದಾಳೆ. ಸ್ವಲ್ಪ ದೂರ ಹೋದ ನಂತರ ಕಾರು ಕೆಟ್ಟು ನಿಂತುಕೊಂಡಿತು.

ಡ್ರೈವರ್ ಇಳಿದು ಇಂಜಿನ್ ಚೆಕ್ ಮಾಡಿದನು. ''ಮೇಡಂ ಮೇಜರ್ ಪ್ರಾಬ್ಲಂ ಆಗಿದೆ. ಇಲ್ಲೇ ಅರ್ಧ ಮೈಲಿ ದೂರದಲ್ಲಿ ನನಗೆ ತಿಳಿದಿರುವ ಮೆಕಾನಿಕ್ ಇದ್ದಾನೆ. ಅವನನ್ನು ಕರೆದುಕೊಂಡು ಬೇಗ ಬರ್ತೀನಿ.''

''ಹೇಗೆ ಹೋಗುತ್ತೀಯ?''

''ಇಲ್ಲೇನು ಬೇಕಾದಷ್ಟು ಆಟೋಗಳು, ಕ್ಯಾಬ್‌ಗಳು ತಿರುಗುತ್ತಿರೋದ್ರಿಂದ ಪ್ರಾಬ್ಲಂ ಆಗೋಲ್ಲ.''

ಅವನಿಗೆ ಹಣ ಕೊಡುತ್ತಾ ''ನಾನು ಒಬ್ಬಳೇ ಇರಬೇಕು. ಯಾವುದಾದರೂ ಟ್ಯಾಕ್ಸಿ ಮಾಡಿಕೊಂಡು ಹೋಗಿ ಬೇಗ ಕರ್ಕೊಂಡ್ ಬಾ'' ಎಂದಳು.

ಡ್ರೈವರ್ ಹೋಗಿ ಎರಡು ನಿಮಿಷಗಳಾಗಿದೆ. ಅವಳು ಕಾರಿನಿಂದ ಇಳಿದು ಹೊರಗೆ ಬಂದಳು.

ವಾಹನಗಳು ತಿರುಗುತ್ತಿರೋದ್ರಿಂದ ಮತ್ತು ದೂರದಲ್ಲಿ ರಸ್ತೆ ಬದಿಯ ಡಾಬಾಗಳು ಮತ್ತು ನೈಟ್ ಹೋಟೆಲ್‌ಗಳಿವೆ. ಹಾಗಾಗಿ ಅವಳಿಗೆ ಭಯ ಆಗಲಿಲ್ಲ.

ಅಂದು ಹುಣ್ಣಿಮೆ! ತಂಗಾಳಿ ಬೀಸುತ್ತಿದೆ. ಅವಳು ಕಾರಿನಿಂದ ಸ್ವಲ್ಪ ಮುಂದೆ ಬಂದು ತಂಗಾಳಿ ಮತ್ತು ಬೆಳ ದಿಂಗಳ ಸೊಬಗನ್ನು ಅನುಭವಿಸುತ್ತಾ ಮೈಮರೆತಿದ್ದಾಳೆ.

ಆಗ ಗಾಳಿಯಲ್ಲಿ ಏನೋ ತೂರಿಕೊಂಡು ಬಂದು ಅವಳ ಬೆನ್ನಿಗೆ ಬಡಿದು ನೆಲದ ಮೇಲೆ ಬಿದ್ದಿತು.

ಅವಳು ಗಾಬರಿಯಿಂದ ತಿರುಗಿದಳು. ನೆಲದ ಮೇಲೆ ಬಿದ್ದಿರೋದು ಏನು?

ಸುಂದರವಾದ ಗುಲಾಬಿ! ಅದರ ತುದಿಯಲ್ಲಿ ಪತ್ರವನ್ನು ಟ್ಯಾಗ್ ಮಾಡಲಾಗಿದೆ. ಕೆಲವೇ ಪದಗಳ ಬರಹ!

ಪ್ರಲಂಗನ... ನನ್ನ ಕಾಮದ ಅರಗಿಣಿ. ನೀನು ನನಗೆ ಬೇಕು. ನಿನಗಾಗಿ ಬರುತ್ತೇನೆ.

ಪಾಟಿಯಾಲ ಸಿಂಗ್...!

ಅವಳು ಬೆಚ್ಚಿಬಿದ್ದಳು. ಗುಲಾಬಿ ಹೂವನ್ನು ಹಿಡಿದಿರುವ ಅವಳ ಕೈ ನಡುಗುತ್ತಿದೆ.

ತಂಪಾದ ಗಾಳಿ ಬೀಸುತ್ತಿದೆ. ಆದರೂ ಬೆವರುತ್ತಿದ್ದಾಳೆ. ಎಲ್ಲಾ ಕಡೆ ನೋಡಿದಳು. ಅಲ್ಲಿ ಯಾರೊಬ್ಬರೂ ಇರಲಿಲ್ಲ.

ಹೊರಗೆ ನಿಂತಿರಲು ಭಯವಾಯಿತು. ಡ್ರೈವರ್ ಬರುವತನಕ ಕಾರಲ್ಲಿ ಕುಳಿತು ಎಲ್ಲಾ ವಿಂಡೋ ಗ್ಲಾಸ್‌ಗಳನ್ನು ಕ್ಲೋಸ್ ಮಾಡಿಕೊಳ್ಳೋಣ ಎಂದುಕೊಂಡು ಕಾರಿನ ಹತ್ತಿರ ಬಂದು ಡೋರ್ ತೆಗೆದಳು.

ಆ ಕ್ಷಣ ಬೆಚ್ಚಿಬಿದ್ದಳು.

ಕಾರಲ್ಲಿ ಯಾರೋ ಕುಳಿತಿದ್ದಾರೆ.

ಅವಳು ಹೆದರುತ್ತಲೇ ಹಿಂದೆ ಸರಿಯುತ್ತಿರುವಾಗ ಆ ವ್ಯಕ್ತಿ ಮುಂದೆ ಬಾಗಿ ಸರ್ರನೆ ಅವಳ ಕೈ ಹಿಡಿದು ಎಳೆದು ಕೊಂಡನು. ಬ್ಯಾಲೆನ್ಸ್ ತಪ್ಪಿತು. ಅವನ ಮೇಲೆ ಬಿದ್ದಳು. ಅವಳನ್ನು ತಬ್ಬಿಕೊಂಡಿದ್ದಾನೆ. ಮೈ ಸವರುತ್ತಿದ್ದಾನೆ.

ತುಂಬಾ ಕಷ್ಟದಿಂದ ಅವನ ಆಲಿಂಗನದ ಬಂಧನದಿಂದ ಬಿಡಿಸಿಕೊಂಡಳು.

ಕಾರಿನ ಒಳಗಿನ ಲೈಟ್ ಆನ್ ಆಯಿತು.

ಆ ಬೆಳಕಲ್ಲಿ, ತುಂಬಾ ಹತ್ತಿರದಿಂದ ನೋಡಿ ಕಿರುಚಲು ಬಾಯಿ ತೆರೆದಳು. ಆದರೆ ಆಗಲಿಲ್ಲ.

ಧ್ವನಿ ಹೊರಗೆ ಬರಲಿಲ್ಲ!

ಗಡಗಡನೆ ನಡುಗುತ್ತಿದ್ದಾಳೆ.

ಮುಖ ಪೂರ್ತಿ ಹಸಿರು ಬಣ್ಣದಿಂದ ವಿಲಕ್ಷಣವಾಗಿ ಮಿನುಗುತ್ತಿದೆ.

ಕಣ್ಣುಗಳ ಬಣ್ಣ ವಿಚಿತ್ರ ಹಳದಿ ಬಣ್ಣದಿಂದ ಮಿನುಗುತ್ತಿದೆ.

ಹಲ್ಲುಗಳು ಕಪ್ಪು ಬಣ್ಣದಿಂದ ಮಿನುಗುತ್ತಿದೆ.

ಅವನು ನಗುತ್ತಿದ್ದಾನೆ.

ವಿಲಕ್ಷಣ ರೀತಿಯ ನಗು.

''ಏ ಪ್ರಲಂಗನ... ಒಂದು ವರ್ಷದಿಂದ ಹನ್ನೆರಡು ಸಲ ನಿನ್ನ ಸೌಂದರ್ಯ ಅನುಭವಿಸಿದ್ದೇನೆ. ಆದರೆ ಆಸೆ ತೀರಿಲ್ಲ. ನಿನ್ನ ಸೌಂದರ್ಯ ಅನುಭವಿಸಲು ಬಂದಿದ್ದೇನೆ. ಇನ್ನು ಮುಂದೆ ಆಗಾಗ ಬರುತ್ತಿರುತ್ತೇನೆ.''

ಅವಳನ್ನು ಬಿಗಿಯಾಗಿ ತಬ್ಬಿಕೊಂಡನು.

ಮುತ್ತಿಡಲು ಬಾಗಿದನು.

ಭಯ... ವಿಪರೀತ ಭಯ.

ಅವಳು ಪ್ರಜ್ಞಾಶೂನ್ಯಳಾದಳು.

ಅವಳಿಗೆ ಎಚ್ಚರವಾದಾಗ ತನ್ನ ಮನೆಯಲ್ಲಿ ಮಲಗಿದ್ದಳು. ಅವಳ ಸುತ್ತಾ ತಂದೆ-ತಾಯಿ, ಸಂಬಂಧಿಕರು ಇದ್ದಾರೆ.

ಕಾರನ್ನು ರಿಪೇರಿ ಮಾಡಿಸಲು ಮೆಕಾನಿಕ್ ಅನ್ನು ಕರೆದುಕೊಂಡು ಬಂದ ಡ್ರೈವರ್ ಗಾಬರಿಯಾಗಿದ್ದನು.

ಅವಳು ಪ್ರಜ್ಞಾಶೂನ್ಯಳಾಗಿದ್ದಳು.

ಸೀರೆ ಮತ್ತು ಒಳಉಡುಪುಗಳು ಸಡಿಲ ಗೊಂಡಿದ್ದವು.

ಬೇಗ ರಿಪೇರಿ ಕೆಲಸ ಮುಗಿಸಿ ಮನೆಗೆ ಕರೆತಂದಿದ್ದನು. ವಿಷಯ ತಿಳಿದ ಕೂಡಲೇ ಕೂಡಲೇ ಮನೆಯವರು ಅವಳನ್ನು ಆ ಸ್ಥಿತಿಯಲ್ಲಿ ಎತ್ತಿಕೊಂಡು ಹೋಗಿ ಮಲಗಿಸಿ ದ್ದರು.

ಅವಳಿಗೆ ಪ್ರಜ್ಞೆ ಬಂದಿದೆ.

''ದೆವ್ವ... ದೆವ್ವ... ಭೂತ...'' ಎಂದು ಕಂಪಿಸುವ ಧ್ವನಿಯಲ್ಲಿ ಬಡ ಬಡಿಸುತ್ತಲೇ ಪ್ರಜ್ಞಾಶೂನ್ಯಳಾದಳು.

●●●

ಸಾರಿಕಾ ಸಿಂಗ್ ರಾತ್ರಿಯ ಊಟ ಮುಗಿಸಿ ಬೆಡ್ ರೂಮಿಗೆ ಬಂದಳು. ಅವಳು ಮಕ್ಕಳನ್ನು ಇತ್ತೀಚೆಗೆ ಮೂರು ವರ್ಷಗಳಿಂದ ಬೇರೆ ರೂಮಲ್ಲಿ ಮಲಗಿಸುವ ವ್ಯವಸ್ಥೆ ಮಾಡಿದ್ದಳು.

ಅವಳು ರೂಮಿಗೆ ಬಂದು ಡ್ರೆಸ್ ಬದಲಿಸಿದಳು.

ತೆಳುವಾದ ನೈಟಿ ಧರಿಸಿದ್ದಾಳೆ. ಎರಡು ಮಕ್ಕಳ ತಾಯಿ ಆಗಿರುವ ಅವಳು ಸೂಪರ್ ಆಗಿದ್ದಾಳೆ.

ಪ್ರಾಯದ ಯುವತಿಯಂತೆ ಮಾಟವಾದ, ಬಲು ಸುಂದರವಾದ ದೇಹದ ಸೊಬಗು, ಆ ಪಾರದರ್ಶಕ ನೈಟಿಯಲ್ಲಿ ಮಿನುಗುತ್ತಿದೆ. ಅವಳು ಸುಖದ ಕಲ್ಪನೆಯಿಂದ ಮೈಮರೆತಿದ್ದಾಳೆ.

ಅವಳಿಗೆ ಅವನು ನೆನಪಾದನು.

ಫೋನ್ ಮಾಡಿ ಸಿಗ್ನಲ್ ನೀಡಿದಳು.

ಇನ್ನೇನು ಕೆಲವೇ ನಿಮಿಷಗಳಲ್ಲಿ ಸಿಗಲಿರುವ ಕಾಮಸುಖದ ಕಲ್ಪನೆಯಿಂದ ಅವಳ ಮೈ ಬಿಸಿ ಯಾಗುತ್ತಿದೆ.

ನಿಮಿಷಗಳು ಉರುಳುತ್ತಿವೆ.

ಬೆಡ್‌ರೂಮಿನ ಸೀಕ್ರೇಟ್ ಡೋರ್ ಓಪನ್ ಆಯಿತು.

ಅವಳು ಕಣ್ಣುಗಳನ್ನು ಮುಚ್ಚಿಕೊಂಡು ಮಲಗಿದ್ದಾಳೆ.

ಅವನು ಹತ್ತಿರ ಬರುತ್ತಿದ್ದಾನೆ.

ಅವಳು ಮುಲುಗುಡುತ್ತಿದ್ದಾಳೆ.

ಅವಳ ಮೈಮೇಲೆ, ಎದೆ ಸೌಂದರ್ಯದ ಮೇಲೆ ಕೈ ಬಿದ್ದಿತು.

ಅವಳು ಕಣ್ಣುಗಳನ್ನು ತೆರೆಯಲಿಲ್ಲ. ತನ್ನ ಎದೆಭಾಗ ಸ್ಪರ್ಶಿಸಿರುವ ಅವರ ಕೈ ಮೇಲೆ ಕೈ ಹಾಕುತ್ತಾ ''ಏ... ಜೋಗಿ... ಅಬ್ಬ... ನಾವಿಬ್ಬರೂ ಸೇರಿ ಹತ್ತು ದಿನಗಳಾಗಿದೆ. ಏ... ಇವತ್ತು ಯಾರೂ ಇಲ್ಲ, ಗಂಡ ಬರುತ್ತಾನೆ ಅನ್ನೋ ಭಯ ಇಲ್ಲ, ಯಾಕೆಂದರೆ ಅವನು ಈ ಲೋಕದಲ್ಲೇ ಇಲ್ಲ, ಕಮಾನ್... ಬೆಳಗಿನ ಜಾವದ ತನಕ ನಾವಿಬ್ಬರು ಸಖತ್ ಆಗಿ ಮಜಾ ಮಾಡೋಣ. ನನ್ನ ಗಂಡನಿಂದ ಯಾವತ್ತೂ ಸುಖದ ಪೂರ್ಣ ತೃಪ್ತಿ ಸಿಕ್ಕಿಲ್ಲ. ನಿನ್ನಂತ ಗಂಡು ನನಗೆ ಸಿಗದಿದ್ದರೆ ಹುಚ್ಚು ಹಿಡಿದಿರುತ್ತಿತ್ತು.''

ಪ್ರತಿಕ್ರಿಯೆ ಬರಲಿಲ್ಲ!

ಅವಳ ಎದೆ ಸೌಂದರ್ಯದ ಮೇಲಿದ್ದ ಕೈ ದೂರ ಸರಿಯುತ್ತಿದೆ.

''ಏ... ಜೋಗಿಂದರ್... ಯಾಕೋ ಸೈಲೆಂಟ್ ಆಗ್‌ಬಿಟ್ಟೆ. ನನ್ನನ್ನು ಬೆಡ್‌ರೂಮಲ್ಲಿ ಕಂಡ ಕೂಡಲೇ ಹಸಿದ ಹೆಬ್ಬುಲಿ ರೀತಿ ನನ್ನ ಮೈಮೇಲೆ ಬಿದ್ದು ಉರುಳಾಡುತ್ತಿದ್ದೆ. ಇವತ್ತು ಏನಾಗಿದೆ ನಿಂಗೆ'' ಎಂದು ಕಣ್ಣುಗಳನ್ನು ತೆರೆದಳು.

ಆಗ ಕಂಡಿದ್ದೇನು?

ಮಂಚದ ತುದಿಯಲ್ಲಿ ಯಾರೋ ಇವಳಿಗೆ ಬೆನ್ನು ತಿರುಗಿಸಿ ಕುಳಿತಿದ್ದಾರೆ.

ಯಾರು... ಯಾರದು?

ಆಕೃತಿ, ಡ್ರೆಸ್ ನೋಡಿದ ಕೂಡಲೇ ಇಲ್ಲಿಗೆ ಬಂದಿರೋದು ಜೋಗಿಂಧರ್ ಅಲ್ಲ ಎಂಬುದು ಅವಳಿಗೆ ಖಾತ್ರಿ ಆಯಿತು.

ಆದರೆ ಬೇರೆ ಯಾರು?

ನನ್ನ ಬೆಡ್‌ರೂಮಿನ ಡೋರ್‌ಲಾಕ್ ಕೀ ಜೋಗಿಂದರ್ ಹತ್ತಿರ ಮಾತ್ರ ಇದೆ.

ಅವಳು ಎದ್ದು ಕುಳಿತಳು.

ಗಾಬರಿ, ಭಯ, ಆತಂಕದಿಂದಲೇ ''ಏ... ಯಾರು... ನೀನು...'' ಎನ್ನುತ್ತಿರುವಾಗಲೇ ಹಸಿರು ಬಣ್ಣದ ಹೊಗೆ ತೇಲಿ ಬರಲಾರಂಭಿಸಿತು.

ಸಿಗರೇಟಿನ ಹೊಗೆ ಅಲ್ಲ.

ಹಾಗಾದರೆ ಬೇರೆ ಏನು?

ಅವಳು ತಲೆಕೆಡಿಸಿಕೊಂಡಿದ್ದಾಳೆ. ಭಯ ಜಾಸ್ತಿ ಆಗುತ್ತಿರುವಾಗಲೇ ಅವನು ತಿರುಗಿದನು.

ಅವಳು ಬೆಚ್ಚಿಬಿದ್ದಳು.

ಇಡೀ ಶರೀರ ನಡುಗಿತು.

ಹಸಿರು ಬಣ್ಣದ ಮುಖ, ಗಾಢ ಹಳದಿ ಬಣ್ಣದ ಕಣ್ಣುಗಳು... ವಿಕೃತ ವೇಷ...! ಆದರೂ ಗುರುತಿಸಿದಳು.

ಗಂಡ... ಗಂಡ ಪಾಟಿಯಾಲ!

'ದೆವ್ವ... ದೆವ್ವ...' ಎಂಬ ಆಲೋಚನೆ ಬಂದ ಕೂಡಲೇ ಆಘಾತವಾಯಿತು.

ದೆವ್ವ ಇವಳತ್ತ ಬಾಗಿತು!

ಅವಳು ವಿಪರೀತ ಭಯದ ಕಾರಣದಿಂದ ಪ್ರಜ್ಞಾಶೂನ್ಯಳಾದಳು.

ಆಗ ತಾನೇ ರೂಮಿನ ಹತ್ತಿರ ಬಂದಿದ್ದ ಜೋಗಿಂಧರ್ ಸಿಂಗ್ ಈ ದೃಶ್ಯವನ್ನು ಕಂಡು ಭೀತನಾಗಿ ಓಡಿದನು.

ರಾತ್ರೋ ರಾತ್ರಿ ಊರನ್ನು ಬಿಟ್ಟು ಹೊರಟು ಹೋದನು.

●●●

ರಾತ್ರಿ ಹನ್ನೆರಡು ಗಂಟೆ.

ಕಲ್ಮಾಡಿ ಈಗ ಅದನ್ನೆಲ್ಲಾ ತಂದು ಟೇಬಲ್ ಮೇಲೆ ಜೋಡಿಸಿದನು. ಬಾರ್ ಅಂಡ್ ರೆಸ್ಟೋರೆಂಟ್‌ನಿಂದ ಎಲ್ಲಾ ತಂದಿದ್ದನು.

ಅವನು ವ್ಯಗ್ರನಾಗಿದ್ದಾನೆ.

ವಿಪರೀತ ಕೋಪದ ವರ್ತನೆ ಕಂಡು ಬರುತ್ತಿದೆ.

ಕಲ್ಮಾಡಿ ಹೆದರಿದನು.

ಆ ರೂಮಿನಿಂದ ಹೊರಗೆ ಬಂದನು.

ವಿಸ್ಕಿ ಸೀಸೆ ಎತ್ತಿ, ನೀರು-ಸೋಡಾ ಏನನ್ನೂ ಬೆರೆಸದೆ ಕುಡಿದು ಮಟನ್ ತಂದೂರಿಯನ್ನು ತಿಂದು ತೇಗಿದನು.

ಕ್ಷಣಗಳಲ್ಲಿ ಅಮಲೇರಿತು.

ಅವನು ನಿದ್ರಾಶೂನ್ಯನಾದನು.

●●●

''ಏ ಕಲ್ಮಾಡಿ... ನಿನಗೆ ಐದು ಲಕ್ಷ ಕೊಡ್ತೀನಿ. ಇವತ್ತು ರಾತ್ರಿ ಸಾರಿಕ ಸಿಂಗ್‌ನ ಕೊಲೆ ಮಾಡಬೇಕು. ಪ್ರತಿ ಶುಕ್ರವಾರ ಅವಳು ನಮ್ಮ ಫಾರಂ ಹೌಸ್‌ನಲ್ಲಿ ಉಳಿಯುತ್ತಾಳೆ.''

ಕಲ್ಮಾಡಿ ಭಯಗೊಂಡನು.

ಕೊಲೆಗೆ ಕೂಲಿಯ ಹಣದ ಮೊತ್ತ ಹದಿನೈದು ಲಕ್ಷ ಆಯಿತು!

ಕಲ್ಮಾಡಿ ಒಪ್ಪಿಕೊಂಡನು.

ಮರ್ಡರ್ ಪ್ಲಾನ್ ರೆಡಿಯಾಯಿತು.

●●●

ಶುಕ್ರವಾರ ರಾತ್ರಿ ಹನ್ನೊಂದು ಗಂಟೆ.

ಕಲ್ಮಾಡಿಗೆ ಫೋನ್ ಮಾಡುತ್ತಿದ್ದಾನೆ.

'ಸಾರಿಕ ಸಿಂಗ್‌ನ ಕೊಲೆ ಮಾಡಿದ್ಯ'' ಎಂದು ಕೇಳಲು ಆತುರಪಡುತ್ತಿದ್ದಾನೆ.

ಅವನಿಂದ ಪ್ರತಿಕ್ರಿಯೆ ಇಲ್ಲ.

●●●

ಅಪಘಾತ ಮಾಡಿ ತಪ್ಪಿಸಿಕೊಂಡಿದ್ದ ಡ್ರೈವರ್ ಕಲ್ಮಾಡಿಗಾಗಿ ಪೊಲೀಸರು ಹುಡುಕುತ್ತಿದ್ದರು. ಕೊಲೆ ಮಾಡಲು ಫಾರಂ ಹೌಸ್ ಕಡೆ ಹೋಗುತ್ತಿದ್ದ ಅವನನ್ನು ಪೊಲೀಸರು ಆಕಸ್ಮಿಕವಾಗಿ ಕಂಡು ಅರೆಸ್ಟ್ ಮಾಡಿದರು.

ಲಾಕಪ್‌ನಲ್ಲಿ ಲಾಠಿ ಸೇವೆ ಮಾಡಿದ ಮೇಲೆ ಸತ್ಯ ಹೊರ ಬಂದಿತು.

ನಿಗೂಢತೆ ಬಹಿರಂಗವಾಗಿದೆ.

''ಪಾಟಿಯಾಲ ಸಿಂಗ್ ಸತ್ತಿಲ್ಲ. ಸ್ಮಶಾನದಲ್ಲಿದ್ದ ಯಾವುದೋ ಹಣ ತೆಗೆದು, ಮುಖ ಮತ್ತು ದೇಹದ ಕೆಲವು ಭಾಗಗಳನ್ನು ಚಾಕುವಿನಿಂದ ತಿವಿದರು. ತಮ್ಮ ಡ್ರೆಸ್, ಪರ್ಸ್, ಆಭರಣಗಳು ಎಲ್ಲವನ್ನೂ ತೊಡಿಸಿದರು.

ಈಗಲು ಅಲ್ಲೇ ಇದ್ದಾರೆ!

ಪೊಲೀಸರು ಕೇವಲ ಒಂದು ಗಂಟೆಯೊಳಗೆ ಶ್ರೀಮಂತ ಪಾಟಿಯಾಲ ಸಿಂಗ್‌ನನ್ನು ಅರೆಸ್ಟ್ ಮಾಡಿದರು.

ತನಿಖೆ ನಡೆಯುತ್ತಿದೆ.

ವಿಚಿತ್ರ-ವಿಲಕ್ಷಣ ಆಸೆ. ಸತ್ತ ಮೇಲೆ ತನ್ನ ಸಾವಿನ ವೈಭವ ಹೇಗಿರುತ್ತದೆ ಎಂಬುದನ್ನು ತಿಳಿಯುವ ಆಸೆ ಹಾಗಾಗಿ ಸತ್ತಂತೆ ನಾಟಕ ಆಡಿದರು. ಡಾಕ್ಟರ್‌ಗೆ ಒಂದು ಲಕ್ಷ ಲಂಚ ಕೊಟ್ಟು ನಾರ್ಮಲ್ ಪೋಸ್ಟ್‌ಮಾರ್ಟಮ್ ರಿಪೋರ್ಟ್ ಕೊಡಲು ಹೇಳಿದ್ದರು. ಇವರಿಗೆ ಕೆಲವು ಸಿನಿಮಾ ನಟಿಯರು, ಗಗನಸಖಿಯರ ಜೊತೆ ಸಂಬಂಧ ಇತ್ತು. ತಾವು ದೆವ್ವದ ನಾಟಕ ಆಡಿ ಆ ಚೆಲುವೆಯರು ಮತ್ತು ಹೆಂಡತಿಯನ್ನು ಹೆದರಿಸಲು ಮತ್ತು ಥ್ರಿಲ್ ಎಂಜಾಯ್ ಮಾಡಲು ಪ್ರಯತ್ನ ಮಾಡಿದ್ದರು. ಹೆಂಡತಿಯ ಅನೈತಿಕ ಸಂಬಂಧದ ರಹಸ್ಯ ಬಹಿರಂಗವಾಗಿದ್ದರಿಂದ ಕೊಲೆ ಮಾಡಲು ಕಲ್ಮಾಡಿನ ನೇಮಿಸಿದ್ದರು.

ಶ್ರೀಮಂತ ಪಾಟಿಯಾಲ ಮತ್ತು ಕಲ್ಮಾಡಿಗೆ ಜೈಲು ಶಿಕ್ಷೆ ಆಗಿದೆ.

☯

POLICE NEWS REGISTERED KA/BGW-1618/2024-26 REGD. WITH RNI NO. 36669/82 PAGES : 16 POSTED AT BANGALORE PSO BG 560026 Every Tuesday Publishing Date : 9.2.2025

# ‘Yours Sincerely ರಾಮ್’ ಚಿತ್ರದಲ್ಲಿ ಗಣೇಶ್ ಜೊತೆಗೆ ಮೀರಾ ಜಾಸ್ಮಿನ್

ತೀವ್ರ ನಿರೀಕ್ಷೆ ಹುಟ್ಟುಹಾಕಿರುವ "Your's Sincerely ರಾಮ್' ಚಿತ್ರದಲ್ಲಿ ನಟ ರಮೇಶ್ ಅರವಿಂದ್ ಮತ್ತು ಗಣೇಶ್ ಅವರು ನಟಿಸಿದ್ದು, ಈ ಚಿತ್ರಕ್ಕೆ ಇದೇ ಮೊದಲ ಬಾರಿಗೆ ವಿಖ್ಯಾತ್ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ. ಚಿತ್ರತಂಡ ವಿಶೇಷವಾಗಿ



ವಿನ್ಯಾಸಗೊಳಿಸಿದ ಮತ್ತೊಂದು ಪೋಸ್ಟರ್ ಬಿಡುಗಡೆ ಮಾಡಿದ್ದು, ಇಬ್ಬರು ನಟರು ಬೈಸಿಕಲ್ ಸವಾರಿ ಮಾಡುತ್ತಿದ್ದಾರೆ. ಈ ಹಿಂದೆ ಸೈನಿಕರ ನಡುವೆ ವಿಧೂಷಕರಾಗಿ ನಿಂತಿರುವ ಪೋಸ್ಟರ್ ರಿಲೀಸ್ ಮಾಡಲಾಗಿತ್ತು.

ಸದ್ಯ ನಿರ್ಮಾಣ ಹಂತದಲ್ಲಿರುವ ಚಿತ್ರಕ್ಕೆ, ಇತ್ತೀಚೆಗೆ ಜನಪ್ರಿಯ ನೃತ್ಯ ಸಂಯೋಜಕ ಜಾನಿ ಮಾಸ್ಟರ್ ಬೆಂಗಳೂರಿನಲ್ಲಿ ಹಾಡೊಂದರ ಚಿತ್ರೀಕರಣ ನಡೆಸಿದ್ದರು. ರಾಯಲ ಸ್ಟುಡಿಯೋಸ್ ಅಡಿಯಲ್ಲಿ ಸತ್ಯ ರಾಯಲ ನಿರ್ಮಿಸಿರುವ ಈ ಚಿತ್ರದ ಮೂಲಕ ನಟಿ ಮೀರಾ ಜಾಸ್ಮಿನ್ ಕನ್ನಡ ಚಿತ್ರರಂಗಕ್ಕೆ ಮರಳುವ ಸಾಧ್ಯತೆ ಇದೆ ಎನ್ನಲಾಗಿದೆ.

ಸದ್ಯ ವಿವಿಧ ಭಾಷೆಗಳಲ್ಲಿ ಹಲವಾರು ಸಿನಿಮಾಗಳಲ್ಲಿ ಬ್ಯುಸಿಯಾಗಿರುವ ನಟಿ ಮೀರಾ ಜಾಸ್ಮಿನ್ ಅವರಿಗೆ ಕನ್ನಡ ಚಿತ್ರರಂಗಕ್ಕೆ ಹೊಸದೇನಲ್ಲ, ಅವರು ಪುನೀತ್ ರಾಜ್‌ಕುಮಾರ್ ನಟನೆಯ ಮೌರ್ಯ (2004) ಚಿತ್ರದಲ್ಲಿ ನಟಿಸಿದ್ದರು. ಅದಾದ ಬಳಿಕ ಅರಸು (2007) ಚಿತ್ರದಲ್ಲಿ ಪುನೀತ್ ಮತ್ತು ರಮ್ಯಾ ಜೊತೆಗೆ ನಟಿಸಿದ್ದರು. ನಟ ಶಿವರಾಜಕುಮಾರ್ ಅವರೊಂದಿಗೆ ದೇವರು ಕೊಟ್ಟ ತಂಗಿ (2009) ಮತ್ತು ಇಜ್ಜೋಡು (2010) ಚಿತ್ರಗಳಲ್ಲಿ ಕಾಣಿಸಿಕೊಂಡಿದ್ದರು.

ಮೂಲಗಳ ಪ್ರಕಾರ, ಚಿತ್ರತಂಡವು ಮೀರಾ ಜಾಸ್ಮಿನ್ ಅವರ ಪಾತ್ರದ ಬಗ್ಗೆ ಆರಂಭಿಕ ಚರ್ಚೆಗಳನ್ನು ನಡೆಸಿದೆ ಮತ್ತು ಅವರನ್ನು ಕನ್ನಡ ಚಿತ್ರರಂಗಕ್ಕೆ ಮರಳಿ ಕರೆತರುವ ಕೆಲಸ ಮಾಡುತ್ತಿದೆ. ಎಲ್ಲವೂ ಅಂದುಕೊಂಡಂತೆ ಆದ ಬಳಿಕ ಈ ಬಗ್ಗೆ ಅಧಿಕೃತ ಘೋಷಣೆ ಮಾಡಲಿದೆ ಎಂದು ಹೇಳಲಾಗಿದೆ.



# ಸಮಸ್ಯೆಗಳ ಸುಳಿಯಲ್ಲಿ ಲಾಕ್ ಆದ ರಾಘವ...

ಲಾಕ್ ಯಾವುದೇ ಆದರೂ ಕ್ಷಣಮಾತ್ರದಲ್ಲಿ ಅನ್ಲಾಕ್ ಮಾಡುವಂಥ ರಾಘವನ ಜೀವನದ ಕಥೆಯೇ ಈ ವಾರ ತೆರೆಕಂಡಿರುವ ಅನ್‌ಲಾಕ್ ರಾಘವ ಚಿತ್ರದ ಕಾನ್ಸೆಪ್ಟ್. ರಾಘವ ತನ್ನ ಬುದ್ದಿವಂತಿಕೆಯಿಂದ ಎಂಥ ಸಮಸ್ಯೆಗಳನ್ನು ಕೂಡ ಅನ್ಲಾಕ್ ಮಾಡುತ್ತಿರುತ್ತಾನೆ. ಆದರೆ ಒಮ್ಮೆ ಸ್ವತಃ ಅವನೇ ಒಂದು ಸಮಸ್ಯೆಯಲ್ಲಿ ಲಾಕ್ ಆಗಿಬಿಡುತ್ತಾನೆ. ನಂತರ ಅದರಿಂದ ಹೇಗೆ ಹೊರ ಬರುತ್ತಾನೆ ಎಂಬುದನ್ನು ಈ ಚಿತ್ರ ಹೇಳುತ್ತದೆ, ಈ ಚಿತ್ರದ ಕಥೆಯ ಬಗ್ಗೆ ಹೇಳುವುದಾದರೆ ಯುವಕನೊಬ್ಬ ಜಮೀನಿನಲ್ಲಿ ನಿಧಿ ಇದೆಯೆಂದು ಭೂಮಿಯನ್ನು ಅಗೆಯುತ್ತಿರುವಾಗ ಅದನ್ನು ಕಂಡು ಹತ್ತಿರ ಹೋದಾಗ ಆತ ಪ್ರೇತದ ಮುಖವಾಡ ಹಾಕಿರುತ್ತಾನೆ.

ಅನ್ಲಾಕ್ ರಾಘವ ಶಾಲೆಯ ಕೋಣೆಯೊಂದರಲ್ಲಿ ಬಂಧಿಯಾಗಿದ್ದ ಜಾನಕಿಯನ್ನು ರಕ್ಷಿಸಲು ಆ ಬೀಗವನ್ನು ತೆಗೆಯುವ ಸೀನ್‌ನೊಂದಿಗೆ ಚಿತ್ರದ ಕಥೆ ಓಪನ್ ಆಗುತ್ತದೆ.

ಅಲ್ಲಿಂದ ಅನ್ಲಾಕ್ ರಾಘವ ಹಾಗೂ ಜಾನಕಿಯ ನಡುವೆ ಪ್ರೀತಿ ಮೂಡುತ್ತದೆ. ಜಾನಕಿಯ ತಂದೆಗೆ ವರ್ಗಾವಣೆಯಾದ ಕಾರಣ ಜಾನಕಿ ಕುಟುಂಬ ಆ ಊರನ್ನೇ ಬಿಟ್ಟು ಹೋಗಬೇಕಾಗುತ್ತದೆ, ಒಂದೆಡೆ ಪುರಾತತ್ವ ಇಲಾಖೆಯಲ್ಲಿ ಕಾರ್ಯ ನಿರ್ವಾಹಿಸುತ್ತಿರುವ ಜಾನಕಿ ಹಾಗೂ ಅವಳ ತಂದೆ ಜಗಪತಿಗೆ ಹಳ್ಳಿಯೊಂದರ ಜಮೀನಿನಲ್ಲಿ ಸುಮಾರು ವರ್ಷಗಳ ಹಿಂದಿನ ನಿಧಿ ಪೆಟ್ಟಿಗೆಯನ್ನು ಹುಡುಕುವ ಕೆಲಸ ಬರುತ್ತದೆ.

ಅದರಮೇಲೆ ಜಗಪತಿ ಹಾಗೂ ಪೀಟರ್ ಕೂಡ ಹೊಂಚು ಹಾಕಿರುತ್ತಾರೆ. ಇನ್ನೊಂದೆಡೆ ರಾಘವ ಜಾನಕಿ ಅನ್ಲಾಕ್ ವಿಶ್ವವಿದ್ಯಾಲಯ ಎನ್ನುವ ತರಗತಿ ತೆರೆದು, ಹಲವಾರು ಸಮಸ್ಯೆಗಳನ್ನು ಅನ್ಲಾಕ್ ಮಾಡುತ್ತಿರುತ್ತಾನೆ. ನಿಧಿ ಹುಡುಕಲು ಬಂದ ಇಲಾಖೆಯ ಅಧಿಕಾರಿಗಳ ತಂಡ ಜಮೀನಿನಲ್ಲಿ ನಿಧಿಯ ಪೆಟ್ಟಿಗೆಯನ್ನು ಹುಡುಕಿ ಪತ್ತೆ ಮಾಡುತ್ತಾರೆ.

ಅದರ ಲಾಕ್ ತೆಗೆಯಲು ಜಾನಕಿ, ರಾಘವನನ್ನು ಕರೆಯುತ್ತಾಳೆ. ಈ ನಡುವೆ ನಿಧಿಯ ಬಗ್ಗೆ ಜಗಪತಿ ಮಾತನಾಡುತ್ತಿರುವಾಗ, ಪೀಟರ್ ಕಡೆಯವರು ನಿಧಿಯನ್ನು ತೆಗೆದುಕೊಂಡು ಹೋಗಲು ಯತ್ನಿಸುತ್ತಾರೆ. ಆಗ ರಾಘವನಿಗೆ ಅದು ಜಾನಕಿ ಅಂತಾ ಗೊತ್ತಾಗುತ್ತದೆ. ಆಗ ರಾಘವ ಅದನ್ನು ಹಿಡಿಯಲು ಹೋಗುತ್ತಾನೆ.

ಅತ್ತ ಆ ಲಾಕ್ ತೆಗೆಯಲು ಸಾಧುಕೋಕಿಲ ಜತೆ ಪೀಟರ್ ಡೀಲ್ ಮಾಡುತ್ತಾನೆ. ಆಗ ನಿಧಿ ತನ್ನಿಂದ ತಪ್ಪಿ ರಾಘವನಿಗೆ ಸಿಗುತ್ತದೆ ಎನ್ನುವ ಮಾಹಿತಿ ಸಿಗುತ್ತದೆ. ಅದಕ್ಕೆ ಜಾನಕಿಯನ್ನು ಅಪಹರಿಸಲು ಪೀಟರ್ ಹೇಳುತ್ತಾನೆ. ಅದೇವೇಳೆ ತನ್ನ ಪ್ರೇಯಸಿ ಸಿಕ್ಕ ಖುಷಿಯಲ್ಲಿದ್ದ ರಾಘವನಿಗೆ, ಜಾನಕಿಯ ಅಪಹರಣ ಹಾಗೂ ಮಾವ ಸಾಧು ಕೋಕಿಲ ತಲೆಗೆ ಬಿದ್ದ ಹೊಡೆತದಿಂದ ಕಂಗಾಲಾಗುತ್ತಾನೆ. ಹೀಗೆ ಸ್ವತಃ ರಾಘವನೇ ಒಂದು ದೊಡ್ಡ ಸಮಸ್ಯೆಯಲ್ಲಿ ಲಾಕ್ ಆಗುತ್ತಾನೆ. ನಂತರ ಆತ ಅದರಿಂದ ಹೇಗೆ ಹೊರ ಬರುತ್ತಾನೆ ಎಂದು ಚಿತ್ರದ ಕ್ಲೈಮ್ಯಾಕ್ಸ್‌ನಲ್ಲಿ ಹೇಳಲಾಗಿದೆ,

ನಿರ್ದೇಶಕ ದೀಪಕ್ ಮಧುವನಹಳ್ಳಿ ಅವರು ಮನರಂಜನೆಗೆ ಯಾವುದೇ ಕೊರತೆಯಾಗದಂತೆ ಇಡೀ ಚಿತ್ರವನ್ನು ನಿರೂಪಿಸುವಲ್ಲಿ ಯಶಸ್ವಿಯಾಗಿದ್ದಾರೆ. ಇನ್ನು ಯುವ ನಟ ಮಿಲಿಂದ್ ರಾಘವ ಪಾತ್ರವನ್ನು ಸಮರ್ಥವಾಗಿ ನಿಭಾಯಿಸಿದ್ದಾರೆ, ನಾಯಕಿ ರೆಚೆಲ್ ಡೇವಿಡ್ ಕೂಡ ತೆರೆಯಮೇಲೆ ಮುದ್ದಾಗಿ ಕಾಣಿಸಿಕೊಂಡಿದ್ದಾರೆ. ಸಾಧು ಕೋಕಿಲ, ಸುಂದರರಾಜ್, ಶೋಭರಾಜ್, ಅವಿನಾಶ್ ಅವರ ಅಭಿನಯ ಚಿತ್ರದ ಓಟಕ್ಕೆ ಸಾಥ್ ನೀಡಿದೆ. ವಿಶೇಷವಾಗಿ ಅನೂಪ್ ಸೀಳನ್ ಅವರ ಸಂಗೀತ ಸಂಯೋಜನೆಯಲ್ಲಿ ಮೂಡಿಬಂದಿರುವ ಮೂರು ಹಾಡುಗಳು ಕೇಳಲು ಇಂಪಾಗಿವೆ, ಮಂಜುನಾಥ್ ದಾಸೇಗೌಡ ಮತ್ತು ಗಿರೀಶ್‌ಕುಮಾರ್ ಅವರ ನಿರ್ಮಾಣದಲ್ಲಿ ಅನ್‌ಲಾಕ್ ರಾಘವ ಮೂಡಿಬಂದಿದ್ದಾನೆ. ಲವಿತ್ ಅವರ ಕ್ಯಾಮೆರಾ ವರ್ಕ್ ಚಿತ್ರಕ್ಕೆ ಹೊಸ ರೂಪ ಕೊಟ್ಟಿದೆ. ಒಟ್ಟಾರೆ ಇಡೀ ಕುಟುಂಬ ಕೂತು ನೋಡಬಹುದಾದಂಥ ಸದಭಿರುಚಿಯ ಚಿತ್ರವಿದು ಎಂದು ಹೇಳಬಹುದು.



# ಮಿಸ್ಟರ್ ರಾಣಿ ಆದ ರಾಜನ ಪೀಕಲಾಟ

ಸಾಕಷ್ಟು ಸ್ಪರ್ಧೆ ಇರುವ ಈಗಿನ ಕಾಲದಲ್ಲಿ ಜನ ಇಷ್ಟಪಡುವಂಥ ಚಿತ್ರ ನಿರ್ಮಿಸಬೇಕೆಂದರೆ ಆ ಚಿತ್ರತಂಡ ಹಗಲಿರುಳು ಶ್ರಮವಹಿಸಬೇಕಾಗುತ್ತದೆ. ಅಂಥಾ ಶ್ರಮದ –ಲವಾಗಿ ಮೂಡಿಬಂದಿರುವ ಮತ್ತೊಂದು ಚಿತ್ರವೇ ಈವಾರ ತೆರೆಕಂಡಿರುವ ಮಿಸ್ಟರ್ ರಾಣಿ. ಯುವ ನಿರ್ದೇಶಕ ಮಧುಚಂದ್ರ ವಿಶೇಷ ಕಾನ್ಸೆಪ್ಟ್ ಇಟ್ಟುಕೊಂಡು ಈ ಸಿನಿಮಾ ನಿರೂಪಿಸಿದ್ದಾರೆ, ಸಿನಿಮಾರಂಗದಲ್ಲಿ ತಾನೊಬ್ಬ ಹೀರೋ ಆಗಬೇಕೆಂದು ಕನಸು ಕಟ್ಟಿಕೊಂಡಿದ್ದ ಯುವಕನೊಬ್ಬ ಸಂದರ್ಭಗಳಿಗೆ ಸಿಕ್ಕು ಆಕಸ್ಮಿಕವಾಗಿ ಹೀರೋಯಿನ್ ಆಗಿಬಿಡ್ತಾನೆ, ಅದೇ ಚಿತ್ರದ ಕಾನ್ಸೆಪ್ಟ್, ಕಾಲೇಜಿನಲ್ಲಿದ್ದಾಗ ಮಾಡಿದ್ದ ಸ್ಕಿಟ್‌ವೊಂದರಲ್ಲಿ ರಾಜ ರಾಣಿಯ ವೇಶ ಹಾಕಿರುತ್ತಾನೆ. ಎಷ್ಟೋ ದಿನಗಳ ನಂತರ ಅದರ ವಿಡಿಯೋವನ್ನು ಯಾರೋ ಒಬ್ಬರು ಸೋಷಿಯಲ್ ಮೀಡಿಯಾದಲ್ಲಿ ಬಿಟ್ಟಿರುತ್ತಾರೆ, ಅದು ಸಖತ ವೈರಲ್ ಆಗುತ್ತದೆ. ಅದನ್ನು ನೋಡಿದ ಸಹಾಯಕ ನಿರ್ದೇಶಕನೊಬ್ಬ ಅದು ಹುಡುಗಿಯೇ ಅಂತ ತಿಳಿದು ನಾಯಕಿಯ ಗೆಳತಿಯ ಪಾತ್ರ ಮಾಡಲು ಕರೆಯುತ್ತಾನೆ, ಹೇಗೋ ಒಂದು ಪಾತ್ರ ಸಿಕ್ಕರೆ ಸಾಕೆಂದು ಗೆಳೆಯನ ಒತ್ತಾಯದ ಮೇರೆಗೆ ರಾಜ ಮತ್ತೊಮ್ಮೆ ರಾಜಕುಮಾರಿಯಂತೆ ಮೇಕಪ್ ಮಾಡಿಕೊಂಡು ಹೋಗುತ್ತಾನೆ. ಈತ ಹುಡುಗಿಯಲ್ಲ ಎಂದು ಸ್ವತ: ಹೆತ್ತ ತಂದೆಯೇ ಕಂಡುಹಿಡಿಯದ ಹಾಗೆ ರಾಜ ಒಬ್ಬ ಸುದರ ಹೆಣ್ಣಾಗಿ ಚೇಂಜೋವರ್ ಆಗುತ್ತಾನೆ, ಚಿಕ್ಕ ಪಾತ್ರವಲ್ಲ ಎಂದು ಒತ್ತಾಯದ ಮೇರೆಗೆ ಒಪ್ಪಿದ ರಾಜ, ಆ ಚಿತ್ರದ ನಾಯಕಿಯ ಎಡವಟ್ಟಿನಿಂದ ತಾನೇ ಹೀರೋಯಿನ್ ಆಗುವ ಸಂದರ್ಭವೂ ಬಂದೊದಗುತ್ತದೆ, ರಾಣಿ ದೊಡ್ಡ ಸ್ಟಾರಿಣಿ ಕೂಡ ಆಗುತ್ತಾಳೆ, ಮುಂದೆ ರಾಜ ಹೆಣ್ಣಿನ ವೇಶದಲ್ಲಿ ಏನೆಲ್ಲ ಕ್ಲಿಷ್ಟಕರ ಸಂದರ್ಭಗಳನ್ನು ಎದುರಿಸಬೇಕಾಗುತ್ತದೆ, ಅದೆರಲ್ಲದರಿಂದ ಬಚಾವಾದ ರಾಜನಿಗಿದ್ದ ತಾನೊಬ್ಬ ನಾಯಕನಾಗಿ ಚಿತ್ರರಂಗದಲ್ಲಿ ಬೆಳೆಯಬೇಕೆಂಬ ಆಸೆ ಏನಾಯ್ತು, ರಾಜ ಕೊನೆಯವರೆಗೆ ರಾಣಿಯಾಗೇ ಉಳಿಯಬೇಕಾಯ್ತಾ. ಹೆಣ್ಣಿನ ವೇಶ ಆತನನ್ನು ಏನೇನೆಲ್ಲ ಸಂಕಷ್ಟಗಳಿಗೆ ಸಿಕ್ಕಿ ಹಾಕಿಕೊಳ್ಳುವಂತೆ ಮಾಡಿತು ಎಂಬುದನ್ನು ನಿರ್ದೇಶಕ ಮಧು ಚಂದ್ರ ಅವರು ಹಾಸ್ಯ ಮಿಶ್ರಿತವಾಗಿ ಎಲ್ಲೂ ಬೋರಾಗದಂತೆ ಹೇಳಿಕೊಂಡು ಹೋಗಿದ್ದಾರೆ.



Vol. 40 No. 36 Edited, Printed, Published & Owned by M. RAHUL, Printed by him at Shri Omkar Printers, # 4/1, Mahimappa Industrial Estate, Near PIA Bhavan, 100ft Road, Jalahalli Cross, Chokkasandra, T. Dasarahalli Post, BANGALORE-560 057. ☎ 080-23588510, 9513892666
Email: policenewsreporter@gmail.com